ಕರ್ನಾಟಕ ವಿಧಾನಸಭೆ

ಶುಕ್ರವಾರ 5ನೇ ಮಾರ್ಚ್ 2010ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತ್ತು.

ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು.

1. ಆಯವ್ಯಯ ಮಂಡನೆ :

2010–11ನೇ ಸಾಲಿನ ಆಯವ್ಯಯ ಅಂದಾಜು ಮಂಡನೆ :

ಅಧ್ಯಕ್ಷರು : ಆಯವ್ಯಯ ಮಂಡನೆ, ಶ್ರೀ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಯವರು, 2010–11ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ,

ಸನ್ಮಾನ್ಯ ಸಭಾಧ್ಯಕ್ಷರೇ,

1. ಕನ್ನಡಿಗರ ತಾಯಿ ಭುವನೇಶ್ವರಿಯ ಕೃಪೆಯಿಂದ ಹಾಗೂ ಕರ್ನಾಟಕದ ಜನತೆಯ ಆಶೀರ್ವಾದದಿಂದ ಸತತವಾಗಿ ಐದನೆಯ ಬಾರಿಗೆ ಕರ್ನಾಟಕ ಸರ್ಕಾರದ ಮುಂಗಡ ಪತ್ರವನ್ನು ಈ ಸದನದ ಮುಂದೆ ಮಂಡಿಸಲು ಹರ್ಷಿಸುತ್ತೇನೆ. ಕರ್ನಾಟಕದ ಜನತೆಯ ಆಶೋತ್ತರಗಳಿಗೆ ಸ್ಪಂದಿಸುತ್ತಾ ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು 2010–11ನೆಯ ಸಾಲಿನ ಈ ಮುಂಗಡ ಪತ್ರದ ಕಾರ್ಯಕ್ರಮಗಳು ಸಾಧನವಾಗುವುದೆಂದು ಭಾವಿಸುತ್ತೇನೆ.

2. 'ಅರ್ಥಸ್ಯ ಮೂಲಂ ಉತ್ಥಾನಂ' ಎಂಬ ಚಾಣಕ್ಯ ನೀತಿಯ ಸೂತ್ರವಾಕ್ಯವು ಆರ್ಥಿಕ ಅಭಿವೃದ್ಧಿಯ ಸಾಧನೆಗೆ ಆದ್ಯತೆ ನೀಡುವ ಅಗತ್ಯವನ್ನು ಸೂಚಿಸುತ್ತದೆ. ಅಭಿವೃದ್ಧಿಯೇ ಆಡಳಿತದ ಮೂಲಮಂತ್ರವೆಂಬ ತತ್ವವನ್ನು ಆಧರಿಸಿ ಕಳೆದ ನಾಲ್ಕು ಮುಂಗಡ ಪತ್ರಗಳಲ್ಲಿ ರಾಜ್ಯದ ಅಭಿವೃದ್ಧಿಯ ಸಾಧನೆಗೆ ಹಲವು ಕಾರ್ಯಕ್ರಮಗಳನ್ನು ನಾನು ಪ್ರಕಟಿಸಿರುತ್ತೇನೆ. ನಾನು ನಮ್ಮ ನಾಡಿನ ನೇಗಿಲಯೋಗಿಗಳ ಹೆಸರಿನಲ್ಲಿ ಪ್ರಮಾಣ

ವಚನ ಸ್ವೀಕರಿಸಿದ್ದೇನೆ. ನಮ್ಮ ಸರ್ಕಾರವು ರಾಷ್ಟ್ರಕವಿ ಕುವೆಂಪುರವರ ನೇಗಿಲ ಯೋಗಿಯ ಹಾಡನ್ನು ನಾಡಗೀತೆಯ ಮಟ್ಟಕ್ಕೆ ಏರಿಸಿದೆ. ರೈತರ ಏಳಿಗೆಗಾಗಿ ಪ್ರತಿಯೊಂದು ಮುಂಗಡ ಪತ್ರದಲ್ಲಿಯೂ ಅಗತ್ಯ ಆದ್ಯತೆಯನ್ನು ನೀಡುತ್ತಾ ಬಂದಿದೆ. 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬ ಮಾತು ಕೇವಲ ಘೋಷಣೆಯಾಗಿ ಉಳಿಯದಂತೆ ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಸಮೃದ್ಧ ಸಮಾಜದ ವ್ಯವಸ್ಥೆಯನ್ನು ರೂಪಿಸಲು ದುರ್ಬಲವರ್ಗಗಳ, ಹಿಂದುಳಿದವರ, ಅಲ್ಪಸಂಖ್ಯಾತರ ಹಾಗೂ ಮಹಿಳೆಯರ ಏಳಿಗೆಗೆ ವಿಶೇಷ ಗಮನ ನೀಡಿದ್ದೇವೆ. ಮುಂಬರುವ ದಶಕಗಳಲ್ಲಿ ರಾಜ್ಯದ ಜನತೆಯ ಭವಿಷ್ಯವು ಉಜ್ವಲವಾಗಿ ಬೆಳಗಲು ಸಹಾಯವಾಗುವ ನಿಟ್ಟಿನಲ್ಲಿ ಶಿಕ್ಷಣ, ವಿಜ್ಞಾನ ಹಾಗೂ ತಂತ್ರಜ್ಞಾನಗಳ ಬೆಳವಣಿಗೆಗೆ ಆದ್ಯತೆಯನ್ನು ನೀಡುತ್ತಾ ಬಂದಿದ್ದೇವೆ. ಸಮಾಜದ ಎಲ್ಲಾ ವರ್ಗಗಳ ಮತ್ತು ರಾಜ್ಯದ ಎಲ್ಲ ಭಾಗಗಳ ಸರ್ವತೋಮುಖ ಏಳಿಗೆಯನ್ನು ಸಾಧಿಸುವ ದಿಸೆಯಲ್ಲಿ ನಮ್ಮ ಪ್ರಯತ್ನವು ಸಾಗಿದೆ.

3. ಈ ಹಿನ್ನೆಲೆಯಲ್ಲಿ 2010-11ನೆಯ ಮುಂಗಡ ಪತ್ರದ ಪ್ರಸ್ತಾವನೆಗಳನ್ನು ಸಾದರಪಡಿಸುವ ಮುನ್ನ ಕಳೆದ ವರ್ಷದಲ್ಲಿ ನಮ್ಮ ರಾಜ್ಯವು ಎದುರಿಸಿದ ಸಮಸ್ಯೆ-ಸವಾಲುಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆಂದು ಭಾವಿಸುತ್ತೇನೆ.

ಬರ ಹಾಗೂ ನೆರೆಯಿಂದ ಹಾನಿ

4. 2009-10ರ ಮೊದಲ ಆರು ತಿಂಗಳಲ್ಲಿ ರಾಜ್ಯದ ಹಲವಾರು ಭಾಗಗಳಲ್ಲಿ ಅನಾವೃಷ್ಟಿಯಿಂದಾಗಿ ರಾಜ್ಯದ ರೈತರಿಗೆ ಮುಂಗಾರು ಬೆಳೆಯಲ್ಲಿ ಗಣನೀಯವಾದ ನಷ್ಟವಾಗಿರುತ್ತದೆ. ಇದರಿಂದ ರಾಜ್ಯದ 86 ತಾಲ್ಲೂಕುಗಳನ್ನು ಸರ್ಕಾರವು ಬರಪೀಡಿತ ಪ್ರದೇಶಗಳೆಂದು ಘೋಷಿಸಿ ತುರ್ತು ಪರಿಹಾರ ಕಾಮಗಾರಿಗಳನ್ನು ಕೈಗೊಂಡು ರೂ.206 ಕೋಟಿ ವೆಚ್ಚ ಮಾಡಬೇಕಾಯಿತು.

5. ಈ ಅಭಾವ ಪರಿಸ್ಥಿತಿಯ ಬೆನ್ನಿನಲ್ಲಿಯೇ ಸೆಪ್ಟಂಬರ್ 2009ರ ಕೊನೆಯ ಭಾಗದಲ್ಲಿ ಮತ್ತು ಅಕ್ಟೋಬರ್ ತಿಂಗಳ ಮೊದಲ ವಾರದಲ್ಲಿ ರಾಜ್ಯದ 15 ಜಿಲ್ಲೆಗಳಲ್ಲಿ ಹಿಂದೆಂದೂ ಕಂಡರಿಯದ ಪ್ರಮಾಣದಲ್ಲಿ ಅತಿವೃಷ್ಟಿ ಸಂಭವಿಸಿ ಸುಮಾರು 4300 ಗ್ರಾಮಗಳಲ್ಲಿ ವ್ಯಾಪಕವಾದ ಅನಾಹುತವನ್ನು ಉಂಟು ಮಾಡಿತು. ಈ ಸಂದರ್ಭದಲ್ಲಿ ಅತಿವೃಷ್ಟಿ ಹಾಗೂ ಪ್ರವಾಹಗಳ

ದೆಸೆಯಿಂದ ಒಟ್ಟು ಸುಮಾರು 6.55 ಲಕ್ಷ ಮನೆಗಳು ಕುಸಿದು 180 ಲಕ್ಷ ಜನರು ನಿರಾಶ್ರಿತರಾದರು. ಸುಮಾರು 229 ಜನರು ಹಾಗೂ ಸಹಸ್ರಾರು ಜಾನುವಾರುಗಳು ಪ್ರವಾಹದಲ್ಲಿ ಅಥವಾ ಮನೆ ಕುಸಿತದಲ್ಲಿ ಸಿಕ್ಕಿ ಸಾವಿಗೀಡಾದರು. ಸುಮಾರು 22 ಲಕ್ಷ ಹೆಕ್ಟೇರುಗಳಲ್ಲಿ 3120 ಕೋಟಿಗೂ ಮೀರಿದ ಬೆಳೆಯ ನಷ್ಟ ಸಂಭವಿಸಿತು.

ಒಲೆಹತ್ತಿ ಉರಿದರೆ ನಿಲಬಹುದಲ್ಲದೆ
ಧರೆಹತ್ತಿ ಉರಿದರೆ ನಿಲಬಹುದೇ?

– ಬಸವಣ್ಣನವರು

ಬರ ಮತ್ತು ಪ್ರವಾಹಗಳಂತಹ ಪ್ರಕೃತಿ ವಿಕೋಪಕ್ಕೆ ಸಿಲುಕಿದವರ ಪರಿಸ್ಥಿತಿ ಶೋಚನೀಯ. ಬಸವಣ್ಣನವರ ಈ ವಚನಗಳು ಬರ ಹಾಗೂ ನೆರೆ ಸಂತ್ರಸ್ತರ ನೋವಿಗೆ ಹಿಡಿದ ಕೈಗನ್ನಡಿ.

6. ಇಂತಹ ವಿಷಮ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರವು ತನ್ನ ಆಡಳಿತಯಂತ್ರದ ಪ್ರಯತ್ನದಿಂದ ಮತ್ತು ಕೇಂದ್ರ ಸರ್ಕಾರದ ಸಶಸ್ತ್ರ ಪಡೆಗಳ ಸಹಾಯದಿಂದ ನೆರೆಯಲ್ಲಿ ಸಿಕ್ಕಿದ ಜನ ಜಾನುವಾರುಗಳನ್ನು ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ದುದಲ್ಲದೆ, ತಾತ್ಕಾಲಿಕ ಆಶ್ರಯವನ್ನು ಸಹ ಕಲ್ಪಿಸಿತು. ನೂರಾರು ಗಂಜಿ ಕೇಂದ್ರಗಳನ್ನು ಸ್ಥಾಪಿಸಿ ನೆರೆ ಸಂತ್ರಸ್ತರಿಗೆ ಸಕಾಲದಲ್ಲಿ ಸಹಾಯ ಮಾಡಲಾಯಿತು. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ರೋಗರುಜಿನಗಳು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಯಿತು. ಮಳೆ–ಪ್ರವಾಹಗಳಿಂದ ಮನೆ ಮಾರುಗಳನ್ನು ಕಳೆದುಕೊಂಡ ಜನರಿಗೆ ತಾತ್ಕಾಲಿಕವಾಗಿ ನಗದು ಪರಿಹಾರ ನೀಡಿ ತಮ್ಮ ಬದುಕನ್ನು ಪುನರ್‌ನಿರ್ಮಿಸಿಕೊಳ್ಳಲು ಸಹಾಯ ಮಾಡಲಾಯಿತು.

7. ಸರ್ಕಾರದ ಮನವಿಗೆ ಓಗೊಟ್ಟು ನೂರಾರು ಔದ್ಯಮಿಕ ಸಂಸ್ಥೆಗಳು, ಧಾರ್ಮಿಕ ಸಂಘಟನೆಗಳು, ಮತ್ತು ಹಲವು ಸ್ವಯಂ ಸೇವಾ ಸಂಸ್ಥೆಗಳು ನೆರೆಯಿಂದ ನಿರಾಶ್ರಿತರಾದ ಸುಮಾರು 75,000 ಕುಟುಂಬಗಳಿಗೆ 'ಆಸರೆ' ನೀಡಲು 75,000 ಮನೆಗಳನ್ನು ನಿರ್ಮಿಸಲು ಮುಂದೆ ಬಂದಿದ್ದಾರೆ. ಈ ಆಸರೆ ಯೋಜನೆಯಲ್ಲಿ 305 ಹಳ್ಳಿಗಳಲ್ಲಿ ಮತ್ತು ನೂತನ ಬಡಾವಣೆಗಳಲ್ಲಿ ಪ್ರತಿ ಮನೆಗೆ ಕನಿಷ್ಟ ರೂ.1 ಲಕ್ಷ ವೆಚ್ಚ ಮಾಡಲಿದ್ದಾರೆ. ನೆರೆಯಿಂದ ನೊಂದ ಕುಟುಂಬಗಳ ನೋವಿಗೆ ಸ್ಪಂದಿಸಿದ ಸಹಸ್ರಾರು

ಸಾರ್ವಜನಿಕರಿಂದ ಸರ್ಕಾರವು ರೂ.317.9 ಕೋಟಿಗೂ ಮೀರಿ ವಂತಿಗೆಯನ್ನು ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳಿಗಾಗಿ ಸಂಗ್ರಹಿಸಿರುತ್ತದೆ. ರಾಜ್ಯ ಸರ್ಕಾರದ ನೌಕರರು ಹಾಗೂ ಪಿಂಚಣಿದಾರರು ಸ್ವಯಂಪ್ರೇರಿತರಾಗಿ ನೆರೆಯಿಂದ ನೊಂದವರಿಗೆ ಸಹಾಯಮಾಡಲು ಸುಮಾರು ರೂ.33.7 ಕೋಟಿ ವಂತಿಗೆ ನೀಡಿರುವುದು ಶ್ಲಾಘನೀಯವಾಗಿದೆ.

8. ಪದೇ ಪದೇ ನೆರೆಯ ಬಾಧೆಗೆ ಒಳಗಾಗುವ 305 ಗ್ರಾಮಗಳನ್ನು ಸ್ಥಳಾಂತರಿಸಲು ನಿರ್ಧರಿಸಿ ಸೂಕ್ತ ಸ್ಥಳದಲ್ಲಿ ಹೊಸ ಗ್ರಾಮಗಳು ಮತ್ತು ಬಡಾವಣೆಗಳನ್ನು ನಿರ್ಮಿಸಲು ಸರ್ಕಾರವು ಅಗತ್ಯ ಭೂಮಿಯನ್ನು ಒದಗಿಸಿ ಕುಡಿಯುವ ನೀರು, ವಿದ್ಯುತ್ ಸಂಪರ್ಕ, ರಸ್ತೆ ಹಾಗೂ ಚರಂಡಿ ಮುಂತಾದುವುಗಳ ವ್ಯವಸ್ಥೆಯನ್ನು ಕಲ್ಪಿಸುತ್ತಿದೆ.

9. ಇಂತಹ ಅಭೂತಪೂರ್ವ ಪ್ರಮಾಣದ ಪ್ರಕೃತಿ ವಿಕೋಪದ ಪರಿಸ್ಥಿತಿಯ ನಿರ್ವಹಣೆಯಲ್ಲಿ ಕೇಂದ್ರ ಸರ್ಕಾರದ ವಿವಿಧ ಸಂಸ್ಥೆಗಳು ಸಹಾಯ ಮಾಡಿರುವುದಲ್ಲದೆ, ಮಾನ್ಯ ಪ್ರಧಾನ ಮಂತ್ರಿಯವರು, ಹಾಗೂ ಕೇಂದ್ರದ ಇತರ ಪ್ರಮುಖರು ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ಅವಲೋಕಿಸಿ ರಾಜ್ಯ ಸರ್ಕಾರದೊಡನೆ ತಮ್ಮ ಸಹಾನುಭೂತಿಯನ್ನು ಹಂಚಿಕೊಂಡಿದ್ದಾರೆ. ಕೇಂದ್ರದ ಅಧ್ಯಯನ ತಂಡದ ವರದಿಯನ್ನು ಪಡೆದು ನೆರೆ ಸಂತ್ರಸ್ತರಿಗೆ ಪರಿಹಾರ ನೀಡುವ ಸಲುವಾಗಿ ರಾಷ್ಟ್ರೀಯ ವಿಪತ್ತು ನಿಧಿಯಿಂದ ರೂ.1457 ಕೋಟಿ ನೆರವನ್ನು ಸಹ ಕೇಂದ್ರ ಸರ್ಕಾರದವರು ನೀಡಿದ್ದು, ಇದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರವು ಈವರೆಗೆ ರೂ.1879 ಕೋಟಿ ವಿವಿಧ ಜಿಲ್ಲೆಗಳಿಗೆ ಬಿಡುಗಡೆ ಮಾಡಿರುತ್ತದೆ. **ರಾಜ್ಯವು ಎದುರಿಸಿದ ಸಂಕಷ್ಟದ ಸಮಯದಲ್ಲಿ ಸಕಾಲಿಕ ಸಹಾಯವನ್ನು ಒದಗಿಸಿದ ಕೇಂದ್ರ ಸರ್ಕಾರಕ್ಕೆ ಕರ್ನಾಟಕದ ಜನತೆಯ ಪರವಾಗಿ ಹಾಗೂ ರಾಜ್ಯ ಸರ್ಕಾರದ ಪರವಾಗಿ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸಲು ಇಚ್ಛಿಸುತ್ತೇನೆ.** ನೆರೆ ಹಾವಳಿಯಿಂದ ಬಾಧಿತರಾದ ಗ್ರಾಮಗಳ ಶಾಶ್ವತ ಪುನರ್ವಸತಿಗಾಗಿ ವಿಶೇಷ ಅನುದಾನವನ್ನು ನೀಡಲು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಮನವಿ ಸಲ್ಲಿಸಲಾಗಿದ್ದು, ಕೇಂದ್ರವು ಈ ವಿಷಯದಲ್ಲಿ ಸಹಾನುಭೂತಿಯಿಂದ ಅಗತ್ಯ ನೆರವನ್ನು ಒದಗಿಸುವುದೆಂದು ಆಶಿಸುತ್ತೇನೆ.

ಆರ್ಥಿಕ ಪರಿಸ್ಥಿತಿಯ ಹಿನ್ನೆಲೆ

10. 2009–10ನೆಯ ಸಾಲಿನ ಮುಂಗಡ ಪತ್ರವನ್ನು ಫೆಬ್ರವರಿ 2009ರಲ್ಲಿ ಮಂಡಿಸುವ ಸಂದರ್ಭದಲ್ಲಿ ವಿಶ್ವದಾದ್ಯಂತ ವ್ಯಾಪಕವಾಗಿದ್ದ ಪ್ರತಿಕೂಲ ಆರ್ಥಿಕ ಪರಿಸ್ಥಿತಿಯು ನಮ್ಮ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆಯೂ ತನ್ನ ಪರಿಣಾಮವನ್ನು ಬೀರಿತ್ತು. ಕರ್ನಾಟಕದಲ್ಲಿಯೂ ಸಹ ಔದ್ಯಮಿಕ ರಂಗದಲ್ಲಿ ಹಾಗೂ ಸೇವಾ ಕ್ಷೇತ್ರಗಳಲ್ಲಿ, ಅದರಲ್ಲಿಯೂ ವಿಶೇಷವಾಗಿ ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ, ಆರ್ಥಿಕ ಹಿಂಜರಿತದ ಭೀತಿ ಮೂಡಿತ್ತು. ಇದರ ಪರಿಣಾಮವಾಗಿ ಅಕ್ಟೋಬರ್ 2008ರಿಂದ ಮೊದಲುಗೊಂಡು 2009ರ ಮೊದಲ ಆರು ತಿಂಗಳುಗಳಲ್ಲಿ ರಾಜ್ಯದ ತೆರಿಗೆ ಸಂಪನ್ಮೂಲಗಳ ಸಂಗ್ರಹದಲ್ಲಿ ಬೆಳವಣಿಗೆಯು ಸ್ಥಗಿತಗೊಂಡಿತ್ತು. 2009–10ರ ಸಾಲಿನ ಉತ್ತರಾರ್ಧದಲ್ಲಿ ರಾಜ್ಯದ ಅರ್ಥ ವ್ಯವಸ್ಥೆಯಲ್ಲಿ ಗಣನೀಯ ಚೇತರಿಕೆ ಕಂಡುಬಂದಿದ್ದು, ಮುಂಗಡ ಪತ್ರದಲ್ಲಿ ವ್ಯಕ್ತಪಡಿಸಿದ ಆಶೋತ್ತರಗಳನ್ನು ಬಹುಮಟ್ಟಿಗೆ ಈಡೇರಿಸಲು ರಾಜ್ಯ ಸರ್ಕಾರವು ತನ್ನ ಪ್ರಯತ್ನವನ್ನು ಮುಂದುವರಿಸಿದೆ.

11. 2010–11ನೆಯ ಸಾಲಿನಲ್ಲಿ ರಾಜ್ಯದ ಹಾಗೂ ರಾಷ್ಟ್ರದ ಅರ್ಥ ವ್ಯವಸ್ಥೆಯಲ್ಲಿ ಬೆಳವಣಿಗೆಯ ಚೇತರಿಕೆಯು ಸಧೃಢವಾಗಿರುವುದೆಂದು ಭಾವಿಸಲಾಗಿದೆ. 2008–09ರಲ್ಲಿ ಶೇ.6.7ರ ಪ್ರಮಾಣದಲ್ಲಿ ರಾಷ್ಟ್ರದ ಆರ್ಥಿಕ ಬೆಳವಣಿಗೆಯಾಗಿದ್ದು 2009–10ರಲ್ಲಿ ಸುಮಾರು ಶೇ.7.2 ರಿಂದ ಶೇ.7.5ರ ದರದಲ್ಲಿ ಬೆಳವಣಿಗೆಯನ್ನು ಸಾಧಿಸಬಹುದೆಂದು ಭಾರತೀಯ ರಿಸರ್ವ್ ಬ್ಯಾಂಕ್ ಮುಂತಾದ ಅಧಿಕೃತ ಮೂಲಗಳಿಂದ ಅಂದಾಜು ಮಾಡಲಾಗಿದೆ. ಕರ್ನಾಟಕ ರಾಜ್ಯದ ಅರ್ಥ ವ್ಯವಸ್ಥೆಯು 2008–09ರಲ್ಲಿ ಸ್ಥಿರ ಬೆಲೆಗಳಲ್ಲಿ ಶೇ.4.5ರಂತೆ ಮತ್ತು ಪ್ರಸ್ತುತ ಬೆಲೆಗಳಲ್ಲಿ ಶೇ.12.8ರಂತೆ ಬೆಳೆದಿರುವುದೆಂದು ಮತ್ತು 2009–10ರಲ್ಲಿ ಸ್ಥಿರ ಬೆಲೆಗಳಲ್ಲಿ ಶೇ.5.5ರಂತೆ ಮತ್ತು ಪ್ರಸ್ತುತ ಬೆಲೆಗಳಲ್ಲಿ ಶೇ.10.3ರಂತೆ ಬೆಳವಣಿಗೆಯನ್ನು ಸಾಧಿಸುವುದೆಂದು ಅಂದಾಜು ಮಾಡಲಾಗಿದೆ. ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ ಈ ಬೆಳವಣಿಗೆಯು ಸಮಾಧಾನಕರವೆನಿಸಿದರೂ, **ಕರ್ನಾಟಕದ ಅರ್ಥ ವ್ಯವಸ್ಥೆಯ ನೈಜ ಸಾಮರ್ಥ್ಯದ ದೃಷ್ಟಿಯಿಂದ ಇನ್ನೂ ಹೆಚ್ಚಿನ ವೇಗದಲ್ಲಿ ಬೆಳವಣಿಗೆಯನ್ನು ಸಾಧಿಸುವುದು ಅಗತ್ಯವಾಗಿದೆ.**

ರಾಜ್ಯ ಸರ್ಕಾರದ ಹಣಕಾಸಿನ ಪರಿಸ್ಥಿತಿ

12. ಕರ್ನಾಟಕದ ಹಣಕಾಸಿನ ಪರಿಸ್ಥಿತಿಯನ್ನು ಕೆಲವು ಆಯ್ದ ಮಾನದಂಡಗಳ ಬೆಳಕಿನಲ್ಲಿ ದೇಶದ ಇತರ ರಾಜ್ಯಗಳೊಡನೆ ಹೋಲಿಸಿದಲ್ಲಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯು ಉತ್ತಮವಾಗಿರುವ ಬಗ್ಗೆ ಮನವರಿಕೆಯಾಗುತ್ತದೆ. ರಾಜ್ಯದಲ್ಲಿ ಸಂಗ್ರಹವಾಗುತ್ತಿರುವ ತೆರಿಗೆ ಪ್ರಮಾಣವು ರಾಜ್ಯದ ಒಟ್ಟು ಆದಾಯದ (Gross State Domestic Product) ಶೇ.10ಕ್ಕಿಂತಲೂ ಹೆಚ್ಚಾಗಿದ್ದು ಇದು ಇಡೀ ದೇಶದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ್ದಾಗಿದೆ. ಈ ವಿಷಯದಲ್ಲಿ ಎಲ್ಲ ರಾಜ್ಯಗಳ ಸರಾಸರಿಯು ಶೇ.6ಕ್ಕಿಂತಲೂ ಕಡಿಮೆ ಇರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪ್ರಕಟಿಸಿದ ಅಂಕಿ ಅಂಶಗಳಿಂದ ಕಂಡುಬರುತ್ತದೆ.

13. ಕರ್ನಾಟಕವು 2004–05ರಿಂದ ಮೊದಲುಗೊಂಡು 2007–08 ರವರೆಗೆ ಪ್ರತಿ ವರ್ಷವೂ ತನ್ನ ಆಯವ್ಯಯದಲ್ಲಿ ವಿತ್ತೀಯ ಕೊರತೆಯನ್ನು ವಿತ್ತೀಯ ಹೊಣೆಗಾರಿಕೆ ಅಧಿನಿಯಮದಲ್ಲಿ ನಿಗದಿಪಡಿಸಿರುವಂತೆ ರಾಜ್ಯದ ಒಟ್ಟು ಆದಾಯದ ಶೇ.3ರ ಮಿತಿಯಲ್ಲಿಯೇ ಕಾಯ್ದುಕೊಂಡು ಬಂದಿದೆ. ಕೇಂದ್ರ ಸರಕಾರದ ಸೂಚನೆಯಂತೆ ಈ ಮಿತಿಯನ್ನು 2008–09ರಲ್ಲಿ ಶೇ.3.5ಕ್ಕೆ ಮತ್ತು 2009–10ಕ್ಕೆ ಅನ್ವಯಿಸುವಂತೆ ಶೇ.4ಕ್ಕೆ ಏರಿಸಲಾಗಿದ್ದು, ಈ ಮಿತಿಗೆ ಒಳಪಟ್ಟು ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನಿರ್ವಹಿಸಲಾಗಿದೆ. 2008–09ರ ರೂ.8732 ಕೋಟಿಗಳ ವಿತ್ತೀಯ ಕೊರತೆಯು ರಾಜ್ಯದ ಒಟ್ಟು ಆದಾಯದ ಶೇ.3.23 ರಷ್ಟಿದ್ದರೆ, 2009–10ರಲ್ಲಿ ವಿತ್ತೀಯ ಕೊರತೆಯು ರೂ.11,266 ಕೋಟಿ ಅಂದರೆ, ರಾಜ್ಯದ ಒಟ್ಟು ಆದಾಯದ ಶೇ.3.77 ರಷ್ಟಾಗುವುದೆಂದು ಅಂದಾಜು ಮಾಡಿದೆ. ಇದಲ್ಲದೆ, 2004–05ರಿಂದ ಮೊದಲುಗೊಂಡು ಪ್ರತಿ ವರ್ಷವೂ ತನ್ನ ರಾಜಸ್ವ ವೆಚ್ಚವನ್ನು ರಾಜಸ್ವ ಸ್ವೀಕೃತಿಗಳಿಗಿಂತಲೂ ಕಡಿಮೆ ಮಟ್ಟದಲ್ಲಿ ನಿರ್ವಹಿಸಿ ರಾಜಸ್ವ ಹೆಚ್ಚಳವನ್ನು (Revenue Surplus) ಸಾಧಿಸಲಾಗಿದೆ.

14. ರಾಜ್ಯದ ಒಟ್ಟು ಋಣಭಾರವು 2008–09ರ ಅಂತ್ಯದವೇಳೆಗೆ ರೂ.71,410 ಕೋಟಿ ಆಗಿದ್ದು ಇದು ರಾಜ್ಯದ ಒಟ್ಟು ವಾರ್ಷಿಕ ಆದಾಯದ ಶೇ.26.38 ರಷ್ಟು ಇರುತ್ತದೆ ಹಾಗೂ 2009–10ರ ಅಂತ್ಯಕ್ಕೆ ಇದು ರೂ.82,513 ಕೋಟಿ ಆಗುವುದೆಂದು ಅಂದಾಜು ಮಾಡಿದೆ. ರಾಷ್ಟ್ರದ ಎಲ್ಲ ರಾಜ್ಯಗಳ ಸರಾಸರಿ ಋಣಭಾರವು 2008–09ರಲ್ಲಿ ರಾಜ್ಯಗಳ ಆದಾಯದ

ಸುಮಾರು ಶೇ.33.7ರಷ್ಟು ಇದ್ದು, ಅದೇ ಸಾಲಿನ ನಮ್ಮ ರಾಜ್ಯದ ಋಣಭಾರವು ಈ ಸರಾಸರಿಗಿಂತ ಕಡಿಮೆ ಇರುವುದು ಕಂಡುಬರುತ್ತದೆ. ರಾಜ್ಯದ ಸಾಲಗಳ ಮೇಲಿನ ಬಡ್ಡಿಯ ಮರುಪಾವತಿಯು 2008–09ರಲ್ಲಿ ರೂ.4,532 ಕೋಟಿ ಆಗಿದ್ದು ಇದು ರಾಜ್ಯದ ಒಟ್ಟು ಆದಾಯದ ಶೇ.10.46 ರಷ್ಟು ಇದ್ದು, ಎಲ್ಲ ರಾಜ್ಯಗಳ ಸರಾಸರಿ ಶೇ.16.9ಕ್ಕೆ ಹೋಲಿಸಿದರೆ ಅತ್ಯಂತ ಕಡಿಮೆ ಇರುತ್ತದೆ. **2008–09 ಮತ್ತು 2009–10ರಲ್ಲಿ ರಾಷ್ಟ್ರದ ಹಾಗೂ ರಾಜ್ಯದ ಆರ್ಥಿಕ ವ್ಯವಸ್ಥೆಯು ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿದ ಸಂದರ್ಭದಲ್ಲಿಯೂ ಸಹ ನಮ್ಮ ರಾಜ್ಯದ ವಿತ್ತೀಯ ಶಿಸ್ತನ್ನು ಸರ್ಕಾರವು ಎಚ್ಚರಿಕೆಯಿಂದ ಕಾಪಾಡಿಕೊಂಡು ಬಂದಿರುವುದು ಗಮನಾರ್ಹವಾಗಿದೆ.**

ಹೊಸತೊಂದು ನಾಡ ಕಟ್ಟುವೆವು
ತಾಯಿ ಬೆನ್ತಟ್ಟಿ ಮುಂದೆ ಕಳಿಸು,
ಮುಂದಿಟ್ಟ ಹೆಜ್ಜೆ ಹಿಂದೆಗೆಯದಂತೆ
ನಡೆಯುವುದು ನಮಗೆ ಕಲಿಸು.

ನಮ್ಮದು ಸಮೃದ್ಧನಾಡು. ಕೌಶಲ್ಯಪೂರ್ಣ ಮಾನವ ಸಂಪನ್ಮೂಲಗಳ ಜೊತೆಗೆ ಯಥೇಚ್ಛ ಸಮೃದ್ಧ ನೈಸರ್ಗಿಕ ಸಂಪನ್ಮೂಲಗಳು ರಾಜ್ಯದಲ್ಲಿವೆ. ತಾಯಿ ಭುವನೇಶ್ವರಿಯ ಆಶೀರ್ವಾದದಿಂದ ಈ ಸಂಪನ್ಮೂಲಗಳನ್ನು ಯುಕ್ತ ರೀತಿಯಲ್ಲಿ ಬಳಸಿಕೊಂಡು ಹೊಸನಾಡ ಕಟ್ಟುವ ಮತ್ತು ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯದೆ ಪ್ರಗತಿ ಪಥದಲ್ಲಿ ಮುನ್ನಡೆಯುವ ಪಣತೊಟ್ಟಿದ್ದೇವೆ.

ಅರ್ಥನೀತಿಯ ಪಂಚಸೂತ್ರಗಳು

15. ರಾಜ್ಯದ ಅರ್ಥವ್ಯವಸ್ಥೆಯ ರಚನೆಯಲ್ಲಿ ಕಂಡುಬರುವ ಒಂದು ಪ್ರಮುಖವಾದ ಅಂಶವೆಂದರೆ, ಕೃಷಿ ಸಂಬಂಧಿತ ಚಟುವಟಿಕೆಗಳ ವಲಯದ ಆದಾಯವು 2008–09ರಲ್ಲಿ ಶೇ.18 ರಷ್ಟಿದ್ದು ಸುಮಾರು ಶೇ.58ರಷ್ಟು ಕೆಲಸಗಾರರು ಆ ಕ್ಷೇತ್ರದಲ್ಲಿ ನಿರತರಾಗಿದ್ದಾರೆ. ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳ ಆದಾಯವು ಕ್ರಮವಾಗಿ ಶೇ.29 ಮತ್ತು ಶೇ.53 ರಷ್ಟಿದ್ದು ಆ ಕ್ಷೇತ್ರಗಳಲ್ಲಿ ತೊಡಗಿರುವ ಕೆಲಸಗಾರರು ಕೇವಲ 41 ರಷ್ಟಿರುತ್ತಾರೆ. ಇದರ ಫಲಿತಾಂಶವಾಗಿ ಕೃಷಿ ಕ್ಷೇತ್ರದ ಕೆಲಸಗಾರರ ತಲಾ ಉತ್ಪಾದಕತೆಯು ರೂ.14,690 ರಷ್ಟಿದ್ದು ಇತರ ಕ್ಷೇತ್ರಗಳಿಗೆ ಹೋಲಿಸಿದಲ್ಲಿ ಅತ್ಯಂತ ಕಡಿಮೆ ಇರುತ್ತದೆ.

16. ಮೇಲಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಆರ್ಥಿಕ ನೀತಿಯು ಕೃಷಿ ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿಸಲು ಆದ್ಯ ಗಮನವನ್ನು ನೀಡಬೇಕಾಗಿದೆ. ಅಷ್ಟೇ ಮುಖ್ಯವಾಗಿ ಮುಂಬರುವ ವರ್ಷಗಳಲ್ಲಿ ನಮ್ಮ ಜನಸಂಖ್ಯೆಯ ಹೆಚ್ಚಿನ ಪ್ರಮಾಣವನ್ನು ಹೆಚ್ಚು ಉತ್ಪಾದಕತೆಯಿರುವ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ತೊಡಗಿಸಲು ನಾವು ಸಕ್ರಿಯವಾಗಿ ಪ್ರಯತ್ನಿಸಬೇಕಾಗಿದೆ. ಕೃಷಿ ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿಸಲು ನೀರಾವರಿಯ ವಿಸ್ತರಣೆ, ಸೂಕ್ತ ತಂತ್ರಜ್ಞಾನದ ಅಳವಡಿಕೆ, ಹೆಚ್ಚಿನ ಬಂಡವಾಳದ ಹೂಡಿಕೆ, ಮಾರುಕಟ್ಟೆ ವ್ಯವಸ್ಥೆಯ ಸುಧಾರಣೆ ಮುಂತಾದವುಗಳಿಗೆ ಗಮನ ನೀಡುವುದು ಅವಶ್ಯಕ. ಅದರಂತೆಯೇ ಕೈಗಾರಿಕೆ ಹಾಗೂ ಸೇವಾ ಕ್ಷೇತ್ರಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಅಗತ್ಯವಿರುವ ವಿದ್ಯುತ್ ಸರಬರಾಜು, ಕೈಗಾರಿಕಾ ಕ್ಷೇತ್ರಗಳ ಅಭಿವೃದ್ಧಿ, ರೈಲು ಮಾರ್ಗಗಳು, ರಸ್ತೆಗಳು ಹಾಗೂ ಬಂದರುಗಳ ಅಭಿವೃದ್ಧಿ ಮುಂತಾದ ಚಟುವಟಿಕೆಗಳಿಗೆ ಹೆಚ್ಚಿನ ಗಮನ ನೀಡಬೇಕಾಗಿದೆ.

17. ಮುಂಬರುವ ವರ್ಷಗಳಲ್ಲಿ ಕೃಷಿ ಸಂಬಂಧಿತ ಚಟುವಟಿಕೆಗಳನ್ನು ಹೆಚ್ಚು ವ್ಯವಸ್ಥಿತವಾಗಿ ಹಾಗೂ ವೈಜ್ಞಾನಿಕವಾಗಿ ನಡೆಸಲು ಮತ್ತು ಕೃಷಿಯೇತರ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳನ್ನು ಪಡೆಯಲು ರಾಜ್ಯದ ಯುವಜನತೆಗೆ ಸಮರ್ಪಕವಾದ ಶಿಕ್ಷಣ ಹಾಗೂ ತರಬೇತಿಗಳ ಅವಕಾಶಗಳನ್ನು ಕಲ್ಪಿಸಬೇಕು. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿರುವ ರೈತರ, ಕೂಲಿಕಾರರ, ಹಿಂದುಳಿದವರ, ದುರ್ಬಲ ವರ್ಗಗಳ ಮಕ್ಕಳಿಗೆ ಅದರಲ್ಲಿಯೂ ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣ ಒದಗಿಸಬೇಕು. ಈಗಾಗಲೇ ಶಿಕ್ಷಣ ಪಡೆದಿರುವ ಯುವಕ ಯುವತಿಯರಿಗೆ ಉತ್ತಮ ತರಬೇತಿಯ ಮೂಲಕ ಕೌಶಲ್ಯಗಳನ್ನು ಒದಗಿಸಬೇಕು. ಒಟ್ಟಾರೆ, ನಮ್ಮ ರಾಜ್ಯದ ಮಾನವ ಸಂಪನ್ಮೂಲಗಳ ಅಭಿವೃದ್ಧಿಗೆ ನಾವು ಎಲ್ಲಕ್ಕಿಂತಲೂ ಹೆಚ್ಚು ಆದ್ಯತೆ ನೀಡಬೇಕು.

18. ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಷ್ಟ್ರವು 'ಎಲ್ಲರನ್ನೊಳಗೊಂಡ ಅಭಿವೃದ್ಧಿ' (Inclusive Growth) ಎಂಬ ಧ್ಯೇಯವನ್ನು ಅಳವಡಿಸಿಕೊಂಡಿದೆ. 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬ ತತ್ವವೇ ಇದರ ತಳಹದಿ. ನಮ್ಮ ಸಮಾಜದ ಎಲ್ಲ ವರ್ಗಗಳಿಗೆ ನಮ್ಮ ಅಭಿವೃದ್ಧಿಯಲ್ಲಿ ಪಾಲುಗೊಳ್ಳುವ ಅವಕಾಶ-ಸಾಮರ್ಥ್ಯ

ಗಳು ದೊರೆಯಬೇಕು. ಅದಕ್ಕಾಗಿ ದುರ್ಬಲರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು ಮುಂತಾದವರ ಸಬಲೀಕರಣಕ್ಕೆ ವಿಶೇಷ ಪ್ರಯತ್ನ ನಡೆಯಬೇಕು. ರಾಜ್ಯದಲ್ಲಿ ಹಿಂದುಳಿದ ಪ್ರದೇಶಗಳನ್ನು ಗುರುತಿಸಲಾಗಿದ್ದು ಆ ಪ್ರದೇಶಗಳ ತೀವ್ರ ಅಭಿವೃದ್ಧಿಗೆ ಗಮನ ನೀಡಬೇಕು.

19. ರಾಜ್ಯದ ಅರ್ಥವ್ಯವಸ್ಥೆಯ ಭವಿಷ್ಯದ ಬೆಳವಣಿಗೆಯ ವೇಗವನ್ನು ಹೆಚ್ಚಿಸಲು ಈ ವಿಶ್ಲೇಷಣೆಯು ನಮ್ಮ ಚಿಂತನೆಯ ತಳಹದಿಯೆಂದು ಭಾವಿಸುತ್ತೇನೆ.

ನಮ್ಮ ಯೋಜನೆಗಳನ್ನು ರೂಪಿಸುವಲ್ಲಿ ಕೃಷಿಯ ಪೋಷಣೆ, ಕೈಗಾರಿಕೆಗಳ ಬೆಳವಣಿಗೆ, ಮಾನವ ಸಂಪನ್ಮೂಲಗಳ ಅಭಿವೃದ್ಧಿ, ದುರ್ಬಲವರ್ಗಗಳ ಸಬಲೀಕರಣ ಮತ್ತು ಹಿಂದುಳಿದ ಪ್ರದೇಶಗಳ ಪ್ರಗತಿ ಇವುಗಳನ್ನು ಮರೆಯುವಂತಿಲ್ಲ. ಇವು ನಮ್ಮ ಅರ್ಥ ನೀತಿಯ ಪಂಚಸೂತ್ರಗಳು.

ಸಮೃದ್ಧ ಕರ್ನಾಟಕದ ಪರಿಕಲ್ಪನೆ

20. ಕಳೆದ ಸಾಲಿನಲ್ಲಿ ರಾಜ್ಯ ಸರ್ಕಾರವು ಸಿದ್ಧಪಡಿಸಿ ಅಂಗೀಕರಿಸಿರುವ 'ಕರ್ನಾಟಕ – ಅಭಿವೃದ್ಧಿಯ ಮುನ್ನೋಟ' (Vision Document) ದಲ್ಲಿ ರಾಜ್ಯವನ್ನು ಸಮೃದ್ಧ ಕರ್ನಾಟಕವಾಗಿ ಪರಿವರ್ತಿಸುವ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳಲಾಗಿದೆ. ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಈ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಈ ಕೆಳಕಂಡ ನಿರ್ದಿಷ್ಟ ಅಂಶಗಳುಳ್ಳ ಅಭಿವೃದ್ಧಿ ನೀತಿಯನ್ನು ಅನುಸರಿಸಬೇಕೆಂದು ಉದ್ದೇಶಿಸಿದೆ.

- **ಒಣಭೂಮಿಯಲ್ಲಿ ಜಲಪೂರಣ:** ರಾಜ್ಯದ ಕೃಷಿ ಕ್ಷೇತ್ರದಲ್ಲಿ 2ನೆಯ ಹಸಿರು ಕ್ರಾಂತಿಯನ್ನು ಉಂಟು ಮಾಡಲು ಒಣ ಭೂಮಿ ಪ್ರದೇಶಗಳಲ್ಲಿ ಕೃಷಿಯ ಉತ್ಪಾದಕತೆಯನ್ನು ಹೆಚ್ಚಿಸಬೇಕಾಗಿದೆ. ಇದಕ್ಕಾಗಿ ರಾಜ್ಯದಲ್ಲಿ ಪ್ರತಿ ವರ್ಷ 2 ಲಕ್ಷ ಚೆಕ್ ಡ್ಯಾಂ, ಬಾಂದಾರ, ಮುಂತಾದವುಗಳ ರೂಪದಲ್ಲಿ ಜಲಪೂರಣ ಸ್ಥಾವರಗಳನ್ನು ನಿರ್ಮಿಸಲಾಗುವುದು.
- **ನೀರಾವರಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ:** ಕರ್ನಾಟಕದ ನೀರಾವರಿ ಪ್ರದೇಶವನ್ನು ಮುಂದಿನ ಮೂರು ವರ್ಷಗಳಲ್ಲಿ 2.11 ಲಕ್ಷ ಹೆಕ್ಟೇರಿನಷ್ಟು ವಿಸ್ತರಿಸಲು ಕೃಷ್ಣಾಕೊಳ್ಳದ ಯೋಜನೆಗಳನ್ನು ಪೂರ್ಣಗೊಳಿಸುವುದಲ್ಲದೆ, ಭದ್ರಾ ಮೇಲ್ದಂಡೆ ಮುಂತಾದ

ಯೋಜನೆಗಳನ್ನು ತ್ವರಿತಗೊಳಿಸಲಾಗುವುದು. ಅಲ್ಲದೆ, ಸಣ್ಣ ಕೆರೆಗಳ ಜೀರ್ಣೋದ್ಧಾರ ಮತ್ತು ಸಣ್ಣ ನೀರಾವರಿ ಕಾಮಗಾರಿಗಳಿಗೆ ವಿಶೇಷ ಆದ್ಯತೆ ನೀಡಲಾಗುವುದು.

- **ಕೃಷಿ ಮಾರುಕಟ್ಟೆಗಳ ಆಧುನೀಕರಣ:** ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಮಾರಾಟಕ್ಕೆ ವೈಜ್ಞಾನಿಕವಾದ ವ್ಯವಸ್ಥೆಯನ್ನು ಕಲ್ಪಿಸಲು ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೃಷಿ ಉತ್ಪನ್ನಗಳ ಎಕ್ಸ್‌ಛೇಂಜ್‌ಗಳನ್ನು ನಿರ್ಮಿಸಲಾಗುವುದು.
- **ಸುವರ್ಣ ಗ್ರಾಮೋದಯದಿಂದ ಗ್ರಾಮಾಭಿವೃದ್ಧಿ:** ಗ್ರಾಮಾಂತರ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಲು ಸುವರ್ಣ ಗ್ರಾಮೋದಯ ಯೋಜನೆಗೆ ಪ್ರತಿ ವರ್ಷ ರೂ.1000 ಕೋಟಿ ವೆಚ್ಚ ಮಾಡಿ 1000 ಗ್ರಾಮಗಳನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಲು ಸಂಕಲ್ಪಿಸಿದೆ.
- **ಸುಶಿಕ್ಷಿತ ಸಮಾಜಕ್ಕಾಗಿ ಪ್ರೌಢಶಿಕ್ಷಣ:** 21ನೆಯ ಶತಮಾನದಲ್ಲಿ ರಾಜ್ಯದ ಪ್ರತಿಯೊಬ್ಬ ಭಾವೀ ಪ್ರಜೆಯೂ ಕೇವಲ ಅಕ್ಷರಸ್ಥನಾಗಿರದೆ ಸುಶಿಕ್ಷಿತ ವ್ಯಕ್ತಿಯಾಗಲು ಅವಕಾಶವನ್ನು ಒದಗಿಸುವುದು ಸರ್ಕಾರದ ಉದ್ದೇಶವಾಗಿದೆ. ಆದ್ದರಿಂದ, 2010ರಿಂದ ಕರ್ನಾಟಕದ ಎಲ್ಲಾ ಮಕ್ಕಳಿಗೆ ಕನಿಷ್ಠ 10ನೆಯ ತರಗತಿಯವರೆಗೆ ಶಿಕ್ಷಣವನ್ನು ಕಡ್ಡಾಯ ಮಾಡಲಾಗುವುದು.
- **ಮಾದರಿ ವಿದ್ಯಾರ್ಥಿ ನಿಲಯಗಳ ನಿರ್ಮಾಣ:** ಸಮಾಜದ ಎಲ್ಲ ವರ್ಗಗಳ ವಿದ್ಯಾರ್ಥಿಗಳು ಉತ್ತಮ ಪರಿಸರದಲ್ಲಿ ಶಿಕ್ಷಣ ಪಡೆಯಲು ಸಾಧ್ಯವಾಗುವಂತೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಾದರಿ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ಎಲ್ಲಾ ಜಾತಿ-ಧರ್ಮಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸೌಕರ್ಯವನ್ನು ಕಲ್ಪಿಸಲಾಗುವುದು.
- **ಕೌಶಲ್ಯ ಅಭಿವೃದ್ಧಿಗೆ ವಿಶೇಷ ಆದ್ಯತೆ:** ರಾಜ್ಯದಲ್ಲಿ ಕೌಶಲ್ಯ ಅಭಿವೃದ್ಧಿಯ ಅವಕಾಶಗಳು ಅತ್ಯಂತ ಸೀಮಿತವಾಗಿದ್ದು ಕೌಶಲ್ಯ ಅಭಿವೃದ್ಧಿಗಾಗಿ ತರಬೇತಿ ನೀಡುವ ಸಂಸ್ಥೆಗಳನ್ನು ಬೃಹತ್ ಸಂಖ್ಯೆಯಲ್ಲಿ ಸ್ಥಾಪಿಸಬೇಕಾಗಿದೆ. ಆದ್ದರಿಂದ, ಬೃಹತ್ ಪ್ರಮಾಣದಲ್ಲಿ ಕೌಶಲ್ಯಾಭಿವೃದ್ಧಿ ಆಂದೋಲನವನ್ನು ಈ

ವರ್ಷದಿಂದ ಪ್ರಾರಂಭಿಸಿ ಪ್ರತಿ ವರ್ಷ 3 ರಿಂದ 5 ಲಕ್ಷ ವಿದ್ಯಾವಂತ ಯುವಕ ಯುವತಿಯರಿಗೆ ತರಬೇತಿ ನೀಡಲು ಅವಕಾಶ ಕಲ್ಪಿಸಲಾಗುವುದು.

- **ಎಲ್ಲಾ ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆ:** ರಾಜ್ಯದ ಎಲ್ಲಾ ಭಾಗಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಪ್ರತಿಯೊಂದು ಜಿಲ್ಲೆಯಲ್ಲಿಯೂ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆಗಾಗಿ ಕನಿಷ್ಟ 1,000 ಎಕರೆ ವಿಸ್ತೀರ್ಣದ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲಾಗುವುದು.

- **ಖಾಸಗಿ ಬಂಡವಾಳದೊಡನೆ ಸಹಭಾಗಿತ್ವ:** ಮೂಲಭೂತ ಸೌಕರ್ಯಗಳಾದ ರಸ್ತೆ ಜಾಲಗಳ ಅಭಿವೃದ್ಧಿ, ಬಂದರುಗಳ ಅಭಿವೃದ್ಧಿ, ವಿದ್ಯುತ್ ಉತ್ಪಾದನೆ, ಶೈಕ್ಷಣಿಕ ಸೌಕರ್ಯಗಳ ಅಭಿವೃದ್ಧಿ, ಮುಂತಾದುವುಗಳಲ್ಲಿ ಖಾಸಗಿ ಬಂಡವಾಳದ ಪಾಲುದಾರಿಕೆಯೊಡನೆ ಸರ್ಕಾರದ ಯೋಜನೆಗಳನ್ನು ಅನುಷ್ಠಾನ ಮಾಡಲು ನಿರ್ದಿಷ್ಟ ನೀತಿಯನ್ನು ರೂಪಿಸಲಾಗುವುದು.

- **ವಿದ್ಯುತ್ ಉತ್ಪಾದನೆಯ ಹೆಚ್ಚಳ:** ರಾಜ್ಯದ ಸದ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಮುಂದಿನ 3 ವರ್ಷಗಳಲ್ಲಿ ಈಗಿನ 8,000 ಮೆಗಾವ್ಯಾಟ್‌ನಿಂದ ಕನಿಷ್ಟ 12,000 ಮೆಗಾವ್ಯಾಟ್‌ವರೆಗೆ ಹೆಚ್ಚಿಸಲಾಗುವುದು. ಗ್ರಾಮೀಣ ಪ್ರದೇಶದಲ್ಲಿ ಉತ್ತಮ ಗುಣ ಮಟ್ಟದ ವಿದ್ಯುತ್ ಪೂರೈಸಲು ಸಾಧ್ಯವಾಗುವಂತೆ ಎಲ್ಲಾ ಜಿಲ್ಲೆಗಳಲ್ಲಿ 'ನಿರಂತರ ಜ್ಯೋತಿ' ಯೋಜನೆಯನ್ನು ಸಂಪೂರ್ಣವಾಗಿ ಜಾರಿ ಮಾಡಲಾಗುವುದು.

- **'ನಗರೋತ್ಥಾನ'ದ ಅಭಿಯಾನ:** ರಾಜ್ಯದ ಬೃಹತ್ ಹಾಗೂ ಮಧ್ಯಮ ನಗರಗಳು ಮತ್ತು ಸಣ್ಣ ಪ್ರಮಾಣದ ಪಟ್ಟಣಗಳ ವ್ಯವಸ್ಥಿತ ಅಭಿವೃದ್ಧಿಗಾಗಿ ನಗರೋತ್ಥಾನ ಅಭಿಯಾನವನ್ನು ಪ್ರಾರಂಭಿಸಿ ಪ್ರತಿ ವರ್ಷ ರೂ.1,000 ಕೋಟಿ ವಿನಿಯೋಗಿಸಲಾಗುವುದು.

- **ಬೆಂಗಳೂರಿಗೆ ಮೂಲಭೂತ ಸೌಕರ್ಯಗಳು:** ಮೂಲಭೂತ ಸೌಕರ್ಯಗಳನ್ನು ಒದಗಿಸಲು ಬೆಂಗಳೂರು ನಗರದಲ್ಲಿ ಮೆಟ್ರೋ

ಹಾಗೂ ಮೋನೋ ರೈಲುಗಳಿಂದ ಮತ್ತು ಉತ್ತಮ ರಸ್ತೆಗಳ ಮೂಲಕ ಸಂಚಾರ ವ್ಯವಸ್ಥೆಯನ್ನು ಸುಧಾರಿಸಲು ಮತ್ತು ಎಲ್ಲಾ ಭಾಗಗಳಿಗೆ ನೀರು ಮತ್ತು ಚರಂಡಿಯ ವ್ಯವಸ್ಥೆಯೊಡನೆ ಮುಂದಿನ ಮೂರು ವರ್ಷಗಳಲ್ಲಿ ರೂ.18,872 ಕೋಟಿಯ ಕಾರ್ಯಕ್ರಮವನ್ನುಅನುಷ್ಠಾನ ಮಾಡಲಾಗುವುದು.

21. ಮೇಲ್ಕಂಡ ಅಭಿವೃದ್ಧಿ ನೀತಿಯ ಹಿನ್ನೆಲೆಯಲ್ಲಿ ರೂಪಿಸಲಾದ 2010–11ರ ಮುಂಗಡ ಪತ್ರದ ಮುಖ್ಯಾಂಶಗಳನ್ನು ಪ್ರಸ್ತುತಪಡಿಸಲು ಸಂತೋಷಿಸುತ್ತೇನೆ.

ಕೃಷಿ ಅಭಿವೃದ್ಧಿಗೆ ಆದ್ಯತೆ

22. ಕಳೆದ 10 ವರ್ಷಗಳಲ್ಲಿ ರಾಜ್ಯದ ಕೃಷಿ ಕ್ಷೇತ್ರವು ಹಲವಾರು ಏರಿಳಿತಗಳನ್ನು ಕಂಡಿದ್ದು ಕೆಲವು ವರ್ಷಗಳಲ್ಲಿ ನಮ್ಮ ರೈತರು ಅತೀವ ಕಷ್ಟಗಳಿಗೆ ಒಳಗಾಗಿರುತ್ತಾರೆ. ರೈತರು ಪ್ರತಿವರ್ಷವೂ ಪಡೆಯುವ ಸಾಲಗಳ ಭಾರವನ್ನು ಹಗುರ ಮಾಡುವ ದೃಷ್ಟಿಯಿಂದ ರಾಜ್ಯ ಸರ್ಕಾರವು ಶೇ.3ರ ಬಡ್ಡಿ ದರದಲ್ಲಿ ರೈತರಿಗೆ ಸಾಲವನ್ನು ನೀಡುವ ಯೋಜನೆಯನ್ನು 2006–07ರಿಂದ ಸಹಕಾರ ಸಂಘಗಳ ಮೂಲಕ ಜಾರಿಗೆ ತಂದಿದೆ. ಮುಂದುವರೆದು, ಈ ಸೌಲಭ್ಯವನ್ನು ವಾಣಿಜ್ಯ ಬ್ಯಾಂಕುಗಳ ಸಾಲಗಳಿಗೆ 2009–10ರಲ್ಲಿ ವಿಸ್ತರಿಸಿದ ವಿಶೇಷ ಕ್ರಮವನ್ನು ಇಡೀ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಕೈಗೊಂಡಿರುತ್ತೇವೆ. 2010–11ರಲ್ಲಿ ವಾಣಿಜ್ಯ ಬ್ಯಾಂಕುಗಳು ಕೃಷಿಕರಿಗೆ ನೀಡಿದ ಸಾಲಗಳಿಗೆ ಬಡ್ಡಿ ಸಹಾಯಧನ ನೀಡಲು ರೂ.200 ಕೋಟಿ ಒದಗಿಸಲಾಗಿದೆ.

23. ರಾಜ್ಯದ ರೈತರಿಗೆ ಸಹಕಾರ ಸಂಘಗಳ ಮೂಲಕ ಶೇ.3 ರ ಬಡ್ಡಿ ದರದಲ್ಲಿ ಕೃಷಿ ಸಾಲಗಳನ್ನು ಒದಗಿಸುವ ಪದ್ಧತಿಯನ್ನು ಸರ್ಕಾರವು ಈಗ ನಾಲ್ಕು ವರ್ಷಗಳಿಂದ ಜಾರಿಗೆ ತಂದಿದ್ದು, ಈ ಯೋಜನೆಯನ್ನು ಮುಂದುವರಿಸಲು 2010–11ರಲ್ಲಿ ಸುಮಾರು ರೂ.120 ಕೋಟಿ ವಿನಿಯೋಗಿ ಸಲಾಗುವುದು.

24. ಕಡಿಮೆ ಬಡ್ಡಿ ದರದ ಈ ಸೌಲಭ್ಯವು ಸಕಾಲದಲ್ಲಿ ಸಾಲವನ್ನು ಮರುಪಾವತಿ ಮಾಡಿದ ರೈತರಿಗೆ ಮಾತ್ರ ಅನ್ವಯಿಸುವುದೆಂಬ ಅಂಶವನ್ನು ಇಲ್ಲಿ ಒತ್ತಿ ಹೇಳಲು ಇಚ್ಚಿಸುತ್ತೇನೆ. ಆದ್ದರಿಂದ, ಬಡ್ಡಿ ಸಹಾಯಧನವನ್ನು ಪಡೆಯುವ ಅರ್ಹತೆಯುಳ್ಳ ಎಲ್ಲಾ ರೈತರು ತಮ್ಮ ಸಾಲದ ವಿವರಗಳನ್ನು ದಿನಾಂಕ 30.4.2010ರೊಳಗೆ ಸಂಬಂಧಪಟ್ಟ ತಾಲ್ಲೂಕಿನ ಸಹಕಾರ

ಇಲಾಖೆಯ ಅಧಿಕಾರಿಗಳಿಗೆ ಒದಗಿಸಿ ತಮ್ಮ ಹೆಸರನ್ನು ನೋಂದಣಿ ಮಾಡಿಕೊಳ್ಳುವ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

25. ಪ್ರತಿಯೊಂದು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಮತ್ತು ಪ್ರತಿ ಗ್ರಾಮದಲ್ಲಿ ಜಲಪೂರಣ ವ್ಯವಸ್ಥೆಯನ್ನು ಕಲ್ಪಿಸಲು ನಾಲಾ ಒಡ್ಡುಗಳು, ಬಾಂದಾರಗಳು, ಮುಂತಾದುವುಗಳನ್ನು ನಿರ್ಮಿಸಲು ಉದ್ಯೋಗ ಖಾತರಿ ಯೋಜನೆಯ ಅನುದಾನದೊಡನೆ ವಿಶೇಷ ಅನುದಾನವನ್ನು ನೀಡಲಾಗುವುದು. ಪ್ರತಿ ತಾಲ್ಲೂಕಿನಲ್ಲಿ ಉತ್ತಮವಾಗಿ ಜಲಪೂರಣ ಕಾಮಗಾರಿಯನ್ನು ನಿರ್ವಹಿಸಿರುವ ಗ್ರಾಮ ಪಂಚಾಯಿತಿಗಳಿಗೆ ರೂ.5 ಲಕ್ಷ ವಿಶೇಷ ಬಹುಮಾನವನ್ನು ನೀಡಲಾಗುವುದು. ರಾಜ್ಯದಲ್ಲಿ ಈ ವರ್ಷ ಕನಿಷ್ಟ 2 ಲಕ್ಷ ಜಲಪೂರಣ ಸ್ಥಾವರಗಳನ್ನು ನಿರ್ಮಿಸಲು 'ಜಲಸಿರಿ' ಆಂದೋಲನವನ್ನು ರೂ.500 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗುವುದು.

26. ರಾಜ್ಯದಲ್ಲಿ ಅಂತರ್ಜಲದ ಸಂರಕ್ಷಣೆ ಹಾಗೂ ವಿದ್ಯುಚ್ಛಕ್ತಿಯ ಮಿತವ್ಯಯದ ದೃಷ್ಟಿಯಿಂದ ರೈತರು ಹನಿ ನೀರಾವರಿ ಅಥವಾ ತುಂತುರು ನೀರಾವರಿ ವ್ಯವಸ್ಥೆಯನ್ನು ಅಳವಡಿಸುವುದನ್ನು ಕಡ್ಡಾಯ ಮಾಡುವುದು ಅಗತ್ಯವಾಗಿದೆ. ಈ ವಿಷಯದಲ್ಲಿ ರೈತರಿಗೆ ಅಗತ್ಯವಿರುವ ಸಹಾಯಧನ ಮತ್ತು ತಾಂತ್ರಿಕತೆಯನ್ನು ಒದಗಿಸಲು ರಾಜ್ಯದಲ್ಲಿ 'ಅಂತರ್‌ಗಂಗಾ ಸೂಕ್ಷ್ಮ ನೀರಾವರಿ ನಿಗಮ'ವನ್ನು ಸ್ಥಾಪಿಸಲು ರೂ.100 ಕೋಟಿ ಬಂಡವಾಳವನ್ನು ಒದಗಿಸಲಾಗುವುದು.

27. ರೈತರು ತಮ್ಮ ವಿದ್ಯುತ್ ಚಾಲಿತ ಪಂಪ್‌ಸೆಟ್‌ಗಳನ್ನು ನಿಗದಿತ ಅವಧಿಯೊಳಗೆ ನೊಂದಾಯಿಸಲು ವ್ಯವಸ್ಥೆ ಮಾಡಿ ಪ್ರತಿ ವಿದ್ಯುತ್ ಮಾರ್ಗದಲ್ಲಿ ಒದಗಿಸಬೇಕಾದ ವಿದ್ಯುಚ್ಛಕ್ತಿಯ ಪ್ರಮಾಣವನ್ನು ಅನುಸರಿಸಿ ಸಮರ್ಪಕ ತಾಂತ್ರಿಕ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.

28. ಕಳೆದ ಎರಡು ವರ್ಷಗಳಲ್ಲಿ ಭೂಚೇತನ ಕಾರ್ಯಕ್ರಮದ ಅಡಿಯಲ್ಲಿ ಆರು ಜಿಲ್ಲೆಗಳ ಸುಮಾರು 2.25 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಣ್ಣಿನ ಗುಣ ಪರೀಕ್ಷೆ ಮತ್ತು ಸೂಕ್ಷ್ಮ ಸತ್ವಗಳ (Micro Nutrients) ಪೂರೈಕೆಯಿಂದ ಬೆಳೆಗಳ ಫಸಲನ್ನು ಗಣನೀಯವಾಗಿ ಹೆಚ್ಚಿಸುವುದು ಸಾಧ್ಯವಾಗಿದೆ. ಈ ಪ್ರಯೋಗವನ್ನು ರಾಜ್ಯದ ಇತರ 15 ಜಿಲ್ಲೆಗಳ 12.5 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸಲು ಕೃಷಿ ವಿಜ್ಞಾನ ಕೇಂದ್ರಗಳಿಗೆ ರೂ.15 ಕೋಟಿ ಅನುದಾನ ಒದಗಿಸಲಾಗುವುದು.

29. ರೈತರಿಗೆ ಸೂಕ್ತ ಕೃಷಿ ತಂತ್ರಜ್ಞಾನದ ತಿಳುವಳಿಕೆಯನ್ನು ಪ್ರತಿ ವರ್ಷ ಒದಗಿಸಲು ಮತ್ತು ರೈತರಿಗೆ ಅಗತ್ಯವಿರುವ ಉತ್ತಮ ತಳಿಯ ಬೀಜಗಳು, ಸುಧಾರಿತ ಕೃಷಿ ಉಪಕರಣಗಳು, ಮುಂತಾದುವುಗಳನ್ನು ಪರಿಚಯಿಸಲು ಜಿಲ್ಲಾ ಮಟ್ಟದಲ್ಲಿ ಒಂದು ತಿಂಗಳ ಕಾಲ ಕೃಷಿ ಮೇಳಗಳನ್ನು ಏರ್ಪಡಿಸಲು ರೂ.15 ಕೋಟಿ ಅನುದಾನ ಒದಗಿಸಲಾಗುವುದು.

30. ರಾಜ್ಯದ ಎಲ್ಲ ಭಾಗಗಳ ರೈತರು ಕೃಷಿ ವಿಮೆಯ ಸೌಲಭ್ಯವನ್ನು ಸಮರ್ಪಕವಾಗಿ ಬಳಸಲು ಸಾಧ್ಯವಾಗುವಂತೆ ಪ್ರತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಟೆಲಿಮೆಟ್ರಿಕ್ ಮಳೆ ಮಾಪನ ಯಂತ್ರಗಳನ್ನು ಸ್ಥಾಪಿಸಲು ರೂ.5 ಕೋಟಿ ಒದಗಿಸಲಾಗುವುದು.

31. ಮಲೆನಾಡು ಪ್ರದೇಶದಲ್ಲಿ ವಿಶಿಷ್ಟ ಬೆಳೆಗಳ ಕುರಿತು ಅಧ್ಯಯನ ಹಾಗೂ ಸಂಶೋಧನೆಗಳನ್ನು ನಡೆಸಲು ಪ್ರತ್ಯೇಕ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಶಿವಮೊಗ್ಗದಲ್ಲಿ ಸ್ಥಾಪಿಸಲು ರೂ.10 ಕೋಟಿ ಒದಗಿಸಲಾಗುವುದು.

32. ರೈತರು ಸಾವಯವ ಕೃಷಿಯನ್ನು ಅಳವಡಿಸಲು ರಾಜ್ಯದಲ್ಲಿ ಬೃಹತ್ ಆಂದೋಲನವನ್ನು ಪ್ರಾರಂಭಿಸಲಾಗಿದ್ದು ಈಗಾಗಲೇ ಸುಮಾರು 52,200 ಕೃಷಿಕರು ಈ ಆಂದೋಲನದಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದಾರೆ. ಈ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ಈ ವರ್ಷ ರೂ.100 ಕೋಟಿ ಒದಗಿಸಲಾಗುವುದು.

33. ಕಳೆದ ವರ್ಷ ರೈತರಿಗೆ ಅಗತ್ಯವಿರುವ ರಾಸಾಯನಿಕ ಗೊಬ್ಬರಗಳನ್ನು ಸೂಕ್ತ ಪ್ರಮಾಣದಲ್ಲಿ ವಿತರಿಸಲು ಕರ್ನಾಟಕ ಸಹಕಾರಿ ಮಾರುಕಟ್ಟೆ ಮಂಡಳಿಗೆ ರೂ.400 ಕೋಟಿ ದುಡಿಯುವ ಬಂಡವಾಳವನ್ನು ಒದಗಿಸಲಾಗಿದ್ದು, 2010–11ರಲ್ಲಿಯೂ ಸಹ ಅದೇ ರೀತಿಯ ಸೌಲಭ್ಯವನ್ನು ವಿಸ್ತರಿಸಲಾಗುವುದು.

34. ರೈತರಿಗೆ ಅಗತ್ಯವಿರುವ ಉಪಕರಣಗಳು ಮತ್ತು ಸಾಮಗ್ರಿಗಳನ್ನು ಒಂದೇ ಸ್ಥಳದಲ್ಲಿ ಪಡೆಯಲು ಅನುಕೂಲವಾಗುವಂತೆ ವಿವಿಧ ಪದಾರ್ಥಗಳ ಸೂಪರ್ ಸ್ಟೋರ್‌ಗಳನ್ನು ತೆರೆಯಲು ಪ್ರೋತ್ಸಾಹ ಧನ ನೀಡಲಾಗುವುದು.

35. ರೈತರು ಪಹಣಿ ಪತ್ರಿಕೆಗಳನ್ನು ಪಡೆಯಲು ನೀಡಬೇಕಾದ ಶುಲ್ಕವನ್ನು ರೂ.15 ರಿಂದ ರೂ.10ಕ್ಕೆ ಇಳಿಸಲಾಗುವುದು.

36. ಪ್ರತಿಯೊಂದು ಹೋಬಳಿ ಕೇಂದ್ರದಲ್ಲಿ ಸ್ಥಾಪಿಸಿರುವ ರೈತ ಸಂಪರ್ಕ ಕೇಂದ್ರಗಳಿಗೆ ಸೂಕ್ತ ಕಟ್ಟಡಗಳನ್ನು ಒದಗಿಸಲು ರೂ.25 ಕೋಟಿ ಒದಗಿಸಲಾಗುವುದು.

37. ರೈತರಿಗೆ ನಿಗದಿತ ಅವಧಿಯಲ್ಲಿ ಸೂಕ್ತ ಗುಣಮಟ್ಟದ ವಿದ್ಯುಚ್ಛಕ್ತಿಯನ್ನು ಒದಗಿಸಿ ಕೃಷಿ ಉತ್ಪಾದನೆಯನ್ನು ಬೆಂಬಲಿಸುವುದು ಸರ್ಕಾರದ ಉದ್ದೇಶವಾಗಿದೆ. ಇದಕ್ಕಾಗಿ ರಾಜ್ಯದ 126 ತಾಲ್ಲೂಕುಗಳಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು ಎರಡು ವರ್ಷಗಳ ಅವಧಿಯಲ್ಲಿ ಜಾರಿ ಮಾಡಲಾಗುವುದು. 2010-11ರಲ್ಲಿ 70 ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ರೂ.1,200 ಕೋಟಿ ವೆಚ್ಚದಲ್ಲಿ ಜಾರಿ ಮಾಡಲು ವಿದ್ಯುತ್ ವಿತರಣ ಕಂಪನಿಗಳಿಗೆ ಅಗತ್ಯವಿರುವ ಬಂಡವಾಳದ ನೆರವನ್ನು ನೀಡಲಾಗುವುದು.

38. ರೈತರ ಪಂಪ್‌ಸೆಟ್‌ಗಳಿಗೆ ಹಾಗೂ ಭಾಗ್ಯಜ್ಯೋತಿ – ಕುಟೀರ ಜ್ಯೋತಿ ಬಳಕೆದಾರರಿಗೆ ಒದಗಿಸಲಾಗುತ್ತಿರುವ ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಸಹಾಯಧನವನ್ನು ನೀಡಲು ಆಯವ್ಯಯದಲ್ಲಿ ರೂ.2,500 ಕೋಟಿ ಒದಗಿಸಲಾಗುತ್ತಿದೆ.

39. ಹಾವು ಕಡಿತದಿಂದ, ತೆಂಗು ಅಡಿಕೆ ಮರಗಳಿಂದ ಬೀಳುವುದರಿಂದ, ಅಥವಾ ಇತರ ಕೃಷಿ ಸಂಬಂಧಿತ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರು ಮತ್ತು ಕೃಷಿ ಕಾರ್ಮಿಕರ ಕುಟುಂಬಗಳಿಗೆ ರೂ.1 ಲಕ್ಷ ಸಹಾಯ ನೀಡಲಾಗುವುದು. ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ / ಬಣವೆಗಳು ನಷ್ಟವಾದ ಪ್ರಕರಣಗಳಲ್ಲಿ ರೂ.10000ದವರೆಗೆ ಪರಿಹಾರ ನೀಡಲಾಗುವುದು.

ತೋಟಗಾರಿಕೆ ಅಭಿವೃದ್ಧಿಗೆ ಬೆಂಬಲ

40. ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳ ವಿಸ್ತೀರ್ಣವನ್ನು ಸದ್ಯದ 18 ಲಕ್ಷ ಹೆಕ್ಟೇರ್‌ನಿಂದ 25 ಲಕ್ಷ ಹೆಕ್ಟೇರ್‌ಗೆ ಮುಂದಿನ ಮೂರು ವರ್ಷಗಳಲ್ಲಿ ಏರಿಸಲು ಸರ್ಕಾರವು ಉದ್ದೇಶಿಸಿದೆ. ರಾಜ್ಯದ ಲಕ್ಷಾಂತರ ಸಂಖ್ಯೆಯ ಸಣ್ಣ ಹಾಗೂ ಅತಿ ಸಣ್ಣ ರೈತರು ತಮ್ಮ ಹಿಡುವಳಿಗಳಲ್ಲಿ ಹೆಚ್ಚು ಲಾಭದಾಯಕವಾದ ತೋಟಗಾರಿಕೆ ಬೆಳೆಗಳನ್ನು ಅಳವಡಿಸಿಕೊಳ್ಳಲು ಪ್ರತಿ ಗ್ರಾಮದಲ್ಲಿಯೂ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಮೂಲಕ ಸಹಾಯ ನೀಡಲಾಗುವುದು. 2010-11ರಲ್ಲಿ ಈ ಉದ್ದೇಶಕ್ಕಾಗಿ ಕನಿಷ್ಟ ರೂ.500 ಕೋಟಿ ಉಪಯೋಗವಾಗುವ ನಿರೀಕ್ಷೆ ಇದ್ದು ಇದರಿಂದ

ಸುಮಾರು 2 ಲಕ್ಷ ಹೆಕ್ಟೇರ್ ಪ್ರದೇಶವನ್ನು ತೋಟಗಾರಿಕಾ ಬೆಳೆಗಳಿಗಾಗಿ ಅಭಿವೃದ್ಧಿಪಡಿಸಲು ಸಾಧ್ಯವಾಗುವುದು.

41. ದ್ರಾಕ್ಷಿ ಬೆಳೆಗೆ ಉತ್ತೇಜನ ನೀಡುವ ಸಲುವಾಗಿ ರಾಜ್ಯ ಸರ್ಕಾರವು ಈಗಾಗಲೇ ದ್ರಾಕ್ಷಾ ರಸ ನೀತಿಯೊಂದನ್ನು (Wine Policy) ಅಳವಡಿಸಿಕೊಂಡಿದ್ದು ಇದರಿಂದ ರಾಜ್ಯದಲ್ಲಿ ವ್ಯವಸ್ಥಿತವಾಗಿ ಸುಮಾರು 1800 ಎಕರೆಗಳಲ್ಲಿ ವೈನ್ ದರ್ಜೆಯ ದ್ರಾಕ್ಷಿಯನ್ನು ಬೆಳೆಯಲಾಗುತ್ತಿದೆ.

42. ರಾಜ್ಯದಲ್ಲಿ ವ್ಯಾಪಕವಾಗಿ ಬೆಳೆಯುವ ಮಾವು ಬೆಳೆಯ ಅಭಿವೃದ್ಧಿಗಾಗಿ ಕರ್ನಾಟಕ ಮಾವು ಮಂಡಳಿಯನ್ನು ಈ ವರ್ಷ ಸ್ಥಾಪಿಸಲು ರೂ.10 ಕೋಟಿ ಒದಗಿಸಲಾಗುವುದು. ಈ ಮಂಡಳಿಯು ಖಾಸಗಿ ಸಹಭಾಗಿತ್ವದೊಡನೆ ಸುಧಾರಿತ ಮಾವು ಮಾರುಕಟ್ಟೆ ಹಾಗೂ ಸಂಸ್ಕರಣ ಸೌಲಭ್ಯಗಳನ್ನು ಸ್ಥಾಪಿಸುವುದಲ್ಲದೆ, ಮಾವು ಬೆಳೆಗಾರರಿಗೆ ಅಗತ್ಯವಿರುವ ಸುಧಾರಿತ ತಂತ್ರಜ್ಞಾನವನ್ನು ಒದಗಿಸುವುದು.

43. ತೋಟಗಾರಿಕೆ ಇಲಾಖೆಗೆ ಸೇರಿದ ಸುಮಾರು 400 ತೋಟಗಾರಿಕೆ ಕ್ಷೇತ್ರಗಳ ಪೈಕಿ ಈಗಾಗಲೇ 19 ಕ್ಷೇತ್ರಗಳನ್ನು ತೋಟಗಾರಿಕೆ ಸಂಬಂಧಿತ ಚಟುವಟಿಕೆಗಳಿಗಾಗಿ ಖಾಸಗಿ ವಲಯದಲ್ಲಿ ಅಭಿವೃದ್ಧಿಪಡಿಸಲು ಗುತ್ತಿಗೆ ಆಧಾರದ ಮೇಲೆ ನೀಡಲು ಕ್ರಮಕೈಗೊಳ್ಳಲಾಗುತ್ತಿದೆ. ಈ ವರ್ಷ ಇನ್ನೂ 100 ಕ್ಷೇತ್ರಗಳನ್ನು ಖಾಸಗಿ ಸಹಭಾಗಿತ್ವದ ಮೂಲಕ ಸಸ್ಯ ಕ್ಷೇತ್ರಗಳು ಮತ್ತು ಮಾರುಕಟ್ಟೆ ಕೇಂದ್ರಗಳಾಗಿ ಅಭಿವೃದ್ಧಿಪಡಿಸಲಾಗುವುದು.

44. ಮೈಸೂರು, ಹಿರಿಯೂರು, ಶಿರಸಿ ಮತ್ತು ಕೊಪ್ಪಳದಲ್ಲಿ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು ತಲಾ ರೂ.5 ಕೋಟಿ ಒದಗಿಸಲಾಗುವುದು.

45. ರಾಜ್ಯದ ಯಾವುದೇ ಭಾಗದಲ್ಲಿ ಹಣ್ಣು ಮತ್ತು ತರಕಾರಿ ಸಂಸ್ಕರಣಾ ಘಟಕಗಳನ್ನು ಕನಿಷ್ಟ ರೂ.10 ಲಕ್ಷ ಬಂಡವಾಳದೊಡನೆ ಸ್ಥಾಪಿಸುವ ಉದ್ಯಮಿಗಳಿಗೆ ಶೇ.25 ಬಂಡವಾಳ ಸಹಾಯಧನವನ್ನು ನೀಡಲಾಗುವುದು. ಇದಕ್ಕಾಗಿ ರೂ.10 ಕೋಟಿ ಒದಗಿಸಲಾಗುವುದು.

46. ಹಣ್ಣು ಮತ್ತು ತರಕಾರಿ ಬೆಳೆಗಳ ವ್ಯವಸ್ಥಿತ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸಲು ಜಿಲ್ಲಾ ಕೇಂದ್ರಗಳಲ್ಲಿ ದೈನಂದಿನ ಸಂಗ್ರಹದ ವ್ಯವಸ್ಥೆ ಮಾಡಲು ರೂ.5 ಕೋಟಿ ಒದಗಿಸಲಾಗುವುದು.

47. ಹೆಚ್ಚಿನ ಮೌಲ್ಯದ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉಪಯೋಗಿಸುವ ಪಾಲಿಹೌಸ್ ಮತ್ತು ಪಾಲಿನೆಟ್‌ಗಳನ್ನು ರೈತರು ಖರೀದಿಸಲು ಶೇ.50 ರಷ್ಟು ಸಹಾಯಧನ ಒದಗಿಸುವುದಕ್ಕಾಗಿ ರೂ.5 ಕೋಟಿ ನೀಡಲಾಗುವುದು.

48. ತೋಟಗಾರಿಕೆ ಉತ್ಪನ್ನಗಳ ಮಾರಾಟಕ್ಕಾಗಿ ಹಾಪ್‌ಕಾಮ್ಸ್ ಸಂಸ್ಥೆಗೆ ಬೆಂಗಳೂರು ನಗರದಲ್ಲಿ 100 ಹೊಸ ಮಳಿಗೆಗಳ ನಿರ್ಮಾಣಕ್ಕೆ ಸ್ಥಳಾವಕಾಶ ಒದಗಿಸಲಾಗುವುದು ಮತ್ತು ಖಾಸಗಿ ಸಂಸ್ಥೆಗಳ ಮೂಲಕ ಮಳಿಗೆಗಳನ್ನು ನವೀಕರಿಸಿ ನಿರ್ವಹಿಸಲು ವ್ಯವಸ್ಥೆ ಮಾಡಲಾಗುವುದು.

49. ಅಡಿಕೆ ಬೆಳೆಗಾರರಿಗೆ ಅಡಿಕೆ ಸುಲಿಯುವ ಆಧುನಿಕ ಯಂತ್ರಗಳ ಖರೀದಿಗಾಗಿ ಶೇ.50 ರಷ್ಟು ಸಹಾಯಧನವನ್ನು ರೂ.1 ಲಕ್ಷ ಮಿತಿಗೆ ಒಳಪಟ್ಟು ನೀಡಲಾಗುವುದು.

ರೇಷ್ಮೆ ಕೃಷಿ

50. ಇತ್ತೀಚಿನ ವರ್ಷಗಳಲ್ಲಿ ರಾಜ್ಯದಲ್ಲಿ ರೇಷ್ಮೆ ಉದ್ಯಮಕ್ಕೆ ಸಂಬಂಧಿಸಿದ ಹಿಪ್ಪುನೇರಳೆ ಬೆಳೆಯ ವಿಸ್ತೀರ್ಣವು ಸ್ವಲ್ಪ ಮಟ್ಟಿಗೆ ಸಂಕುಚಿತಗೊಂಡಿದ್ದು ಈಗ ಸುಮಾರು 70,000 ಹೆಕ್ಟೇರ್‌ನಷ್ಟಿದೆ. ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ವರ್ಷ ಪೂರ್ತಿ ಪೂರಕ ವರಮಾನವನ್ನು ಒದಗಿಸುವ ಈ ಕೃಷಿಗೆ ಹೆಚ್ಚಿನ ಪ್ರೋತ್ಸಾಹ ಅವಶ್ಯಕವಾಗಿದ್ದು ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಖಾತರಿ ಯೋಜನೆಯಲ್ಲಿ ಸಣ್ಣ ರೈತರ ಹಿಡುವಳಿಗಳಲ್ಲಿ ರೇಷ್ಮೆ ಬೆಳೆಗೆ ಅಗತ್ಯ ಸಹಾಯವನ್ನು ನೀಡಲಾಗುತ್ತಿದೆ. ಮುಂದಿನ ಮೂರು ವರ್ಷಗಳಲ್ಲಿ ಹಿಪ್ಪುನೇರಳೆ ಬೆಳೆಯ ವಿಸ್ತೀರ್ಣವನ್ನು ಒಂದು ಲಕ್ಷ ಹೆಕ್ಟೇರಿಗೆ ಏರಿಸಲು ಉದ್ದೇಶಿಸಿದೆ.

51. ರೇಷ್ಮೆ ನೂಲು ಬಿಚ್ಚಾಣಿಕೆಯನ್ನು ಅವಲಂಬಿಸಿರುವ ಕುಟುಂಬಗಳಿಗೆ ನೇಕಾರರ ಮಾದರಿಯಲ್ಲಿ ಶೇ.3ರ ಬಡ್ಡಿ ದರದಲ್ಲಿ ಸಾಲ ಒದಗಿಸಲು ಅಗತ್ಯ ಸಹಾಯಧನವನ್ನು ನೀಡಲು ಉದ್ದೇಶಿಸಿದೆ. 2010–11ರಲ್ಲಿ ಇದರಿಂದ ಸುಮಾರು 7,000 ಕುಟುಂಬಗಳಿಗೆ ಸಹಾಯವಾಗುವುದು.

52. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹಾಗೂ ಕರ್ನಾಟಕ ಕೈಗಾರಿಕೆ ಸಹಕಾರಿ ಬ್ಯಾಂಕ್‌ನ ಮೂಲಕ ಸಾಲ ಪಡೆದಿರುವ ರೇಷ್ಮೆ ಬಿಚ್ಚಾಣಿಕೆ ಉದ್ಯಮದಲ್ಲಿ ತೊಡಗಿರುವ ಕುಟುಂಬಗಳಿಗೆ ಸಾಲಗಳ ಒಂದಾವರ್ತಿ ತೀರುವಳಿ ಯೋಜನೆಯನ್ನು ರೂಪಿಸಲು ಉದ್ದೇಶಿಸಿದೆ.

53. ಮೈಸೂರಿನಲ್ಲಿ ರೇಷ್ಮೆ ಶತಮಾನೋತ್ಸವ ಸ್ಮಾರಕ ಭವನವನ್ನು ನಿರ್ಮಿಸಲು ರೂ.2 ಕೋಟಿ ನೀಡಲಾಗುವುದು.

ಪಶುಸಂಗೋಪನೆ ಮತ್ತು ಹೈನುಗಾರಿಕೆ

54. ರಾಜ್ಯದ ಗ್ರಾಮೀಣ ಕುಟುಂಬಗಳಿಗೆ, ವಿಶೇಷವಾಗಿ ಕೃಷಿ ಕಾರ್ಮಿಕರು ಮತ್ತು ಸಣ್ಣ ರೈತರಿಗೆ ಪಶುಸಂಗೋಪನೆ ಹಾಗೂ ಹೈನುಗಾರಿಕೆಗಳು ಪ್ರಮುಖವಾದ ಆದಾಯದ ಮೂಲಗಳಾಗಿವೆ. ಗ್ರಾಮೀಣ ಪ್ರದೇಶದಲ್ಲಿ ಬಡತನದ ನಿರ್ಮೂಲನೆ ಸಾಧಿಸಲು ಪಶುಸಂಗೋಪನೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ.

55. 2009–10ರಲ್ಲಿ ಸರ್ಕಾರವು ಸಹಕಾರ ಸಂಘಗಳ ಮೂಲಕ ಸಂಗ್ರಹಿಸಲಾದ ಹಾಲಿಗೆ ಪ್ರತಿ ಲೀಟರಿಗೆ ರೂ.2ರಂತೆ ನೀಡಿದ ವಿಶೇಷ ಸಹಾಯಧನದಿಂದ ಸುಮಾರು 6.4 ಲಕ್ಷ ಹಾಲು ಉತ್ಪಾದಕ ಕುಟುಂಬಗಳು ಸುಮಾರು ರೂ.200 ಕೋಟಿಯಷ್ಟು ಹೆಚ್ಚುವರಿ ಆದಾಯವನ್ನು ಪಡೆದಿವೆ. ಈ ಯೋಜನೆಯನ್ನು 2010–11ರಲ್ಲಿ ಕರ್ನಾಟಕ ಹಾಲು ಮಾರಾಟ ಸಹಕಾರ ಮಂಡಳಿಯ ಸಹಭಾಗಿತ್ವದೊಡನೆ ಮುಂದುವರಿಸಲಾಗುವುದು.

56. ಧಾರವಾಡ, ಬೆಳಗಾವಿ, ಬಿಜಾಪುರ ಮತ್ತು ಗುಲ್ಬರ್ಗದ ಹಾಲಿನ ಒಕ್ಕೂಟಗಳು ಪಡೆದಿರುವ ಸಾಲವನ್ನು ಹಿಂತಿರುಗಿಸಲು ಈಗಾಗಲೇ ನೀಡಿರುವ ಅನುದಾನ ಸೇರಿ ಈಕ್ವಿಟಿ ಬಂಡವಾಳ ರೂ.10 ಕೋಟಿಯನ್ನು 2009–10ರಲ್ಲಿ ನೀಡಲಾಗುತ್ತಿದೆ.

57. 2010–11ರಲ್ಲಿ ಗುಲ್ಬರ್ಗ ಮತ್ತು ಬೆಳಗಾವಿ ವಿಭಾಗಗಳಲ್ಲಿ ನೂತನ ಶೀತಲೀಕರಣ ಘಟಕಗಳನ್ನು ಸ್ಥಾಪಿಸಲು ರೂ.10 ಕೋಟಿ ಅನುದಾನವನ್ನು ಒದಗಿಸಲಾಗುವುದು. ಚಿಕ್ಕಬಳ್ಳಾಪುರದಲ್ಲಿ ಹಾಲಿನ ಸಂಸ್ಕರಣ ಘಟಕವನ್ನು ಸ್ಥಾಪಿಸಲು ರೂ.10 ಕೋಟಿ ಒದಗಿಸಲಾಗುವುದು.

58. ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಮತ್ತು ಹಾಸನ ಮುಂತಾದ ಜಿಲ್ಲೆಗಳಲ್ಲಿ 'ಅಮೃತಮಹಲ್' ಕಾವಲಿನ ಸರ್ಕಾರಿ ಭೂಮಿಯ ಅತಿಕ್ರಮಣಗಳನ್ನು ತೆರವುಗೊಳಿಸಿ ಪಶುಸಂಗೋಪನೆ, ತಳಿ ಅಭಿವೃದ್ಧಿ ಮುಂತಾದ ಉದ್ದೇಶಗಳಿಗಾಗಿ ಪರಿಣತ ಸಂಸ್ಥೆಗಳ ಮೂಲಕ ಅಭಿವೃದ್ಧಿ ಮಾಡಲು ರೂ.5 ಕೋಟಿ ಒದಗಿಸಲಾಗುವುದು.

59. ಕುರಿ ಸಾಕಾಣಿಕೆಯನ್ನು ಹೆಚ್ಚು ಲಾಭದಾಯಕವಾಗಿ ಮಾಡಲು 3600 ಫಲಾನುಭವಿಗಳಿಗೆ ರ್‍ಯಾಂಬುಲೇ ತಳಿಯ ಟಗರು ಮತ್ತು ಹತ್ತು ದೇಶೀ ಕುರಿಗಳನ್ನು ಒದಗಿಸಲು ಕುರಿ ಅಭಿವೃದ್ಧಿ ಮಂಡಳಿಯ ಮೂಲಕ ರೂ.10 ಕೋಟಿ ವೆಚ್ಚ ಮಾಡಲಾಗುವುದು. ಇದರಿಂದ ಮುಂದಿನ 5 ವರ್ಷಗಳಲ್ಲಿ ರಾಜ್ಯದ ಕುರಿ ತಳಿಗಳನ್ನು ವ್ಯಾಪಕವಾಗಿ ಉನ್ನತೀಕರಿಸಲು ಸಾಧ್ಯವಾಗುವುದು.

60. ಶಿವಮೊಗ್ಗ ಮತ್ತು ಹಾಸನದಲ್ಲಿ ಸ್ಥಾಪಿಸಲಾಗಿರುವ ಪಶುವೈದ್ಯಕೀಯ ಕಾಲೇಜುಗಳ ಅಭಿವೃದ್ಧಿಗಾಗಿ ತಲಾ ರೂ.10 ಕೋಟಿ ಒದಗಿಸಲಾಗುವುದು.

61. ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ 'ಶ್ರೀ ಭಾವುರಾವ್ ದೇಶಪಾಂಡೆ' ಹೆಸರಿನಲ್ಲಿ ಪಶು ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ರೂ.5 ಕೋಟಿ ನೀಡಲಾಗುವುದು.

62. ಪಶುವೈದ್ಯಕೀಯ ಇಲಾಖೆಯಲ್ಲಿ ತೆರವಾಗಿರುವ ಪಶುವೈದ್ಯರ 487 ಹುದ್ದೆಗಳನ್ನು 2010-11ರಲ್ಲಿ ತುಂಬಿಸಲಾಗುವುದು.

63. ಗ್ರಾಮಾಂತರ ಪ್ರದೇಶದಲ್ಲಿ ಪಶುವೈದ್ಯಕೀಯ ಸೌಲಭ್ಯಗಳನ್ನು ವಿಸ್ತರಿಸಲು 50 ನೂತನ ಸಂಚಾರಿ ವೈದ್ಯಕೀಯ ಘಟಕಗಳನ್ನು ಪ್ರಾರಂಭಿಸಲಾಗುವುದು.

ಮೀನುಗಾರರಿಗೆ ಪ್ರೋತ್ಸಾಹ

64. ರಾಜ್ಯದಲ್ಲಿ ಒಳನಾಡಿನ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು 2010-11ರಲ್ಲಿ 25 ಕೋಟಿ ಮೀನುಮರಿಗಳನ್ನು ಉತ್ಪಾದಿಸಲು ರೂ.2.5 ಕೋಟಿ ವೆಚ್ಚ ಮಾಡಲಾಗುವುದು.

65. ಕರಾವಳಿಯಲ್ಲಿ ಮೀನುಗಾರರಿಗೆ ನೀಡುತ್ತಿರುವ ಮಾರಾಟ ತೆರಿಗೆರಹಿತ ಡೀಸೆಲ್‌ನ ಪ್ರಮಾಣವನ್ನು 75000 ದಿಂದ 85000 ಕಿಲೋ ಲೀಟರ್‌ಗಳಿಗೆ ಹೆಚ್ಚಿಸಲಾಗುವುದು. ಮೀನುಗಾರಿಕೆಗಾಗಿ ಉಪಯೋಗಿಸಲ್ಪಡುವ ಮಂಜುಗಡ್ಡೆಗಳ ತಯಾರಿಕಾ ಘಟಕಗಳಿಗೆ ನೀಡುತ್ತಿರುವ ಪ್ರತಿ ಯುನಿಟ್‌ಗೆ 1 ರೂಪಾಯಿ ವಿದ್ಯುತ್ ಸಹಾಯಧನವನ್ನು ಮುಂದುವರೆಸಲಾಗುವುದು.

66. ಬೈಂದೂರಿನ ಬಳಿ ಕೊಡೇರಿ ಮೀನುಗಾರಿಕೆ ಬಂದರಿನ ಅಭಿವೃದ್ಧಿಗಾಗಿ ರೂ.10 ಕೋಟಿ ನೀಡಲಾಗುವುದು.

ಸಹಕಾರ

67. ನಾನಾ ಕಾರಣಗಳಿಂದ ನಷ್ಟವನ್ನು ಅನುಭವಿಸಿರುವ ಸಹಕಾರಿ ಪತ್ತಿನ ಸಂಘಗಳನ್ನು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳನ್ನು ಪುನಃಶ್ಚೇತನಗೊಳಿಸಲು ರಾಜ್ಯವು ವೈದ್ಯನಾಥನ್ ಸಮಿತಿಯ ಶಿಫಾರಸ್ಸುಗಳನ್ನು ಜಾರಿ ಮಾಡಿದ್ದು ಇದರಿಂದ ಪತ್ತಿನ ಸಹಕಾರಿ ಸಂಘಗಳಿಗೆ ಮತ್ತು ಬ್ಯಾಂಕುಗಳಿಗೆ ಸುಮಾರು ರೂ.600 ಕೋಟಿ ಪುನರ್‌ಬಂಡವಾಳವನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಒದಗಿಸುತ್ತಿವೆ. ಇದರಿಂದ 2010–11ರಿಂದ ರಾಜ್ಯದ ಎಲ್ಲಾ ಪತ್ತಿನ ಸಹಕಾರ ಸಂಘಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುತ್ತದೆ.

68. 2006–07ರಲ್ಲಿ ಸರ್ಕಾರದಿಂದ ಮನ್ನಾ ಮಾಡಲಾದ ಕೃಷಿ ಸಾಲಗಳನ್ನು ಮರು ಪಾವತಿ ಮಾಡಿದ್ದ ರೈತರಿಗೆ ಹಿಂತಿರುಗಿಸಬೇಕಾದ ಮೊತ್ತವನ್ನು 2010–11ರಲ್ಲಿ ಪಾವತಿ ಮಾಡಲು ವ್ಯವಸ್ಥೆ ಮಾಡಲಾಗುವುದು.

69. ಯಶಸ್ವಿನಿ ಯೋಜನೆಯಲ್ಲಿ 2009–10ರಲ್ಲಿ ಸರ್ಕಾರವು 76,000 ರೈತರಿಗೆ ಹೃದ್ರೋಗ ಮುಂತಾದ ಗಂಭೀರ ಕಾರಣಗಳಿಂದ ಶಸ್ತ್ರ ಚಿಕಿತ್ಸೆ ಪಡೆಯಲು ರೂ.30 ಕೋಟಿ ಸಹಾಯಧನವನ್ನು ಒದಗಿಸಿದ್ದು ಈ ಯೋಜನೆಯನ್ನು 2010–11ರಲ್ಲಿ ಮುಂದುವರೆಸಲು ರೂ.40 ಕೋಟಿ ಒದಗಿಸಲಾಗಿದೆ.

ಕೃಷಿ ಮಾರುಕಟ್ಟೆ

70. ರೈತರು ಬೆಳೆಯುವ ಆಹಾರ ಧಾನ್ಯಗಳು, ಹಣ್ಣು ತರಕಾರಿ ಮುಂತಾದುವುಗಳಿಗೆ ಉತ್ತಮ ಮಾರುಕಟ್ಟೆ ಒದಗಿಸಲು ಮಾರುಕಟ್ಟೆ ಕ್ಷೇತ್ರದಲ್ಲಿ ಖಾಸಗಿ ಪಾಲುದಾರಿಕೆಗೆ ಅನುಕೂಲವಾಗುವಂತೆ ಈಗಾಗಲೇ ಕೃಷಿ ಮಾರಾಟ ಕಾಯಿದೆಯನ್ನು ತಿದ್ದುಪಡಿ ಮಾಡಲಾಗಿದೆ.

71. ಕೃಷಿ ಉತ್ಪನ್ನಗಳ ಸಗಟು ಮಾರುಕಟ್ಟೆಗಳನ್ನು ಸ್ಥಾಪಿಸಲು ಖಾಸಗಿ ಉದ್ಯಮಿಗಳಿಗೆ ಅಗತ್ಯವಿರುವ ಭೂಮಿ ಹಾಗು ಶೇ.25 ರಷ್ಟು ಬಂಡವಾಳ ಸಹಾಯಧನ ನೀಡಲು ರೂ.5.00 ಕೋಟಿ ವಿನಿಯೋಗಿಸಲಾಗುವುದು.

72. ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿಸಲು ಪ್ರತಿ ಜಿಲ್ಲೆಯಲ್ಲಿ NCDEX ಸಂಸ್ಥೆಯ ಸಹಾಯದಿಂದ ಕೃಷಿ ಉತ್ಪನ್ನಗಳ ವಿನಿಮಯ

ಕೇಂದ್ರಗಳನ್ನು ಕೃಷಿ ಉತ್ಪನ್ನಗಳ ಮಾರುಕಟ್ಟೆ ಆವರಣದಲ್ಲಿ ಸ್ಥಾಪಿಸಲಾಗುವುದು.

73. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವತಿಯಿಂದ ಸಂತೆಮಾಳಗಳ ಅಭಿವೃದ್ಧಿಗಾಗಿ ಅಗತ್ಯ ಮೂಲಸೌಕರ್ಯವನ್ನು ಒದಗಿಸಲು ಪ್ರತಿಯೊಂದು ತಾಲ್ಲೂಕಿನಲ್ಲಿ ರೂ.1 ಕೋಟಿ ವೆಚ್ಚ ಮಾಡಲಾಗುವುದು.

74. ಗಂಗಾವತಿ ತಾಲ್ಲೂಕಿನ ಕಾರಟಗಿಯಲ್ಲಿ ಅಕ್ಕಿಯ ಸಂಸ್ಕರಣೆಗಾಗಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿದ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪಿಸಲು ರಾಜ್ಯ ಮಾರುಕಟ್ಟೆ ಮಂಡಳಿ ವತಿಯಿಂದ ರೂ.10 ಕೋಟಿ ವಿನಿಯೋಗಿಸಲಾಗುವುದು.

ಸಕ್ಕರೆ ಉದ್ಯಮ

75. ಕಬ್ಬಿನ ಬೆಳೆಯ ಅಭಿವೃದ್ಧಿ ಮತ್ತು ಸಂಸ್ಕರಣೆಗೆ ವ್ಯವಸ್ಥೆ ಮಾಡಲು ಸಕ್ಕರೆ ಇಲಾಖೆಯನ್ನು ಹೆಚ್ಚಿನ ಸಿಬ್ಬಂದಿಯೊಡನೆ ಬಲಪಡಿಸಲು ಉದ್ದೇಶಿಸಲಾಗಿದೆ.

76. ಸರ್ಕಾರಿ ಸ್ವಾಮ್ಯದ ಮೈಸೂರು ಸಕ್ಕರೆ ಕಂಪನಿಯ ಯಂತ್ರಸ್ಥಾವರಗಳ ನವೀಕರಣಕ್ಕಾಗಿ ರೂ.20 ಕೋಟಿ ನೀಡಲು ಉದ್ದೇಶಿಸಿದೆ.

77. ಬೆಳಗಾವಿಯ ಕರ್ನಾಟಕ ಸಕ್ಕರೆ ಸಂಸ್ಥೆಯ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದಲ್ಲದೆ, ಈ ಸಂಸ್ಥೆಗೆ ದಿವಂಗತ ಶ್ರೀ ಎಸ್. ನಿಜಲಿಂಗಪ್ಪನವರ ಹೆಸರನ್ನು ಇಡಲಾಗುವುದು.

78. ಮಂಡ್ಯದ ವಿ.ಸಿ. ಕೃಷಿ ಕ್ಷೇತ್ರದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ವತಿಯಿಂದ ಕಬ್ಬು ಬೆಳೆಯ ಅಭಿವೃದ್ಧಿ ಮತ್ತು ಸಂಸ್ಕರಣೆಯ ಬಗ್ಗೆ ಸಂಶೋಧನೆ ನಡೆಸಲು ಸಕ್ಕರೆ ಸಂಸ್ಥೆಯೊಂದನ್ನು ಸ್ಥಾಪಿಸಲಾಗುವುದು.

ಆಹಾರ ಸಂಸ್ಕರಣೆ ಅಭಿವೃದ್ಧಿಗಾಗಿ ನಿಗಮ

79. ಆಹಾರ ಧಾನ್ಯಗಳು ಮತ್ತು ಹಣ್ಣು ತರಕಾರಿಗಳ ಸಂಸ್ಕರಣೆ ಮತ್ತು ಉತ್ಪನ್ನಗಳ ತಯಾರಿಕೆಗಾಗಿ ಸಂಘಟಿತವಾದ ವ್ಯವಸ್ಥೆಯನ್ನು ಕಲ್ಪಿಸುವುದರಿಂದ ರಾಜ್ಯದ ರೈತರಿಗೆ ಹೆಚ್ಚಿನ ಲಾಭ ಉಂಟಾಗುತ್ತದೆ. ಆಹಾರ ಸಂಸ್ಕರಣೆಯ ಉದ್ಯಮಗಳನ್ನು ವ್ಯವಸ್ಥಿತವಾಗಿ ಪ್ರೋತ್ಸಾಹಿಸಲು 2010-11ರಲ್ಲಿ ಅಭಿವೃದ್ಧಿ ನಿಗಮವೊಂದನ್ನು ಸ್ಥಾಪಿಸಲು ರೂ.10 ಕೋಟಿ ಬಂಡವಾಳವನ್ನು ನೀಡಲಾಗುವುದು. ಆಹಾರ ಸಂಸ್ಕರಣೆ ಪಾರ್ಕ್‌ಗಳ ಅಭಿವೃದ್ಧಿ,

ಶೀಥಲೀಕರಣ ಘಟಕಗಳ ಸ್ಥಾಪನೆ, ಆಹಾರ ಸಂಸ್ಕರಣೆ ವಿಷಯದಲ್ಲಿ ಶಿಕ್ಷಣ ಹಾಗೂ ತರಬೇತಿಗೆ ಪ್ರೋತ್ಸಾಹ ನೀಡುವುದು ಮುಂತಾದ ಚಟುವಟಿಕೆಗಳನ್ನು ಈ ನಿಗಮವು ನಿರ್ವಹಿಸುವುದು.

80. ಆಹಾರ ಸಂಸ್ಕರಣೆ ಘಟಕಗಳ ಸ್ಥಾಪನೆಗಾಗಿ ಪ್ರತಿ ಘಟಕಕ್ಕೆ 5 ಎಕರೆಗಳವರೆಗೆ ಕೃಷಿ ಜಮೀನನ್ನು ಖರೀದಿಸಲು ಭೂಸುಧಾರಣಾ ಕಾನೂನಿಗೆ ತಿದ್ದುಪಡಿ ಮಾಡಲಾಗುವುದು ಹಾಗೂ ಬಂಡವಾಳ ವೆಚ್ಚದ ಶೇ.25ರಷ್ಟು ಸಹಾಯಧನವಾಗಿ ನೀಡಲಾಗುವುದು.

'ಮರಳಿ ಹಳ್ಳಿಗೆ' : ಗ್ರಾಮೀಣ ಅಭಿವೃದ್ಧಿ

81. ಕರ್ನಾಟಕದ ಪಂಚಾಯತ್ ರಾಜ್ ವ್ಯವಸ್ಥೆಯು ಗ್ರಾಮೀಣ ಜನತೆಯ ಸಬಲೀಕರಣದ ಹಾದಿಯಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಿದೆ. ಈ ವ್ಯವಸ್ಥೆಯಲ್ಲಿ ಮಹಿಳೆಯರು ಅತ್ಯಂತ ಉತ್ಸಾಹದಿಂದ ಪಾಲ್ಗೊಳ್ಳುತ್ತಿರುವುದು ಅತ್ಯಂತ ಸಂತೋಷದ ಸಂಗತಿಯಾಗಿರುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರವನ್ನು ಇನ್ನಷ್ಟು ಬಲಪಡಿಸಲು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಶೇ.50 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲು ಸೂಕ್ತ ಕಾನೂನಿನ ತಿದ್ದುಪಡಿಯನ್ನು ಮಾಡಲು ನಿರ್ಧರಿಸಲಾಗಿದೆ.

82. ಪಂಚಾಯಿತಿರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಸರ್ಕಾರದಿಂದ ನೀಡಬೇಕಾದ ಅನುದಾನದ ಬಗ್ಗೆ ರಾಜ್ಯದ ಮೂರನೇ ಹಣಕಾಸಿನ ಆಯೋಗವು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗುತ್ತಿದ್ದು, ಈ ಬಗ್ಗೆ ನಿರ್ಧಾರವನ್ನು ಕೈಗೊಂಡ ನಂತರ ಸ್ಥಳೀಯ ಸಂಸ್ಥೆಗಳಿಗೆ ನೀಡುವ ಅನುದಾನವನ್ನು ಸೂಕ್ತವಾಗಿ ಪರಿಷ್ಕರಿಸಲಾಗುವುದು.

83. ರಾಜ್ಯದ ಗ್ರಾಮಗಳ ಸಮಗ್ರ ಅಭಿವೃದ್ಧಿಗಾಗಿ ಪ್ರಾರಂಭಿಸಲಾದ ಸುವರ್ಣಗ್ರಾಮೋದಯ ಯೋಜನೆಯ ಅನುಷ್ಠಾನಕ್ಕಾಗಿ ಈವರೆಗೆ ಸರ್ಕಾರವು ಸುಮಾರು ರೂ.900 ಕೋಟಿ ವೆಚ್ಚ ಮಾಡಿದೆ. ಈ ಯೋಜನೆಯನ್ನು 2010–11ರಲ್ಲಿ ಮುಂದುವರೆಸಲು ರೂ.1000 ಕೋಟಿಯವರೆಗೆ ಅನುದಾನವನ್ನು ಒದಗಿಸಲಾಗುತ್ತದೆ.

84. ಗ್ರಾಮೀಣ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳ ಮತ್ತು ಉತ್ಪಾದಕ ಆಸ್ತಿಗಳಾದ ಕೆರೆ, ಕಾಲುವೆ ಮುಂತಾದ ಕಾಮಗಾರಿಗಳ

ನಿರ್ಮಾಣಕ್ಕಾಗಿ ರಾಜ್ಯದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವ್ಯವಸ್ಥಿತ ಅನುಷ್ಠಾನವನ್ನು ಮಾಡಲಾಗುತ್ತಿದೆ. 2010–11ರಲ್ಲಿ ಈ ಯೋಜನೆಯಲ್ಲಿ ಸುಮಾರು ರೂ.3000 ಕೋಟಿ ವೆಚ್ಚ ಮಾಡಿ ಸುಮಾರು 18 ಕೋಟಿ ಮಾನವ ದಿನಗಳ ಉದ್ಯೋಗವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

85. 2009–10ರಲ್ಲಿ ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯ ಅಡಿಯಲ್ಲಿ ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ 2125 ಕಿ.ಮೀ.ನಷ್ಟು ರಸ್ತೆಯನ್ನು ರೂ.726 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. 2010–11ನೆಯ ಸಾಲಿನಲ್ಲಿ ಈ ಯೋಜನೆಯಡಿ ರೂ.1500 ಕೋಟಿ ಬಳಸಲು ಉದ್ದೇಶಿಸಿದ್ದು ಇದಕ್ಕಾಗಿ ರಾಜ್ಯ ಸರ್ಕಾರದ ಪಾಲಿನ ಅನುದಾನವಾಗಿ ರೂ.100 ಕೋಟಿ ಒದಗಿಸಲಾಗುತ್ತಿದೆ.

86. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ರಾಜ್ಯ ಕಾರ್ಯಕ್ರಮಗಳ ಅಡಿಯಲ್ಲಿ ರೂ.632 ಕೋಟಿಗಳ ಒಟ್ಟು ಅನುದಾನವನ್ನು ಪ್ರತ್ಯೇಕವಾಗಿ ನೀಡುತ್ತಿದ್ದು, ಇದರಿಂದ ರಾಜ್ಯದ ಸುಮಾರು 5000 ಕಿ.ಮೀ. ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಸಾಧ್ಯವಾಗುತ್ತದೆ.

87. ಗ್ರಾಮೀಣ ರಸ್ತೆಗಳ ವಾರ್ಷಿಕ ಹಾಗೂ ವಿಶೇಷ ನಿರ್ವಹಣೆಗಾಗಿ ಈ ಆಯವ್ಯಯದಲ್ಲಿ ರೂ.150 ಕೋಟಿ ಒದಗಿಸಲಾಗಿದೆ.

88. ಗ್ರಾಮೀಣ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಈಗಾಗಲೇ ರಾಜ್ಯದಲ್ಲಿ ರೂ.997 ಕೋಟಿ ವೆಚ್ಚದಲ್ಲಿ ವಿಶ್ವ ಬ್ಯಾಂಕ್ ನೆರವಿನ 'ಜಲನಿರ್ಮಲ್' ಯೋಜನೆಯನ್ನು 11 ಜಿಲ್ಲೆಗಳಲ್ಲಿ ಅನುಷ್ಠಾನ ಮಾಡುತ್ತಿದ್ದು, ಈ ಯೋಜನೆಯ 2ನೇ ಹಂತವನ್ನು ವಿಸ್ತರಿಸಲು ರೂ.935 ಕೋಟಿಯಷ್ಟು ಹೆಚ್ಚುವರಿ ನೆರವನ್ನು ನೀಡಲು ವಿಶ್ವಬ್ಯಾಂಕ್ ಒಪ್ಪಿದೆ. ಫ್ಲೋರೈಡ್ ಮುಂತಾದ ಅಂಶಗಳಿಂದ ದೋಷಯುಕ್ತ ನೀರು ದೊರೆಯುತ್ತಿರುವ ಗ್ರಾಮಗಳಲ್ಲಿ ಈ ಯೋಜನೆಯ ಹೆಚ್ಚುವರಿ ಭಾಗವನ್ನು ಅನುಷ್ಠಾನ ಮಾಡಲು ಉದ್ದೇಶಿಸಿದೆ.

89. ಚಾಮರಾಜನಗರ ಜಿಲ್ಲೆಯ ಗ್ರಾಮಗಳಿಗೆ ಕಬಿನಿ ನದಿಯಿಂದ ಕುಡಿಯುವ ನೀರನ್ನು ಒದಗಿಸಲು ರೂ.100 ಕೋಟಿಯ ಯೋಜನೆಯನ್ನು ರೂಪಿಸಲಾಗುವುದು.

90. ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರ ಕೆರೆಯಿಂದ ಸಿರಿಗೆರೆ ಪಟ್ಟಣಕ್ಕೆ ಮತ್ತು ಮಾರ್ಗಮಧ್ಯೆ ಇರುವ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲು ರೂ.25 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು.

91. ತುಮಕೂರು ಜಿಲ್ಲೆಯ ಗ್ರಾಮಗಳಿಗೆ ಹೇಮಾವತಿ ಯೋಜನೆಯ ಕಾಲುವೆಯಿಂದ ಕುಡಿಯುವ ನೀರನ್ನು ಒದಗಿಸಲು ರೂ.25 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು.

92. ರಾಜ್ಯದ ಗ್ರಾಮಾಂತರ ಪ್ರದೇಶಗಳ ಕುಡಿಯುವ ನೀರಿನ ಯೋಜನೆಗಳಿಗಾಗಿ ಕೇಂದ್ರದ ಅನುದಾನವೂ ಸೇರಿದಂತೆ 2010–11ರಲ್ಲಿ ರೂ.1000 ಕೋಟಿ ವಿನಿಯೋಗಿಸಲಾಗುವುದು.

ಹಿಂದುಳಿದ ಪ್ರದೇಶಗಳ ಅಭಿವೃದ್ಧಿ

93. ಡಾ॥ ನಂಜುಂಡಪ್ಪ ಅವರ ವರದಿಯ ಆಧಾರದ ಮೇಲೆ ರಾಜ್ಯದ 114 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಯನ್ನು ತ್ವರಿತಗೊಳಿಸಲು ಕಳೆದ ನಾಲ್ಕು ವರ್ಷಗಳಿಂದ ರಾಜ್ಯದ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಅಡಕಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನಕ್ಕಾಗಿ ಉನ್ನತ ಮಟ್ಟದ ಸಮಿತಿಯೊಂದನ್ನು ಶ್ರೀ ಶಶೀಲ್ ನಮೋಶಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. 2010–11ರ ಸಾಲಿನಲ್ಲಿ ಈ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ರೂ.2580 ಕೋಟಿ ಅನುದಾನದಿಂದ ವಿಶೇಷ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

94. ರಾಜ್ಯದಲ್ಲಿರುವ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿ, ಕರಾವಳಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಮುಂತಾದುವುಗಳ ಅಭಿವೃದ್ಧಿ ಕಾರ್ಯಗಳಿಗಾಗಿ 2010–11ರಲ್ಲಿ ರೂ.53 ಕೋಟಿ ಒದಗಿಸಲಾಗುತ್ತಿದೆ.

95. ಮಾನ್ಯ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಗಾಗಿ 2010–11ರಲ್ಲಿ ರೂ.300 ಕೋಟಿಗಳನ್ನು ಒದಗಿಸಲಾಗುವುದು.

ನೂತನ ವಸತಿ ಯೋಜನೆಗಳು

96. 2008-09 ಮತ್ತು 2009-10ರಲ್ಲಿ ಇಂದಿರಾ ಆವಾಸ್, ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳ ಅಡಿಯಲ್ಲಿ ಒಟ್ಟು 5.35 ಲಕ್ಷ ಮನೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಿಸಲಾಗಿದೆ. ಇದಲ್ಲದೆ, ನೆರೆಪೀಡಿತ ಗ್ರಾಮಗಳಲ್ಲಿ ಸುಮಾರು 75000 ಮನೆಗಳನ್ನು ನಿರ್ಮಿಸುವ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಲಾಗಿದ್ದು ಈ ಮನೆಗಳ ನಿರ್ಮಾಣ ಕಾರ್ಯವನ್ನು ಜೂನ್ ತಿಂಗಳಿಗೂ ಮುನ್ನ ಪೂರ್ಣಗೊಳಿಸಲು ದಾನಿ ಸಂಸ್ಥೆಗಳಿಗೆ ಅಗತ್ಯ ಸಹಾಯವನ್ನು ನೀಡಲಾಗುತ್ತಿದೆ.

97. ಗ್ರಾಮೀಣ ವಸತಿಯೋಜನೆಗಳಲ್ಲಿ ಪ್ರತಿ ಮನೆಯ ನಿರ್ಮಾಣಕ್ಕೆ ಮಾಡಲಾಗುತ್ತಿರುವ ವೆಚ್ಚವನ್ನು ರೂ.40,000ದಿಂದ ರೂ.60,000ಕ್ಕೆ ಸುಧಾರಿತ ಗ್ರಾಮೀಣ ವಸತಿ ಯೋಜನೆಯನ್ನು ರೂಪಿಸಲು ನಿರ್ಧರಿಸಲಾಗಿದೆ. ಇದರಲ್ಲಿ ಫಲಾನುಭವಿ ಕುಟುಂಬದ ವತಿಯಿಂದ ರೂ.10,000 ವಂತಿಗೆಯನ್ನು ಪಡೆಯಲು ಸಾಧ್ಯವಾಗುವಂತೆ ಬ್ಯಾಂಕುಗಳಿಂದ ಕಡಿಮೆ ಬಡ್ಡಿಯ ಸಾಲದ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಈ ಸುಧಾರಿತ ವಸತಿ ಯೋಜನೆಗಳಲ್ಲಿ ಈ ವರ್ಷ 1.50 ಲಕ್ಷ ಮನೆಗಳನ್ನು ನಿರ್ಮಿಸಲು ಉದ್ದೇಶಿಸಿದೆ.

98. ನಗರ ಪ್ರದೇಶಗಳ ವಸತಿಹೀನರಿಗಾಗಿ 2010-11ರಲ್ಲಿ 50,000 ಮನೆಗಳನ್ನು ನಿರ್ಮಿಸಲು ವಾಜಪೇಯಿ ವಸತಿ ಯೋಜನೆಯನ್ನು ಪ್ರಾರಂಭಿಸಲಾಗುವುದು. ಈ ಯೋಜನೆಯಡಿ ಫಲಾನುಭವಿಗಳ ವಂತಿಗೆ, ಬ್ಯಾಂಕುಗಳ ಸಾಲ ಹಾಗೂ ಸರ್ಕಾರದ ಸಹಾಯಧನ ಒಳಗೊಂಡಂತೆ ಪ್ರತಿ ಮನೆಗೆ ರೂ.1,25,000 ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಲಾಗುವುದು.

99. ನಗರ ಪ್ರದೇಶಗಳು ಮತ್ತು ಸಣ್ಣ ಪಟ್ಟಣಗಳ ಮಧ್ಯಮವರ್ಗಗಳ ವಸತಿ ಸಮಸ್ಯೆಯನ್ನು ಪರಿಹರಿಸಲು 'ನನ್ನ ಮನೆ' ಯೋಜನೆಯನ್ನು ಪ್ರಾರಂಭಿಸಿ ಸುಲಭ ಬೆಲೆಯಲ್ಲಿ ಮನೆಗಳನ್ನು ಒದಗಿಸಲಾಗುವುದು.

100. ಗ್ರಾಮೀಣ ಪ್ರದೇಶಗಳಲ್ಲಿ ನಿವೇಶನ ರಹಿತ ಕುಟುಂಬಗಳಿಗೆ ಉಚಿತ ನಿವೇಶನಗಳನ್ನು ಒದಗಿಸಲು 2010-11ರಲ್ಲಿ ರೂ.75 ಕೋಟಿ ಒದಗಿಸಲಾಗುವುದು.

101. 2010–11ರಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ವಸತಿ ಸೌಕರ್ಯಗಳನ್ನು ಒದಗಿಸಲು ಒಟ್ಟು ರೂ.920 ಕೋಟಿ ವಿನಿಯೋಗಿಸಲಾಗುವುದು.

102. ಆಶ್ರಯ ಯೋಜನೆಯ ಅಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ನೀಡಿದ ಸಾಲದ ಮೇಲಿನ ಮಾರ್ಚ್ 2010ರವರೆಗಿನ ಅಸಲಿನ ಕಂತುಗಳನ್ನು ಡಿಸೆಂಬರ್ 2010ರೊಳಗೆ ಮರುಪಾವತಿ ಮಾಡುವ ಫಲಾನುಭವಿಗಳಿಗೆ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗುವುದು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

103. ಕರ್ನಾಟಕದಲ್ಲಿ ಸಾಕ್ಷರತೆಯ ಪ್ರಮಾಣವು 2001ರ ವೇಳೆಗೆ ಶೇ.66.64 ರಷ್ಟಿದ್ದು ಸಾಕ್ಷರತೆಯ ಪ್ರಮಾಣವನ್ನು ತೀವ್ರವಾಗಿ ಹೆಚ್ಚಿಸಲು ಪ್ರಾಥಮಿಕ ಶಾಲೆಗಳಿಗೆ ಬಹುತೇಕ 100ಕ್ಕೆ 100ರಷ್ಟು ಮಕ್ಕಳು ಸೇರ್ಪಡೆಯಾಗಲು ಅವಕಾಶ ಕಲ್ಪಿಸಿದೆ. 2008–09ರಲ್ಲಿ ಸುಮಾರು 55 ಲಕ್ಷ ಬಾಲಕ ಬಾಲಕಿಯರು ಸುಮಾರು 53,000 ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಅಂತೆಯೇ, ರಾಜ್ಯದಲ್ಲಿ ಒಟ್ಟು 11,835 ಪ್ರೌಢ ಶಾಲೆಗಳಿದ್ದು ಅವುಗಳಲ್ಲಿ ಸುಮಾರು 25 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿ–ವಿದ್ಯಾರ್ಥಿನಿ ಯರಿದ್ದಾರೆ.

104. ರಾಜ್ಯದ ಎಲ್ಲ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಅಕ್ಷರ ದಾಸೋಹ ಯೋಜನೆಯಡಿ ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸು ವುದಲ್ಲದೆ, ಉಚಿತ ಸಮವಸ್ತ್ರ ಹಾಗೂ ಪಠ್ಯ ಪುಸ್ತಕಗಳನ್ನು ಒದಗಿಸಲಾ ಗುತ್ತಿದೆ. ಕರ್ನಾಟಕವು ಕೇಂದ್ರ ಸರ್ಕಾರದ ಸರ್ವಶಿಕ್ಷಾ ಅಭಿಯಾನವನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಿರುವ ರಾಜ್ಯಗಳಲ್ಲಿ ಒಂದಾಗಿದೆ. 2010–11ರಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ವ್ಯವಸ್ಥೆಗಾಗಿ ಒಟ್ಟು ರೂ.8830 ಕೋಟಿ ವೆಚ್ಚ ಮಾಡಲಾಗುವುದು.

105. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾಭ್ಯಾಸದ ನಂತರ ಹಲವು ಮಕ್ಕಳು, ವಿಶೇಷವಾಗಿ ಹೆಣ್ಣುಮಕ್ಕಳು ತಮ್ಮ ಶಿಕ್ಷಣವನ್ನು ಮೊಟಕುಗೊಳಿಸುತ್ತಿದ್ದಾರೆ. ರೈತ ಕುಟುಂಬಗಳು ಹಾಗೂ ಬಡ ಕೂಲಿಕಾರರ ಮಕ್ಕಳು ಸಾಕಷ್ಟು ಶಿಕ್ಷಣ ಪಡೆಯದೆ ಉದ್ಯೋಗಾವಕಾಶಗಳಿಂದ ವಂಚಿತರಾಗುವುದನ್ನು ತಡೆಯಬೇಕಾಗಿದೆ. ಆದ್ದರಿಂದ, **ರಾಜ್ಯದ ಪ್ರತಿಯೊಂದು ಶಾಲೆಯ ಮಕ್ಕಳು ಕನಿಷ್ಠ 10ನೇ ತರಗತಿಯವರೆಗೆ ಶಿಕ್ಷಣ ಪಡೆಯಲು**

ಅಗತ್ಯವಿರುವ ಎಲ್ಲಾ ಸೌಕರ್ಯಗಳನ್ನು 3 ವರ್ಷಗಳ ಅವಧಿಯಲ್ಲಿ ಒದಗಿಸಲು ಸರ್ಕಾರ ಸಂಕಲ್ಪ ಮಾಡಿದೆ.

106. ಪ್ರೌಢ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿರುವ ಗ್ರಾಮೀಣ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಸರ್ಕಾರದಿಂದ ಉಚಿತವಾಗಿ ಬೈಸಿಕಲ್ ನೀಡುವ ಯೋಜನೆಯಿಂದ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶಿಕ್ಷಣ ಪಡೆಯಲು ಬಹುದೊಡ್ಡ ಉತ್ತೇಜನ ದೊರೆತಿದ್ದು ಈ ಯೋಜನೆಯನ್ನು ಮುಂದುವರಿಸಲು 2010–11ರಲ್ಲಿ ರೂ.200 ಕೋಟಿ ವೆಚ್ಚ ಮಾಡಲಾಗುವುದು.

107. ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸುವುದರ ಜೊತೆಗೆ ರಾಜ್ಯದ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಿಕ್ಷಣದ ತಳಪಾಯವನ್ನು ಒದಗಿಸಲು ಶಾಲಾ ಶಿಕ್ಷಣದ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಅತ್ಯಂತ ಅವಶ್ಯಕವಾಗಿದೆ. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನದ ಅಡಿಯಲ್ಲಿ ರಾಜ್ಯವು ಸುಮಾರು ರೂ.700 ಕೋಟಿ ವೆಚ್ಚದಲ್ಲಿ ರಾಜ್ಯದಾದ್ಯಂತ 545 ಪ್ರೌಢಶಾಲೆಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಲು ಯೋಜನೆಯನ್ನು ರೂಪಿಸಿದೆ. 2010–11ರಲ್ಲಿ 74 ಮಾದರಿ ಪ್ರೌಢ ಶಾಲೆಗಳನ್ನು ಸಹ ಈ ಯೋಜನೆಯಲ್ಲಿ ಸ್ಥಾಪಿಸಲಾಗುವುದು.

108. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಈಗಾಗಲೇ 2,64,000 ಶಿಕ್ಷಕರು ಕೆಲಸ ಮಾಡುತ್ತಿದ್ದು ಸರಾಸರಿ 28 ವಿದ್ಯಾರ್ಥಿಗಳಿಗೆ ಒಬ್ಬರಂತೆ ಶಿಕ್ಷಕರನ್ನು ಒದಗಿಸಲಾಗಿದೆ. ಇದು ರಾಷ್ಟ್ರೀಯ ಮಾನದಂಡವಾದ 40 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರ ಪ್ರಮಾಣಕ್ಕೆ ಹೋಲಿಸಿದರೆ ಉತ್ತಮವಾಗಿ ರುವುದು ಗಮನಾರ್ಹ. ಶಿಕ್ಷಕರ ಕೊರತೆಯನ್ನು ಈಗಾಗಲೇ ಬಹುತೇಕ ಪೂರೈಸಿರುವುದರಿಂದ ಪ್ರಾಥಮಿಕ ಶಿಕ್ಷಣದಲ್ಲಿ ಗುಣಮಟ್ಟವನ್ನು ಹೆಚ್ಚಿಸಲು ಈಗ ಆದ್ಯ ಗಮನ ಕೊಡಬೇಕಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸೂಕ್ತ ಸೌಲಭ್ಯಗಳನ್ನು ಒದಗಿಸುವ ಪ್ರಯತ್ನ ನಡೆಯಬೇಕಾಗಿದೆ.

109. ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಅಗತ್ಯ ಪ್ರಮಾಣದ ಕೊಠಡಿಗಳು, ಪೀಠೋಪಕರಣಗಳು, ಕುಡಿಯುವ ನೀರಿನ ಸೌಕರ್ಯ, ಮತ್ತು ಶೌಚಾಲಯ ವ್ಯವಸ್ಥೆಯನ್ನು ಒದಗಿಸಲು 2010–11ರಲ್ಲಿ ರೂ.100 ಕೋಟಿ ಶಾಲಾ ಸೌಲಭ್ಯ ನಿಧಿಯನ್ನು

ಒದಗಿಸಲಾಗುವುದು. ಎಲ್ಲಾ ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿ ನೀರು ಸರಬರಾಜು ಮತ್ತು ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸುವ ಜವಾಬ್ದಾರಿಯನ್ನು ರಾಜ್ಯದ ಗ್ರಾಮೀಣ ಮೂಲಸೌಲಭ್ಯ ನಿಗಮಕ್ಕೆ ವಹಿಸಲು ಉದ್ದೇಶಿಸಿದೆ.

110. ಶಾಲಾ ಮಟ್ಟದಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಶಿಕ್ಷಕರಿಗೆ ಉನ್ನತ ಶಿಕ್ಷಣದ ಅವಕಾಶಗಳನ್ನು ಒದಗಿಸಬೇಕಾಗಿದೆ. ಅದಕ್ಕಾಗಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳಿಗಾಗಿ ಅಧ್ಯಯನವನ್ನು ಮುಂದುವರೆಸುವ ಶಿಕ್ಷಕರಿಗೆ 2 ವರ್ಷಗಳವರೆಗೆ ತರಬೇತಿಗೆ ಅವಕಾಶ ಮಾಡಲು ವಿಶೇಷ ಅನುದಾನವಾಗಿ ರೂ.5 ಕೋಟಿ ಒದಗಿಸಲಾಗುವುದು.

111. ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ತೆರೆಯಲಾಗಿರುವ ಸುಮಾರು 250 ಪದವಿ ಪೂರ್ವ ಕಾಲೇಜುಗಳಿಗೆ ಅಗತ್ಯವಿರುವ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದ್ದು ಇದಕ್ಕಾಗಿ 2010–11ರಲ್ಲಿ ರೂ.80 ಕೋಟಿ ನೀಡಲಾಗುವುದು.

ಉನ್ನತ ಶಿಕ್ಷಣ

112. ಪ್ರಸ್ತುತ ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಪಡೆಯುವ ಯುವಕರ ಪ್ರಮಾಣವು ಕೇವಲ ಶೇ.12 ಇದ್ದು ಇದನ್ನು ಮುಂಬರುವ ವರ್ಷಗಳಲ್ಲಿ ಶೇ.25ಕ್ಕೆ ಏರಿಸುವುದು ಸರ್ಕಾರದ ಉದ್ದೇಶವಾಗಿದೆ. ರಾಜ್ಯದ ಅಭಿವೃದ್ಧಿಯ ಮುನ್ನೋಟದಲ್ಲಿ ಸೂಚಿಸಿರುವಂತೆ ಸುಶಿಕ್ಷಿತ ಸಮಾಜದ ನಿರ್ಮಾಣಕ್ಕಾಗಿ ಮತ್ತು ಜ್ಞಾನಾಧಾರಿತ ಅರ್ಥವ್ಯವಸ್ಥೆಯ ವಿಸ್ತರಣೆಗಾಗಿ ಉನ್ನತ ಶಿಕ್ಷಣಕ್ಕೆ ರಾಜ್ಯದಲ್ಲಿ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಬೇಕಾಗಿದೆ.

113. ಇತ್ತೀಚೆಗೆ ಸ್ಥಾಪಿಸಲಾದ, ತುಮಕೂರು ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯಗಳಿಗೆ, ಬಿಜಾಪುರದಲ್ಲಿರುವ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ತಲಾ ರೂ.10 ಕೋಟಿ ಅನುದಾನ ನೀಡಲಾಗುವುದು. ಹಂಪೆಯ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಅಗತ್ಯ ಸೌಕರ್ಯಗಳ ಅಭಿವೃದ್ಧಿಗಾಗಿ ರೂ.5 ಕೋಟಿ ನೀಡಲಾಗುವುದು.

114. ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣದ ಸೌಲಭ್ಯಗಳನ್ನು ಉತ್ತಮಪಡಿಸಲು ವಿಶ್ವ ಬ್ಯಾಂಕ್ ನೆರವಿನ ಟೆಕ್ವಿಪ್ ಯೋಜನೆಯಡಿ ರೂ.80 ಕೋಟಿ ವೆಚ್ಚದಲ್ಲಿ ಇಂಜಿನಿಯರಿಂಗ್ ಕಾಲೇಜುಗಳ ಮೂಲ ಸೌಕರ್ಯಗಳನ್ನು ಬಲಪಡಿಸ ಲಾಗುವುದು.

115. ನೂತನವಾಗಿ ಸ್ಥಾಪಿಸಲಾದ 10 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು 22 ಪಾಲಿಟೆಕ್ನಿಕ್‌ಗಳ ಕಟ್ಟಡ ಹಾಗೂ ಯಂತ್ರೋಪ ಕರಣಗಳಿಗಾಗಿ ರೂ.76 ಕೋಟಿ ವಿನಿಯೋಗಿಸಲಾಗುವುದು.

116. ರಾಜ್ಯದಲ್ಲಿರುವ 357 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಈಗ ಕೇವಲ 167 ಕಾಲೇಜುಗಳಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳ ಬೋಧನೆಗೆ ಅವಕಾಶ ಕಲ್ಪಿಸಿದೆ. ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಉತ್ತಮ ಉದ್ಯೋಗಾವಕಾಶಗಳನ್ನು ಕಲ್ಪಿಸುವ ದೃಷ್ಟಿಯಿಂದ ಪ್ರತಿಯೊಂದು ಕಾಲೇಜಿನಲ್ಲಿ ವಿಜ್ಞಾನ ಮತ್ತು ವಾಣಿಜ್ಯ ಪದವಿಗಳಿಗಾಗಿ ವ್ಯಾಸಂಗ ಮಾಡಲು ವ್ಯವಸ್ಥೆ ಮಾಡಬೇಕಾಗಿದ್ದು 2010–11ರಲ್ಲಿ 100 ಕಾಲೇಜುಗಳಿಗೆ ಈ ಸೌಲಭ್ಯವನ್ನು ರೂ.50 ಕೋಟಿ ವೆಚ್ಚದಲ್ಲಿ ವಿಸ್ತರಿಸಲಾಗುವುದು ಮತ್ತು 2011–12ರ ವೇಳೆಗೆ ಎಲ್ಲ ಕಾಲೇಜುಗಳಿಗೆ ಈ ಸೌಲಭ್ಯವನ್ನು ಕಲ್ಪಿಸಲಾಗುವುದು.

117. ರಾಜ್ಯದ ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಉದ್ಯೋಗಾ ರ್ಹತೆಯನ್ನು ಹೆಚ್ಚಿಸಲು ಅಗತ್ಯವಿರುವ ಹೆಚ್ಚಿನ ಭಾಷಾ ಜ್ಞಾನ, ಸಂವಹನ ಚತುರತೆ, ಮತ್ತು ವ್ಯಕ್ತಿತ್ವ ನಿರೂಪಣೆಗಾಗಿ ವಿಶೇಷ ತರಬೇತಿಯನ್ನು ನೀಡಲು ನೂತನ ಯೋಜನೆಯೊಂದನ್ನು ಪ್ರಾರಂಭಿಸಬೇಕಾಗಿದ್ದು 2010–11ರಲ್ಲಿ ಇದಕ್ಕಾಗಿ ರೂ.10 ಕೋಟಿ ನೀಡಲಾಗುವುದು.

118. ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯರ ಪಟ್ಟಾಭಿಷೇಕದ 500ನೆಯ ವಾರ್ಷಿಕೋತ್ಸವದ ಸಂದರ್ಭದ ಹಿನ್ನೆಲೆಯಲ್ಲಿ ಬಳ್ಳಾರಿಯಲ್ಲಿ ನೂತನ ವಿಜಯನಗರ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ರೂ.10 ಕೋಟಿ ಒದಗಿಸಲಾಗುವುದು.

119. ರಾಜ್ಯದಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಲು ಬಂಡವಾಳ ತೊಡಗಿಸುವ ಸಂಸ್ಥೆಗಳಿಗೆ ಸರ್ಕಾರಿ ಭೂಮಿಯನ್ನು ಮಾರ್ಗದರ್ಶಿ ಬೆಲೆಯ ಆಧಾರದ ಮೇಲೆ ಒದಗಿಸಲು ವಿಶೇಷ ನಿಯಮಗಳನ್ನು ರೂಪಿಸಲಾಗುವುದು.

120. ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಡಿಎನ್‌ಎ ಡಯಾಗ್ನಾಸ್ಟಿಕ್ ಸಂಸ್ಥೆಗೆ ಸಂಶೋಧನಾ ಚಟುವಟಿಕೆಗಳಿಗಾಗಿ ರೂ.4 ಕೋಟಿ ಒದಗಿಸಲಾಗುವುದು.

121. ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಲಯ ಸಂಸ್ಥೆಗೆ (NLSIU) ನೀಡುತ್ತಿರುವ ವಾರ್ಷಿಕ ಅನುದಾನವನ್ನು ರೂ.1 ಕೋಟಿಗೆ ಹೆಚ್ಚಿಸಲಾಗುವುದು.

122. ಬೆಂಗಳೂರಿನಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯದ ಸ್ಥಾಪನೆಗೆ 2010–11ರಲ್ಲಿ ರೂ.5 ಕೋಟಿ ಒದಗಿಸಲಾಗುವುದು.

123. ಪಾಲಿ ಭಾಷೆಯ ಅಧ್ಯಯನಕ್ಕಾಗಿ ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ವಿಶೇಷ ಪೀಠವನ್ನು ಸ್ಥಾಪಿಸಲು ರೂ.1 ಕೋಟಿ ನೀಡಲಾಗುವುದು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ

124. ರಾಜ್ಯದ ಜನತೆಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸಲು ಕಳೆದ ಎರಡು ವರ್ಷಗಳಲ್ಲಿ ವಿನೂತನ ಯೋಜನೆಗಳನ್ನು ಪ್ರಾರಂಭಿಸಲಾಗಿದೆ. 'ಆರೋಗ್ಯ ಕವಚ' ವ್ಯವಸ್ಥೆಯ ಮೂಲಕ 108 ಸಂಖ್ಯೆಯ ಸಹಾಯವಾಣಿ ಮೂಲಕ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ತುರ್ತು ಚಿಕಿತ್ಸೆಗಾಗಿ ಉಚಿತ ಆಂಬುಲೆನ್ಸ್ ಸೇವೆಯನ್ನು ಪಡೆಯಲು 517 ವಾಹನಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಇದು ಲಕ್ಷಾಂತರ ಜನರಿಗೆ ತುರ್ತು ಚಿಕಿತ್ಸೆಯ ಸೌಲಭ್ಯವನ್ನು ಒದಗಿಸಲು ಯಶಸ್ವಿಯಾಗಿದೆ.

125. ಗುಲ್ಬರ್ಗ ವಿಭಾಗದಲ್ಲಿ **'ವಾಜಪೇಯಿ ಆರೋಗ್ಯ ಶ್ರೀ'** ಯೋಜನೆಯನ್ನು ಇತ್ತೀಚೆಗೆ ಪ್ರಾರಂಭಿಸಲಾಗಿದ್ದು ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸುಮಾರು 400ಕ್ಕೂ ಹೆಚ್ಚು ಗಂಭೀರ ಸ್ವರೂಪದ ಕಾಯಿಲೆಗಳಿಗೆ ಉಚಿತ ಚಿಕಿತ್ಸೆ ಮತ್ತು ಶಸ್ತ್ರಕ್ರಿಯೆಗಳನ್ನು ನೀಡಿ ಜೀವದಾನ ಮಾಡುವ ಯೋಜನೆಯಾಗಿ ಪರಿಣಮಿಸಿದ್ದು ಇದನ್ನು ಹಂತಹಂತವಾಗಿ ರಾಜ್ಯದ ಇತರ ವಿಭಾಗಗಳಿಗೆ ವಿಸ್ತರಿಸಲಾಗುವುದು. ಇದಕ್ಕಾಗಿ ಈ ಸಾಲಿನಲ್ಲಿ ರೂ.40 ಕೋಟಿ ಒದಗಿಸಲಾಗುವುದು.

126. ರಾಜ್ಯದಲ್ಲಿ 2193 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು ಅವುಗಳಲ್ಲಿ 975 ಕೇಂದ್ರಗಳನ್ನು 24 ಗಂಟೆಗಳ ಆರೋಗ್ಯ ಕೇಂದ್ರಗಳಾಗಿ ಪರಿವರ್ತಿಸಲಾಗಿದೆ. ಗ್ರಾಮೀಣ ಪ್ರದೇಶಗಳ ಪ್ರತಿ 25,000 ಜನಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಹೆರಿಗೆ ವ್ಯವಸ್ಥೆಯನ್ನು ನೀಡಲು ಮೂಲಭೂತ ಸೌಲಭ್ಯಗಳನ್ನು ಮತ್ತು ಹೆಚ್ಚುವರಿ ಸಿಬ್ಬಂದಿಯನ್ನು ಒದಗಿಸಲಾಗುತ್ತಿದೆ. ವಿವಿಧ ಹಂತದ ಆಸ್ಪತ್ರೆಗಳಲ್ಲಿ

ಅಗತ್ಯವಿರುವ ಸಿಬ್ಬಂದಿಯನ್ನು ಒದಗಿಸಲು 5,021 ಅರೆ ವೈದ್ಯಕೀಯ ಸಿಬ್ಬಂದಿಯನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

127. ತಾಲ್ಲೂಕು ಮಟ್ಟದಲ್ಲಿ ತಜ್ಞ ವೈದ್ಯರಿಂದ ಉತ್ತಮ ಆರೋಗ್ಯ ಸೌಲಭ್ಯಗಳನ್ನು ಒದಗಿಸಲು 142 ತಾಲ್ಲೂಕು ಆಸ್ಪತ್ರೆಗಳನ್ನು ಪ್ರಾಥಮಿಕ ರೆಫರಲ್ ಆಸ್ಪತ್ರೆಗಳಾಗಿ ಉನ್ನತೀಕರಿಸಲು ಉದ್ದೇಶಿಸಿದೆ. ತಾಲ್ಲೂಕು ಆಸ್ಪತ್ರೆಗಳು ಮತ್ತು ಪ್ರಾಥಮಿಕ ಆರೋಗ್ಯಕೇಂದ್ರಗಳ ಕಟ್ಟಡಗಳ ನಿರ್ಮಾಣಕ್ಕಾಗಿ 2010-11ರಲ್ಲಿ ರೂ.100 ಕೋಟಿ ಅನುದಾನವನ್ನು ಒದಗಿಸಲಾಗುತ್ತಿದೆ.

128. ಗ್ರಾಮೀಣ ಮಹಿಳೆಯರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಹೆರಿಗೆ ಸೌಲಭ್ಯವನ್ನು ಒದಗಿಸಲಾಗುವುದು. ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆ ಸೌಲಭ್ಯವನ್ನು ಪಡೆದ ಗ್ರಾಮೀಣ ಮಹಿಳೆಯರಿಗೆ ರೂ.1000 ವಿಶೇಷ ಸಹಾಯಧನ ನೀಡಲಾಗುವುದು.

129. 2010-11ರಿಂದ ಪ್ರಾರಂಭಿಸಿ ಪ್ರತಿ ವರ್ಷವೂ ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ನೊಂದಾಯಿಸಿರುವ ಎಲ್ಲಾ ಹೆಣ್ಣುಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆಯನ್ನು ಮಾಡಿಸಲು ಹಾಗೂ ಅಗತ್ಯವಿರುವಲ್ಲಿ ಉಚಿತ ಚಿಕಿತ್ಸೆಯನ್ನು ನೀಡಲು ಯೋಜನೆಯನ್ನು ರೂಪಿಸಲಾಗುವುದು.

ವೈದ್ಯಕೀಯ ಶಿಕ್ಷಣ

130. ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣದ ಸೌಲಭ್ಯವನ್ನು ವಿಸ್ತರಿಸಲು ಕಳೆದ ಮೂರು ವರ್ಷಗಳಲ್ಲಿ ಆರು ನೂತನ ವೈದ್ಯಕೀಯ ಕಾಲೇಜುಗಳನ್ನು ಸರ್ಕಾರಿ ವಲಯದಲ್ಲಿ ಸ್ಥಾಪಿಸಲಾಗಿದ್ದು ಇದಕ್ಕಾಗಿ ಸುಮಾರು ರೂ.583 ಕೋಟಿ ವೆಚ್ಚ ಮಾಡಲಾಗಿದೆ. ಇದಲ್ಲದೆ, ನೆಫ್ರಾಲಜಿ, ಡಯಾಬೆಟಾಲಜಿ, ವಿಷಯಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ. ಬೆಂಗಳೂರಿನ ರಾಜೀವ್‌ಗಾಂಧಿ ಇನ್ಸಿಟಿಟ್ಯೂಟ್ ಆಫ್ ಚೆಸ್ಟ್ ಡಿಸೀಸಸ್ ಸಂಸ್ಥೆಯನ್ನು ಸ್ವಾಯತ್ತ ಸಂಸ್ಥೆಯಾಗಿ ಉನ್ನತೀಕರಿಸಲಾಗಿದೆ.

131. 2010-11ರಲ್ಲಿ ಹುಬ್ಬಳ್ಳಿಯಲ್ಲಿ ಕ್ಯಾನ್ಸರ್ ಚಿಕಿತ್ಸೆಯ ಸೌಲಭ್ಯವನ್ನು ಕಲ್ಪಿಸಲು ಕಿದ್ವಾಯಿ ಆಸ್ಪತ್ರೆಯ ಶಾಖೆಯನ್ನು ತೆರೆಯಲು ರೂ.5 ಕೋಟಿ ಒದಗಿಸಲಾಗಿದೆ.

132. 2010-11ರಲ್ಲಿ ಆಯ್ದ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶಾವಕಾಶಗಳನ್ನು ವಿಸ್ತರಿಸಲು ರೂ.20 ಕೋಟಿ ಹೆಚ್ಚುವರಿ ಅನುದಾನವನ್ನು ನೀಡಲಾಗುವುದು.

133. ಬಳ್ಳಾರಿಯಲ್ಲಿ ವಿಮ್ಸ್ ಸಂಸ್ಥೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಖಾಸಗಿ ಸಹಭಾಗಿತ್ವದೊಡನೆ ಸ್ಥಾಪಿಸಲು ರೂ.10 ಕೋಟಿಯನ್ನು ವಿನಿಯೋಗಿಸಲಾಗುವುದು.

134. ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.20 ಕೋಟಿ ಒದಗಿಸಲಾಗುವುದು.

135. ಹೃದಯದ ಶಸ್ತ್ರ ಚಿಕಿತ್ಸೆ ಮತ್ತು ಮೂತ್ರಪಿಂಡದ ಕಸಿಗೆ ಒಳಗಾಗಬೇಕಾದ ಬಡರೋಗಿಗಳಿಗೆ ನೆರವಾಗಲು ಹೃದಯ ಸಂಜೀವಿನಿ ಹಾಗೂ ಕಿಡ್ನಿ ಸುರಕ್ಷಾ ಯೋಜನೆಗಳಿಗೆ ರೂ.10 ಕೋಟಿ ಅನುದಾನವನ್ನು ಒದಗಿಸಲಾಗುವುದು.

136. ಮಾತಾ ಅಮೃತಾನಂದಮಯೀ ಅವರ ಪ್ರತಿಷ್ಠಾನದಿಂದ ಉನ್ನತ ದರ್ಜೆಯ ಆಸ್ಪತ್ರೆಯನ್ನು ಬೆಂಗಳೂರಿನ ಸಮೀಪದ ಕೆಂಗೇರಿಯ ಬಳಿ ಸ್ಥಾಪಿಸಲು ಸರ್ಕಾರದಿಂದ 15 ಎಕರೆ ಜಮೀನನ್ನು ಒದಗಿಸಲಾಗುವುದು ಹಾಗೂ ರೂ. 5 ಕೋಟಿ ಅನುದಾನ ನೀಡಲಾಗುವುದು.

ಆಯುಷ್ ಚಿಕಿತ್ಸೆ

137. ರಾಜ್ಯದಲ್ಲಿ ಉನ್ನತ ದರ್ಜೆಯ ಆಯುರ್ವೇದ ಚಿಕಿತ್ಸೆ ಸೌಲಭ್ಯಗಳನ್ನು ಒದಗಿಸಲು ಬೆಂಗಳೂರು, ಮೈಸೂರು ಮತ್ತು ಬಳ್ಳಾರಿಯಲ್ಲಿ ಸರ್ಕಾರಿ ಆಯುರ್ವೇದ ಆಸ್ಪತ್ರೆಗಳನ್ನು ಉನ್ನತೀಕರಿಸಲು ರೂ.5 ಕೋಟಿ ಒದಗಿಸಲಾಗುವುದು.

138. ಖಾಸಗಿ ಸಹಭಾಗಿತ್ವದೊಡನೆ ಭಾರತೀಯ ಆಯುಷ್ ವೈದ್ಯ ವಿಜ್ಞಾನ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರವು ರೂ.10 ಕೋಟಿ ನೀಡಲು ಮುಂದೆ ಬಂದಿದೆ. ಇಡೀ ದೇಶದಲ್ಲಿ ಇಂತಹ ಮೊದಲನೆಯ ಸಂಸ್ಥೆಯನ್ನು ಸ್ಥಾಪಿಸಲಾಗುತ್ತಿದ್ದು ಇದಕ್ಕಾಗಿ ರಾಜ್ಯ ಸರ್ಕಾರದಿಂದ ಅಗತ್ಯ ನೆರವನ್ನು ನೀಡಲಾಗುವುದು.

ಕೈಗಾರಿಕಾ ವಲಯಕ್ಕೆ ಉತ್ತೇಜನ

139. 2009–10ರಲ್ಲಿ ಹಲವು ಅಂತಾರಾಷ್ಟ್ರೀಯ ಮಟ್ಟದ ಔದ್ಯಮಿಕ ಸಂಸ್ಥೆಗಳು ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ತಮ್ಮ ಆಸಕ್ತಿಯನ್ನು ತೋರಿಸಿವೆ. ರಾಜ್ಯದ ಔದ್ಯಮೀಕರಣದಲ್ಲಿ ಹೊಸ ಆಯಾಮವನ್ನು ಸೃಷ್ಟಿಸಲು ಹೆಚ್ಚಿನ ಬಂಡವಾಳ ತೊಡಗಿಸುವ ದೇಶೀಯ ಹಾಗೂ ವಿದೇಶಿಯ ಸಂಸ್ಥೆಗಳನ್ನು ಆಕರ್ಷಿಸಲು ಈ ಸಾಲಿನ ಜೂನ್ ತಿಂಗಳಿನಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಲು ರಾಜ್ಯ ಸರ್ಕಾರವು ನಿರ್ಧರಿಸಿದೆ.

140. 2009–10ನೆಯ ಸಾಲಿನ ಮುಂಗಡ ಪತ್ರದಲ್ಲಿ ಪ್ರಕಟಿಸಿದಂತೆ ರಾಜ್ಯದಾದ್ಯಂತ ಕೈಗಾರಿಕೆಗಳ ಸ್ಥಾಪನೆಗಾಗಿ ಅಗತ್ಯವಿರುವ ಜಮೀನನ್ನು ಪಡೆಯುವ ಕಾರ್ಯದಲ್ಲಿ ವಿಶೇಷ ಪ್ರಗತಿಯಾಗಿದ್ದು 2010ರ ಮಾರ್ಚ್ 31ರ ವೇಳೆಗೆ ಸುಮಾರು 50,000 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಾಗಲಿದೆ. ಇದಲ್ಲದೆ, ಬೃಹತ್ ಕೈಗಾರಿಕೆಗಳ ಸ್ಥಾಪನೆಗಾಗಿ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಉಕ್ಕಿನ ವಲಯ ಸ್ಥಾಪನೆಗಾಗಿ 15,246 ಎಕರೆ ಜಮೀನನ್ನು ಪಡೆಯಲಾಗುತ್ತಿದೆ.

141. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದಲ್ಲಿ ಸುಮಾರು 12,000 ಎಕರೆ ಪ್ರದೇಶದಲ್ಲಿ ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಗಾಗಿ ವಿಶೇಷ ಬಂಡವಾಳ ಹೂಡಿಕೆ ವಲಯವನ್ನು ಸ್ಥಾಪಿಸುವ ಪ್ರಕ್ರಿಯೆಗೆ ಚಾಲನೆ ನೀಡಿದೆ.

142. ರಾಜ್ಯದಲ್ಲಿ ಲಭ್ಯವಿರುವ ಉತ್ತಮ ಗುಣಮಟ್ಟದ ಕಬ್ಬಿಣದ ಅದಿರಿನ ಬಳಕೆಯಿಂದ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಜಗತ್ತಿನ ಅತಿ ದೊಡ್ಡ ಉಕ್ಕು ತಯಾರಿಕಾ ಸಂಸ್ಥೆಗಳಾದ ಅರ್ಸೆಲಾರ್ ಮಿತ್ತಲ್ ಮತ್ತು ಪೋಸ್ಕೋ ಒಳಗೊಂಡಂತೆ ಹಲವಾರು ಸಂಸ್ಥೆಗಳು ಉಕ್ಕಿನ ಕಾರ್ಖಾನೆಗಳನ್ನು ಸ್ಥಾಪಿಸಲು ಮುಂದಾಗಿದ್ದು ಸರ್ಕಾರದಿಂದ ಪೂರ್ವಭಾವಿ ಅನುಮೋದನೆಯನ್ನು ನೀಡಲಾಗಿದೆ. ಇದಲ್ಲದೆ, ಆಟೋಮೊಬೈಲ್ ಕ್ಷೇತ್ರ, ಏರೋಸ್ಪೇಸ್ ಕ್ಷೇತ್ರ ಮತ್ತು ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಕ್ಷೇತ್ರಗಳನ್ನು ಒಳಗೊಂಡಂತೆ ಒಟ್ಟು ರೂ. 1.9 ಲಕ್ಷ ಕೋಟಿ ಬಂಡವಾಳ ತೊಡಗಿಸುವ ಸಂಸ್ಥೆಗಳಿಗೆ ಸರ್ಕಾರದಿಂದ ಅನುಮೋದನೆಯನ್ನು ನೀಡಲಾಗಿದೆ.

143. ಸಿದ್ಧ ಉಡುಪು ತಯಾರಿಕೆ ಹಾಗೂ ಜವಳಿ ಉದ್ಯಮಗಳು ಮತ್ತು ಕೃಷಿ ಉತ್ಪನ್ನಗಳ ಸಂಸ್ಕರಣೆಯ ಉದ್ಯಮಗಳಿಗೆ ಪ್ರತಿ ಜಿಲ್ಲೆಯಲ್ಲಿಯೂ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ನಿಗಮದ ವತಿಯಿಂದ ನೀಡುವ ಕೈಗಾರಿಕಾ ಜಮೀನಿನಲ್ಲಿ ಶೇ.10ರಷ್ಟನ್ನು ಮೀಸಲಿಡಲಾಗುವುದು.

144. ಮೈಸೂರು ನಗರದಿಂದ ಕೈಗಾರಿಕಾ ಉತ್ಪನ್ನಗಳನ್ನು ರಫ್ತು ಮಾಡಲು ಸಹಾಯ ಮಾಡುವ ಸುಸಜ್ಜಿತ 'ರಫ್ತು ಕೇಂದ್ರ'ವನ್ನು (Export Centre) ಸ್ಥಾಪಿಸಲಾಗುವುದು.

145. ಕರ್ನಾಟಕ ಹಣಕಾಸು ನಿಗಮದಿಂದ ಸಾಲ ಪಡೆದ ಸಣ್ಣ ಉದ್ಯಮಗಳಿಗೆ ಸಹಾಯ ಮಾಡಲು ರಚಿಸಿದ್ದ ಒಂದಾವರ್ತಿ ತೀರುವಳಿ ಯೋಜನೆಯನ್ನು ಡಿಸೆಂಬರ್ 2010ರವರೆಗೆ ವಿಸ್ತರಿಸಿ ಸರ್ಕಾರದ ವತಿಯಿಂದ ಬಡ್ಡಿ ಪರಿಹಾರ ನೀಡಲು ರೂ.25 ಕೋಟಿ ಒದಗಿಸಲಾಗುವುದು.

146. ರಾಜ್ಯದಲ್ಲಿ ಈಗಾಗಲೇ ನೂತನ ಗಣಿನೀತಿಯನ್ನು ಅಳವಡಿಸ ಲಾಗಿದ್ದು, ಅದರಂತೆ ರಾಜ್ಯದಲ್ಲಿ ಲಭ್ಯವಿರುವ ಖನಿಜ ಸಂಪತ್ತನ್ನು ರಾಜ್ಯದಲ್ಲಿಯೇ ಬಳಸಿ ಮೌಲ್ಯವರ್ಧನೆ ಮಾಡುವ ಕಾರ್ಖಾನೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ಇದರಿಂದ ಖನಿಜ ಸಂಪತ್ತನ್ನು ವಿದೇಶಗಳಿಗೆ ರಫ್ತು ಮಾಡುವ ಬದಲು ರಾಜ್ಯದಲ್ಲಿ ಉದ್ಯೋಗಾವಕಾಶಗಳನ್ನು ಸೃಜಿಸಲು ಸಾಧ್ಯವಾಗುತ್ತದೆ.

147. ರಾಜ್ಯದ ಸಾಂಪ್ರದಾಯಿಕ ಕೈಗಾರಿಕೆಗಳಾದ ಮರದ ಕೆತ್ತನೆ, ಶಿಲ್ಪಗಳ ತಯಾರಿಕೆ, ಮುಂತಾದ ವಿಷಯಗಳಲ್ಲಿ ಯುವಕರಿಗೆ ತರಬೇತಿ ನೀಡಲು ಮತ್ತು ಆಧುನಿಕ ತಂತ್ರಜ್ಞಾನ ಅಳವಡಿಸಲು ರೂ.5 ಕೋಟಿ ವೆಚ್ಚದಲ್ಲಿ ಗುರುಕುಲ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ನಿರ್ಧರಿಸಿದೆ.

148. ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯನ್ನು ಪಾರಂಪರಿಕ ಮ್ಯೂಸಿಯಂ ಆಗಿ ಪರಿವರ್ತಿಸಿ ಉನ್ನತೀಕರಿಸಲು ರೂ.1 ಕೋಟಿ ನೀಡಲಾಗುವುದು.

149. ಗ್ರಾಮೀಣ ಜನತೆಗೆ, ಅದರಲ್ಲಿಯೂ ಮಹಿಳೆಯರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು 2009–10ರಲ್ಲಿ ವಿಶೇಷವಾಗಿ ಸಿದ್ಧ ಉಡುಪುಗಳ ಘಟಕಗಳಿಗೆ ಪ್ರೋತ್ಸಾಹ ನೀಡಲು ನಿರ್ಧರಿಸಲಾಗಿದ್ದು,

ಇದಕ್ಕಾಗಿ ಸೂಕ್ತ ತೆರಿಗೆ ರಿಯಾಯಿತಿ, ನೌಕರರ ಭವಿಷ್ಯನಿಧಿಗೆ ಸಹಾಯ, ಮುಂತಾದ ವಿಶೇಷ ಕ್ರಮಗಳನ್ನು ಒದಗಿಸಲು ನಿರ್ಧರಿಸಲಾಗಿದೆ.

150. ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ 5000 ದಿಂದ 10000 ಉದ್ಯೋಗಾವಕಾಶಗಳನ್ನು ಸೃಜಿಸುವ ಸಿದ್ಧ ಉಡುಪು ತಯಾರಿಕಾ ಘಟಕಗಳಿಗೆ ಮೇಲ್ಕಂಡ ರೀತಿಯ ಸಹಾಯವನ್ನು ಒದಗಿಸಲು ಸುವರ್ಣ ವಸ್ತ್ರ ನೀತಿಯಂತೆ ರೂ.60 ಕೋಟಿ ಒದಗಿಸಿದೆ.

151. ಕೈಮಗ್ಗ ನೇಕಾರರು ತಮ್ಮ ವೃತ್ತಿಯಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲು ಶ್ರಮಿಸುತ್ತಿದೆ. ಈ ನಿಗಮದ ದುಡಿಯುವ ಬಂಡವಾಳವನ್ನು ಹೆಚ್ಚಿಸಲು ರೂ.10 ಕೋಟಿ ಒದಗಿಸಲಾಗುವುದು.

152. ಕೈಮಗ್ಗದ ನೇಕಾರರಿಗೆ ಸುಧಾರಿತ ನ್ಯೂಮ್ಯಾಟಿಕ್ ಮಗ್ಗಗಳನ್ನು ಒದಗಿಸಲು ರೂ.5 ಕೋಟಿ ನೀಡಲಾಗುವುದು ಮತ್ತು ಸೌರಶಕ್ತಿ ದೀಪಗಳನ್ನು ಒದಗಿಸಲು ರೂ.2 ಕೋಟಿ ನೀಡಲಾಗುವುದು.

153. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಹುಬ್ಬಳ್ಳಿಯಲ್ಲಿ 'ನೇಕಾರ ಭವನ'ವನ್ನು ನಿರ್ಮಿಸಲು ರೂ.3 ಕೋಟಿ ಅನುದಾನ ನೀಡಲಾಗುವುದು.

154. ಹಿಂದುಳಿದ ತಾಲ್ಲೂಕುಗಳಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ವತಿಯಿಂದ ಕೈಗಾರಿಕಾ ಕ್ಷೇತ್ರಗಳನ್ನು ಸ್ಥಾಪಿಸಲು ರೂ.10 ಕೋಟಿ ಅನುದಾನವನ್ನು ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ನೀಡಲಾಗುವುದು.

ಮಾಹಿತಿ ತಂತ್ರಜ್ಞಾನ – ಜೀವ ತಂತ್ರಜ್ಞಾನ

155. ಬೆಂಗಳೂರಿನ ಮಾಹಿತಿ ತಂತ್ರಜ್ಞಾನ ಉದ್ಯಮವು ಇಡೀ ವಿಶ್ವದಲ್ಲಿ ಹೆಸರುವಾಸಿಯಾಗಿದ್ದು ರಾಜ್ಯದ ಇತರ ನಗರಗಳಲ್ಲಿ ಮಾಹಿತಿ ತಂತ್ರಜ್ಞಾನದ ಘಟಕಗಳನ್ನು ಸ್ಥಾಪಿಸಲು ವಿಶೇಷ ಪ್ರೋತ್ಸಾಹ ನೀಡಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಈಗಾಗಲೇ ಹಲವು ಬಿ.ಪಿ.ಓ. ಕೇಂದ್ರಗಳನ್ನು ಸ್ಥಾಪಿಸುವಲ್ಲಿ ಸರ್ಕಾರವು ಯಶಸ್ವಿಯಾಗಿದ್ದು, 2010–11ರಲ್ಲಿ ಕನಿಷ್ಟ 100 ಬಿ.ಪಿ.ಓ. ಕೇಂದ್ರಗಳನ್ನು ಸ್ಥಾಪಿಸಲು ರೂ.10 ಕೋಟಿ ಒದಗಿಸಲಾಗುತ್ತಿದೆ.

156. ಇತ್ತೀಚೆಗೆ ಘೋಷಿಸಲಾದ ರಾಜ್ಯದ ಸೆಮಿಕಂಡಕ್ಟರ್ ನೀತಿಯು ರಾಜ್ಯದಲ್ಲಿ ಸೆಮಿಕಂಡಕ್ಟರ್‌ಗಳ ಸ್ಥಾಪನೆಗೆ ಭದ್ರವಾದ ಬುನಾದಿಯನ್ನು ನಿರ್ಮಿಸಿದೆ. ಈ ನೀತಿಯ ಅನುಷ್ಠಾನಕ್ಕಾಗಿ 2010–11ರಲ್ಲಿ ರೂ.10 ಕೋಟಿ ಒದಗಿಸಲಾಗುವುದು.

157. ರಾಜ್ಯದ ಜೈವಿಕ ತಂತ್ರಜ್ಞಾನ ನೀತಿ (Bio Technology Policy) ಯಿಂದ ನೂತನ ಜೈವಿಕ ತಂತ್ರಜ್ಞಾನ ಘಟಕಗಳಿಗೆ ಪ್ರೋತ್ಸಾಹ ನೀಡಲು ರೂ.10 ಕೋಟಿ ಒದಗಿಸಲಾಗುತ್ತಿದೆ.

158. ಮಂಗಳೂರು ಬಳಿಯ ಪಿಳಿಕುಲ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಬೆಟ್ಟದಲ್ಲಿ ನೂತನ ತಾರಾಲಯಗಳನ್ನು ಸ್ಥಾಪಿಸಲು ರೂ.1 ಕೋಟಿ ವಿನಿಯೋಗಿಸಲಾಗುವುದು.

159. ನೈಸರ್ಗಿಕ ವಿಪತ್ತುಗಳ ಮುನ್ಸೂಚನೆ ನೀಡುವ ಮಾಸ್ಟರ್ ಕಂಟ್ರೋಲ್ ಕೇಂದ್ರವನ್ನು ಸ್ಥಾಪಿಸಲು ರೂ.1 ಕೋಟಿ ನೀಡಲಾಗುವುದು.

ಉದ್ಯೋಗ ಮತ್ತು ತರಬೇತಿ

160. ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು 8.40 ಲಕ್ಷ ವಿದ್ಯಾರ್ಥಿಗಳು 10ನೇ ತರಗತಿವರೆಗೆ ಶಿಕ್ಷಣ ಪಡೆಯುತ್ತಿದ್ದಾರೆ. ಈ ಪೈಕಿ ಕೇವಲ 1.88 ಲಕ್ಷ ಉನ್ನತ ಶಿಕ್ಷಣ ಪಡೆಯುತ್ತಿದ್ದು ಉಳಿದ ಸುಮಾರು 6.52 ಲಕ್ಷ ಜನರು ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳಿಗಾಗಿ ಪ್ರಯತ್ನಿಸಬೇಕಾಗಿದೆ. ಇಂತಹ ಯುವಕ ಯುವತಿಯರಿಗೆ ಕೈಗಾರಿಕೆ ಹಾಗೂ ಸೇವಾ ಕ್ಷೇತ್ರಗಳಲ್ಲಿ ಉದ್ಯೋಗಗಳಿಗೆ ಅಗತ್ಯವಿರುವ ಸೂಕ್ತ ಕೌಶಲ್ಯವನ್ನು ಒದಗಿಸಲು ಸುಸಜ್ಜಿತ ತರಬೇತಿ ಸಂಸ್ಥೆಗಳ ಅವಶ್ಯಕತೆ ಇದೆ.

161. ಈಗ ನಮ್ಮ ರಾಜ್ಯದಲ್ಲಿರುವ 1,233 ಕೈಗಾರಿಕೆ ತರಬೇತಿ ಸಂಸ್ಥೆಗಳು ಮತ್ತು ಇತರ ಅನೌಪಚಾರಿಕ ತರಬೇತಿ ಸಂಸ್ಥೆಗಳಿಂದ ಪ್ರತಿ ವರ್ಷ ಸುಮಾರು 2 ಲಕ್ಷ ಜನರಿಗೆ ತರಬೇತಿ ಸೌಲಭ್ಯ ದೊರೆಯುತ್ತಿದ್ದು, ಇದನ್ನು ಇಮ್ಮಡಿಗೊಳಿಸಲು ಮುಂದಿನ ಮೂರು ವರ್ಷಗಳಲ್ಲಿ ಸುಮಾರು 1,000 ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಖಾಸಗಿ ಕ್ಷೇತ್ರದಲ್ಲಿ ಸ್ಥಾಪಿಸಲು ಉದ್ದೇಶಿಸಿದೆ.

162. ರಾಜ್ಯದಲ್ಲಿ ಈಗಾಗಲೇ ಪ್ರಾರಂಭಿಸಲಾಗಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಪ್ರತಿ ವಿದ್ಯಾರ್ಥಿಗೆ ಪ್ರತಿವರ್ಷ ರೂ.6,000ದಂತೆ ಅನುದಾನವನ್ನು ನೀಡುವ ನೂತನ ಅನುದಾನ ಪದ್ಧತಿಯನ್ನು ಜಾರಿಗೊಳಿಸಲಾಗುವುದು. ಇದಕ್ಕಾಗಿ 2010-11ರಲ್ಲಿ ರೂ.50 ಕೋಟಿ ಒದಗಿಸಲಾಗಿದೆ.

163. 2010-11ರಿಂದ ಕೈಗಾರಿಕೆ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವ ಖಾಸಗಿ ಆಡಳಿತ ವರ್ಗಗಳಿಗೆ ಪ್ರತಿ ಜಿಲ್ಲೆಯಲ್ಲಿಯೂ ಸರ್ಕಾರಿ ಭೂಮಿಯನ್ನು 5 ಎಕರೆಗಳವರೆಗೆ ಮಾರ್ಗದರ್ಶಿ ಬೆಲೆಯ ಅರ್ಧದಲ್ಲಿ ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ 5 ಎಕರೆಗಳವರೆಗೆ ಕೃಷಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗುವುದು.

164. ಪ್ರತಿಯೊಂದು ನೂತನ ಕೈಗಾರಿಕಾ ತರಬೇತಿ ಸಂಸ್ಥೆಯ ಸ್ಥಾಪನೆಗೆ ತಗಲುವ ಬಂಡವಾಳ ವೆಚ್ಚದ ಶೇ.25ರಷ್ಟು ರೂ.25 ಲಕ್ಷ ಮಿತಿಯಲ್ಲಿ ಸಹಾಯಧನ ಒದಗಿಸಲಾಗುವುದು. ಡಾ॥ ನಂಜುಂಡಪ್ಪ ವರದಿಯಲ್ಲಿ ಗುರುತಿಸಲಾದ ಹಿಂದುಳಿದ ತಾಲ್ಲೂಕುಗಳಲ್ಲಿ ಸ್ಥಾಪಿಸುವ ಸಂಸ್ಥೆಗಳಿಗೆ ಶೇ.10 ರಷ್ಟು ಹೆಚ್ಚುವರಿ ಸಹಾಯಧನ ನೀಡಲಾಗುವುದು. ಇದಕ್ಕಾಗಿ ಆಯವ್ಯಯದಲ್ಲಿ ರೂ.50 ಕೋಟಿ ಒದಗಿಸಿದೆ.

165. 2009-10ನೆಯ ಸಾಲಿನಲ್ಲಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ 14 ಕೇಂದ್ರಗಳಲ್ಲಿ ಉದ್ಯೋಗ ಮೇಳಗಳನ್ನು ಏರ್ಪಡಿಸಿ ಒಟ್ಟು 33,000 ಯುವಕ ಯುವತಿಯರಿಗೆ ಖಾಸಗಿ ಉದ್ಯಮಗಳಲ್ಲಿ ಉದ್ಯೋಗಾವಕಾಶಗಳನ್ನು ಗುರುತಿಸಲಾಗಿದೆ. ವ್ಯವಸ್ಥಿತವಾಗಿ ಖಾಸಗಿ ಕ್ಷೇತ್ರದಲ್ಲಿ ಸರ್ಕಾರದ ವತಿಯಿಂದ ಉದ್ಯೋಗಾವಕಾಶಗಳನ್ನು ಒದಗಿಸಲು ಇಡೀ ರಾಷ್ಟ್ರದಲ್ಲಿಯೇ ಇದು ಅತ್ಯಂತ ಯಶಸ್ವಿ ಪ್ರಯೋಗವಾಗಿದೆಯೆಂದು ತಿಳಿಸಲು ಸಂತೋಷಿಸುತ್ತೇನೆ. 2010-11ರಲ್ಲಿ ಈ ಯೋಜನೆಯಡಿ ರಾಜ್ಯದ 4 ಲಕ್ಷ ಯುವಕ ಯುವತಿಯರಿಗೆ ಉದ್ಯೋಗಾವಕಾಶಗಳನ್ನು ನೀಡಲು ವ್ಯವಸ್ಥೆ ಮಾಡುವ ನಿರೀಕ್ಷೆ ಇದೆ.

ಇಂಧನ ಕ್ಷೇತ್ರದ ಅಭಿವೃದ್ಧಿ

166. 2008-09 ಮತ್ತು 2009-10ರಲ್ಲಿ ಬಳ್ಳಾರಿ ಹಾಗೂ ರಾಯಚೂರಿನಲ್ಲಿ ಕರ್ನಾಟಕ ವಿದ್ಯುತ್ ನಿಗಮದಿಂದ ಒಟ್ಟು 750

ಮೆಗಾವ್ಯಾಟ್ ಮತ್ತು ಉಡುಪಿಯಲ್ಲಿ ಖಾಸಗಿ ಕ್ಷೇತ್ರದಲ್ಲಿ 600 ಮೆಗಾವ್ಯಾಟ್ ಶಾಖೋತ್ಪನ್ನ ವಿದ್ಯುತ್ ಘಟಕಗಳನ್ನು ಸ್ಥಾಪಿಸಲಾಗಿದೆ. ಇದಲ್ಲದೆ, 2008–09ರಲ್ಲಿ ಕರ್ನಾಟಕ ವಿದ್ಯುತ್ ನಿಗಮದಿಂದ 230 ಮೆಗಾವ್ಯಾಟ್ ಸಾಮರ್ಥ್ಯದ ಜಲ ವಿದ್ಯುತ್ ಉತ್ಪಾದನಾ ಘಟಕವನ್ನು ವರಾಹಿಯಲ್ಲಿ ಸ್ಥಾಪಿಸಲಾಗಿದೆ.

167. ರಾಜ್ಯದ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ಈಗ 8000 ಮೆಗಾವ್ಯಾಟ್ ತಲುಪಿದ್ದು, ಇದನ್ನು ಮುಂದಿನ ಐದು ವರ್ಷಗಳಲ್ಲಿ ಇಮ್ಮಡಿಗೊಳಿಸುವ ಸಾಧ್ಯತೆಯಿದೆ. ಇದಕ್ಕಾಗಿ ವಿಜಾಪುರ ಜಿಲ್ಲೆಯ ಕೂಡಗಿಯಲ್ಲಿ 4000 ಮೆಗಾವ್ಯಾಟ್, ರಾಯಚೂರಿನ ಎರಮರಸ್ ಮತ್ತು ಎಡ್ಲಾಪುರಗಳಲ್ಲಿ 2400 ಮೆಗಾವ್ಯಾಟ್, ಬಳ್ಳಾರಿಯಲ್ಲಿ 1000 ಮೆಗಾವ್ಯಾಟ್, ಶಾಖೋತ್ಪನ್ನ ಘಟಕಗಳಲ್ಲದೆ, ಬಿಡದಿ ಹಾಗೂ ತದರಿಯಲ್ಲಿ ಒಟ್ಟು 2600 ಮೆಗಾವ್ಯಾಟ್ ಸಾಮರ್ಥ್ಯದ ಅನಿಲ ಆಧಾರಿತ ವಿದ್ಯುತ್ ಘಟಕಗಳನ್ನು ಕರ್ನಾಟಕ ವಿದ್ಯುತ್ ನಿಗಮದ ವತಿಯಿಂದ ಸ್ಥಾಪಿಸಲು ಚಾಲನೆ ನೀಡಲಾಗಿದೆ.

168. ಖಾಸಗಿ ಸಹಭಾಗಿತ್ವದೊಡನೆ ಛತ್ತೀಸ್‌ಗಡದಲ್ಲಿ 2400 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ಘಟಕವನ್ನು ಸ್ಥಾಪಿಸಲಾಗುತ್ತಿದೆ.

169. 2008–09ಕ್ಕೆ ಮುನ್ನ ಎರಡು ದಶಕಗಳಲ್ಲಿ, ವಿದ್ಯುತ್ ಉತ್ಪಾದನೆಗಾಗಿ ಆಯವ್ಯಯದಿಂದ ಯಾವುದೇ ಬಂಡವಾಳವನ್ನು ಒದಗಿಸಿರಲಿಲ್ಲ. 2008–09ರಲ್ಲಿ ಕರ್ನಾಟಕ ವಿದ್ಯುತ್ ನಿಗಮಕ್ಕೆ ರೂ.500 ಕೋಟಿ ಈಕ್ವಿಟಿ ಬಂಡವಾಳವನ್ನು ನೀಡಲಾಯಿತು. 2010–11ರಲ್ಲಿ ಕರ್ನಾಟಕ ವಿದ್ಯುತ್ ನಿಗಮ ಮತ್ತು ವಿದ್ಯುತ್ ವಿತರಣಾ ಸಂಸ್ಥೆಗಳ ಯೋಜನೆಗಳಿಗೆ ಅಗತ್ಯ ಬಂಡವಾಳವನ್ನು ಕ್ರೋಢೀಕರಿಸಲು 2009–10ರಲ್ಲಿ ರೂ.500 ಕೋಟಿ ಬಂಡವಾಳ ನೆರವನ್ನು ನೀಡಿದ್ದು, 2010–11ರಲ್ಲಿಯೂ ರೂ.500 ಕೋಟಿ ಬಂಡವಾಳವನ್ನು ನೀಡಲಾಗುವುದು.

ಜಲಸಂಪನ್ಮೂಲ ಮತ್ತು ನೀರಾವರಿ

170. 2008–09 ಹಾಗೂ 2009–10ರಲ್ಲಿ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳಲ್ಲಿ ಒಟ್ಟು ರೂ.6000 ಕೋಟಿ ವೆಚ್ಚದಲ್ಲಿ (ಸಾಲ ಮರುಪಾವತಿ ಹೊರತುಪಡಿಸಿ) 1.20 ಲಕ್ಷ ಹೆಕ್ಟೇರು ಜಮೀನಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ. 2009–10ರಲ್ಲಿ ಅರ್ಕಾವತಿ, ಕಾಮಸಮುದ್ರ,

ಹುಚ್ಚನಕೊಪ್ಪಲು, ಮಧ್ಯಮ ನೀರಾವರಿ ಯೋಜನೆಗಳನ್ನು ಮತ್ತು ಹಾರಂಗಿ, ರಾಜನಕೊಲ್ಲೂರು, ಸೊನ್ನ ಮತ್ತು ಇಟಗ–ಸಂಗಮ ಏತನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲಾಗುತ್ತಿದೆ.

171. 2010–11ರಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯ ಘಟ್ಟ 1 ಮತ್ತು 2, ಕಾರಂಜಾ, ಬೆಣ್ಣಿತೊರಾ, ಅಮರ್ಜಾ, ಘಟಪ್ರಭಾ 3ನೇ ಘಟ್ಟ ಮತ್ತು ಉಬ್ರಾಣಿ – ಅಮೃತಾಪುರ ಯೋಜನೆಗಳನ್ನೊಳಗೊಂಡಂತೆ ಒಟ್ಟು 14 ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿ 56,000 ಹೆಕ್ಟೇರ್ (1.35 ಲಕ್ಷಕ್ಕೂ ಹೆಚ್ಚು ಎಕರೆ) ಜಮೀನಿಗೆ ಹೆಚ್ಚುವರಿ ನೀರಾವರಿಯನ್ನು ಒದಗಿಸಲಾಗುವುದು. ಇದಲ್ಲದೆ, 2 ಲಕ್ಷ ಹೆಕ್ಟೇರುಗಳಲ್ಲಿ ಹೊಲಗಾಲುವೆಗಳನ್ನು ನಿರ್ಮಿಸಲಾಗುವುದು.

172. ಕಳೆದ ವರ್ಷ ಪ್ರಾರಂಭಿಸಲಾದ ಭದ್ರಾ ಆಧುನೀಕರಣ, ಕಬಿನಿ ಬಲದಂಡೆ ನಾಲೆಯ ಲೈನಿಂಗ್, ಹಾಗೂ ತುಂಗಭದ್ರಾ ವಿತರಣಾ ಕಾಲುವೆಯ ಆಧುನೀಕರಣ ಕಾಮಗಾರಿಗಳನ್ನು 2010–11ರಲ್ಲಿ ಮುಂದುವರೆಸಲಾಗುವುದು.

173. 2010–11ನೆಯ ಸಾಲಿನಲ್ಲಿ ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳಿಗಾಗಿ ತ್ವರಿತ ನೀರಾವರಿ ಅಭಿವೃದ್ಧಿ ಕಾರ್ಯಕ್ರಮವೂ ಸೇರಿದಂತೆ ಒಟ್ಟು ರೂ.4256 ಕೋಟಿ ವಿನಿಯೋಗಿಸಲಾಗುವುದು.

ಸಣ್ಣ ನೀರಾವರಿ

174. ರಾಜ್ಯದಲ್ಲಿರುವ ಸುಮಾರು 36000 ಸಣ್ಣ ನೀರಾವರಿ ಕೆರೆಗಳು ನಮ್ಮ ರಾಜ್ಯದ ಪಾರಂಪರಿಕ ಸಂಪತ್ತು ಎಂದು ಭಾವಿಸಬೇಕಾಗಿದೆ. ವಿಶ್ವಬ್ಯಾಂಕಿನ ನೆರವಿನಿಂದ ಒಟ್ಟು 3900 ಕೆರೆಗಳನ್ನು ಪುನರುಜ್ಜೀವನಗೊಳಿಸಲು ಜಲಸಂವರ್ಧನೆ ಯೋಜನೆಯಲ್ಲಿ ರೂ.800 ಕೋಟಿಗೂ ಮೀರಿ ವೆಚ್ಚ ಮಾಡಲಾಗುತ್ತಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಲು ಮತ್ತು 1000 ಸಣ್ಣ ನೀರಾವರಿ ಕೆರೆಗಳನ್ನು ಪುನರುಜ್ಜೀವನಗೊಳಿಸಲು ರಾಜ್ಯ ಆಯವ್ಯಯದಿಂದ ಈ ವರ್ಷ ರೂ.100 ಕೋಟಿ ಒದಗಿಸಲಾಗುವುದು.

175. ಕೇಂದ್ರ ಸರ್ಕಾರದ ನೆರವಿನ ತ್ವರಿತ ನೀರಾವರಿ ಅಭಿವೃದ್ಧಿ ಯೋಜನೆಯಡಿ ಕೋಲಾರ, ಚಿಕ್ಕಬಳ್ಳಾಪುರ, ಬೆಳಗಾವಿ, ಧಾರವಾಡ, ಹಾವೇರಿ, ಗದಗ್, ಗುಲಬರ್ಗ, ಮತ್ತು ಬೀದರ್ ಜಿಲ್ಲೆಗಳಲ್ಲಿ ರೂ.40 ಕೋಟಿ

ವೆಚ್ಚದಲ್ಲಿ 37 ಕೆರೆಗಳ ನಿರ್ಮಾಣಕ್ಕಾಗಿ ಅಗತ್ಯ ಅನುದಾನವನ್ನು ಒದಗಿಸಲಾಗುತ್ತಿದೆ.

176. ರಾಜ್ಯದ ವಿವಿಧ ಭಾಗಗಳಲ್ಲಿ ಏತನೀರಾವರಿ ಯೋಜನೆಗಳು, ಚೆಕ್‌ಡ್ಯಾಂಗಳು ಹಾಗೂ ಬ್ಯಾರೇಜ್‌ಗಳ ನಿರ್ಮಾಣಕ್ಕಾಗಿ 2010–11ರಲ್ಲಿ ರೂ.100 ಕೋಟಿ ಒದಗಿಸಲಾಗುವುದು. ಸುಮಾರು 2000 ಸಣ್ಣ ನೀರಾವರಿ ಕಾಮಗಾರಿಗಳಿಗೆ ಈ ವರ್ಷ ಒಟ್ಟು ಆಯವ್ಯಯ ರೂ.842 ಕೋಟಿ ಒದಗಿಸಲು ಉದ್ದೇಶಿಸಿದೆ.

ರಸ್ತೆ ಸಂಪರ್ಕ ಜಾಲದ ಅಭಿವೃದ್ಧಿ

177. ಲೋಕೋಪಯೋಗಿ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿರುವ ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಮತ್ತು ಉನ್ನತೀಕರಿಸಲು ವಿವರವಾದ ಯೋಜನೆಯೊಂದನ್ನು ಸರ್ಕಾರವು ಸಿದ್ಧಪಡಿಸಿದೆ. ಇದರ ಅಡಿಯಲ್ಲಿ ಎಲ್ಲಾ ರಾಜ್ಯ ಹೆದ್ದಾರಿಗಳನ್ನು ಏಕಪಥ ರಸ್ತೆಯಿಂದ ದ್ವಿಪಥ ರಸ್ತೆಯ ಮಟ್ಟಕ್ಕೆ ಉನ್ನತೀಕರಿಸಲು ಮುಂದಿನ ಮೂರು ವರ್ಷಗಳಲ್ಲಿ ರೂ.3,000 ಕೋಟಿ ವೆಚ್ಚ ಮಾಡಬೇಕಾಗಿದೆ. 2010–11ರಲ್ಲಿ ಇದಕ್ಕಾಗಿ ರೂ.250 ಕೋಟಿ ಒದಗಿಸಲಾಗುತ್ತಿದೆ.

178. ಜಿಲ್ಲಾ ಮುಖ್ಯ ರಸ್ತೆಗಳ ಉನ್ನತೀಕರಣ ಹಾಗೂ ನಿರ್ವಹಣೆಗಾಗಿ ಯೋಜನೆ ಹಾಗೂ ಯೋಜನೇತರ ಆಯವ್ಯಯದಲ್ಲಿ ರೂ.737 ಕೋಟಿ ಒದಗಿಸಿದ್ದು, ಪ್ರತಿ 5 ವರ್ಷಕ್ಕೊಮ್ಮೆ ಎಲ್ಲಾ ಮುಖ್ಯ ರಸ್ತೆಗಳ ಮೇಲ್ಮೈ ನವೀಕರಣವನ್ನು ಕೈಗೊಳ್ಳಲು ಹಾಗು ಪ್ರತಿ ವರ್ಷವೂ ವ್ಯವಸ್ಥಿತವಾಗಿ ರಸ್ತೆಗಳ ನಿರ್ವಹಣೆ ಮಾಡಲು ರಾಜ್ಯದ ಎಲ್ಲಾ ರಸ್ತೆಗಳನ್ನು ವಿಶೇಷ ಗುರುತಿನ ಸಂಖ್ಯೆಗಳೊಡನೆ ವರ್ಗೀಕರಿಸಲಾಗುತ್ತಿದೆ. ಪ್ರತಿಯೊಂದು ರಸ್ತೆಯನ್ನು ನಿಗದಿತ ವೇಳಾಪಟ್ಟಿಯಂತೆ ನಿರ್ವಹಿಸಲು ಇದರಿಂದ ಅನುಕೂಲವಾಗುವುದು.

179. ತುಂಗಭದ್ರಾ ನದಿಗೆ ಹರಿಹರ ಹಾಗೂ ಹೊನ್ನಾಳಿ ತಾಲ್ಲೂಕುಗಳಲ್ಲಿ ಸೇತುವೆಗಳನ್ನು ನಿರ್ಮಿಸಲು ರೂ.30 ಕೋಟಿ ಒದಗಿಸಲಾಗುವುದು. ಬಿಜಾಪುರ ಜಿಲ್ಲೆಯಲ್ಲಿ ಕೃಷ್ಣಾ ನದಿಗೆ ಸೇತುವೆ ನಿರ್ಮಿಸಲು ರೂ.15 ಕೋಟಿ ಒದಗಿಸಲಾಗುವುದು.

180. ಕೊಡಗು ಜಿಲ್ಲೆಯಲ್ಲಿ ಉತ್ತಮ ರಸ್ತೆ ಸಂಪರ್ಕ ಒದಗಿಸಲು ರೂ.25 ಕೋಟಿ ವಿಶೇಷ ಪ್ಯಾಕೇಜ್ ನೀಡಲಾಗುವುದು.

181. ರಾಜ್ಯದ ವಿವಿಧ ಇಲಾಖೆಗಳ ಕಟ್ಟಡಗಳ ನಿರ್ಮಾಣಕ್ಕಾಗಿ ಪ್ರತಿಯೊಂದು ಇಲಾಖೆಯ ಅಗತ್ಯಗಳಿಗೆ ಅನುಗುಣವಾಗಿ ಮಾದರಿ ವಿನ್ಯಾಸ ಹಾಗೂ ಅಂದಾಜುಪಟ್ಟಿಗಳನ್ನು ಸಿದ್ದಪಡಿಸಿ ಕಟ್ಟಡಗಳ ನಿರ್ಮಾಣದಲ್ಲಿ ವಿಳಂಬವನ್ನು ತಡೆಯುವುದಲ್ಲದೆ, ಮಿತವ್ಯಯವನ್ನು ಸಾಧಿಸಲಾಗುವುದು.

182. ರೂ.10 ಕೋಟಿಗಿಂತಲೂ ಹೆಚ್ಚಿನ ಅಂದಾಜು ವೆಚ್ಚದ ಎಲ್ಲಾ ಕಟ್ಟಡಗಳ ವಿನ್ಯಾಸಗಳನ್ನು ಸಿದ್ದಪಡಿಸಲು ಹಾಗೂ ನಿರ್ಮಾಣದ ತಾಂತ್ರಿಕ ಉಸ್ತುವಾರಿಯನ್ನು ನಿರ್ವಹಿಸಲು ಪ್ರತಿಯೊಂದು ಲೋಕೋಪಯೋಗಿ ವಲಯದಲ್ಲಿ ಅನುಮೋದಿತ ವಾಸ್ತುಶಿಲ್ಪಿಗಳ ಪಟ್ಟಿಯನ್ನು ಉಪಯೋಗಿಸಲಾಗುವುದು.

ಮೂಲಭೂತ ಸೌಕರ್ಯಗಳು

183. ರಾಜ್ಯದಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಚಟುವಟಿಕೆಗಳ ತ್ವರಿತ ಅಭಿವೃದ್ಧಿಗಾಗಿ ವಿವಿಧ ಭಾಗಗಳ ಸಂಪರ್ಕ ವ್ಯವಸ್ಥೆಯನ್ನು ಉನ್ನತೀಕರಿಸಲು ಸರ್ಕಾರವು ಆದ್ಯತೆಯನ್ನು ನೀಡಿದೆ. ರಾಜ್ಯದ ರೈಲ್ವೆ ಯೋಜನೆಗಳ ಶೀಘ್ರ ಅನುಷ್ಠಾನಕ್ಕಾಗಿ ಕೇಂದ್ರದ ರೈಲ್ವೆ ಸಚಿವರೊಡನೆ ನಾನು ಖುದ್ದಾಗಿ ಚರ್ಚಿಸಿದ್ದು ನೂತನ ರೇಲ್ವೆ ಮಾರ್ಗಗಳ ನಿರ್ಮಾಣವನ್ನು ಆದ್ಯತೆಯ ಮೇಲೆ ಕೈಗೊಳ್ಳಲು ರಾಜ್ಯ ಸರಕಾರದಿಂದ ಶೇ.50 ರಷ್ಟು ವೆಚ್ಚವನ್ನು ನೀಡುವ ನಮ್ಮ ಸೂಚನೆಗೆ ಅವರು ಸ್ಪಂದಿಸಿ, ಇತ್ತೀಚೆಗೆ ಮಂಡಿಸಲಾದ ರೇಲ್ವೆ ಮುಂಗಡ ಪತ್ರದಲ್ಲಿ ಒಟ್ಟು ಹನ್ನೆರಡು ಮಾರ್ಗಗಳ ನೂತನ ಯೋಜನೆಗಳನ್ನು ಪ್ರಾರಂಭಿಸಲು ಅವರು ಒಪ್ಪಿಗೆ ನೀಡಿರುವುದು ಒಂದು ಸಂತೋಷದ ಸಂಗತಿಯಾಗಿದೆ.

184. ಇದಕ್ಕೆ ಪ್ರತಿಯಾಗಿ ರಾಜ್ಯದ ಪಾಲನ್ನು ನೀಡಲು ಸರ್ಕಾರವು ಸಿದ್ಧವಾಗಿದೆ. ರಾಜ್ಯದ ಬಹುದಿನಗಳ ಬೇಡಿಕೆಗಳಾದ ಶಿವಮೊಗ್ಗ – ಹರಿಹರ, ಕುಡಚಿ – ಬಾಗಲಕೋಟೆ, ವೈಟ್‌ಫೀಲ್ಡ್ – ಕೋಲಾರ, ಗದಗ – ಹಾವೇರಿ, ತುಮಕೂರು–ದಾವಣಗೆರೆ, ಬಿಜಾಪುರ–ಶಹಾಬಾದ, ಧಾರವಾಡ – ಬೆಳಗಾವಿ, ತಾಳಗುಪ್ಪ – ಹೊನ್ನಾವರ, ಹಾಸನ – ಬೆಂಗಳೂರು, ಕಡೂರು – ಚಿಕ್ಕಮಗಳೂರು – ಸಕಲೇಶಪುರ, ಅರಸೀಕೆರೆ – ಬೀರೂರು ಡಬ್ಲಿಂಗ್, ಕೋಲಾರ – ಚಿಕ್ಕಬಳ್ಳಾಪುರ ಗೇಜ್ ಪರಿವರ್ತನೆ, ಮುಂತಾದ ರೈಲ್ವೆ ಯೋಜನೆಗಳನ್ನು ಸಾಕಾರಗೊಳಿಸಲು 2010–11ರಲ್ಲಿ ರಾಜ್ಯ ಸರಕಾರದಿಂದ ರೂ.600 ಕೋಟಿಯವರೆಗೆ ವೆಚ್ಚವನ್ನು ಭರಿಸಲಾಗುವುದು.

185. ರಾಜ್ಯದ 2ನೇ ಹಂತದ ನಗರಗಳಾದ ಬೆಳಗಾವಿ, ಬಿಜಾಪೂರ, ಗುಲಬರ್ಗ, ಬಳ್ಳಾರಿ ಹಾಗೂ ಶಿವಮೊಗ್ಗ ವಿಮಾನ ನಿಲ್ದಾಣಗಳ ನಿರ್ಮಾಣಕ್ಕಾಗಿ ಖಾಸಗಿ ಸಹಭಾಗಿತ್ವದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಬೀದರ್ ವಿಮಾನ ನಿಲ್ದಾಣದಿಂದ ನಾಗರೀಕ ವಿಮಾನಯಾನಗಳನ್ನು ಪ್ರಾರಂಭಿಸಲು ಪ್ರಯತ್ನಿಸಲಾಗುತ್ತಿದ್ದು, 2010-11ರಲ್ಲಿ ಫಲಕಾರಿಯಾಗುವ ನಿರೀಕ್ಷೆ ಇದೆ.

186. ಪಶ್ಚಿಮ ಕರಾವಳಿಯಲ್ಲಿ ತದರಿಯಲ್ಲಿ 34 ದಶಲಕ್ಷ ಟನ್ ಹಾಗೂ ಹಳದೀಪುರದಲ್ಲಿ 18 ಲಕ್ಷ ಟನ್ ಸಾಮರ್ಥ್ಯದ ಬಂದರುಗಳನ್ನು ಖಾಸಗಿ ಸಹಭಾಗಿತ್ವದೊಡನೆ ನಿರ್ಮಿಸಲು ವ್ಯವಸ್ಥೆ ಮಾಡಲಾಗುತ್ತಿದೆ.

187. ರಾಜ್ಯದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಅಗತ್ಯವಿರುವ ಯೋಜನಾ ವರದಿ ಹಾಗೂ ವಿನ್ಯಾಸಗಳನ್ನು ಸಿದ್ಧಪಡಿಸಲು ರೂ.10 ಕೋಟಿ ಒದಗಿಸಿ ಯೋಜನಾ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲಾಗುವುದು.

ನಗರಾಭಿವೃದ್ಧಿ

188. ರಾಷ್ಟ್ರದ ಹೆಮ್ಮೆಯ ನಗರವಾದ ಬೆಂಗಳೂರಿನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮುಂತಾದುವುಗಳ ಮೂಲಕ ಸುಮಾರು ರೂ.6000 ಕೋಟಿ ವೆಚ್ಚ ಮಾಡಲಾಗಿದೆ. 2010-11ರಲ್ಲಿ ಈ ನಗರದ ಹಲವು ಬೃಹತ್ ಯೋಜನೆಗಳನ್ನು ಮುಂದುವರೆಸಲು ಅಗತ್ಯ ಅನುದಾನವನ್ನು ಮತ್ತು ಸಂಪನ್ಮೂಲಗಳನ್ನು ಒದಗಿಸಲಾಗುತ್ತಿದೆ.

189. ಕೇಂದ್ರ ಸರ್ಕಾರದ ಸಹಭಾಗಿತ್ವದೊಡನೆ ಕಲ್ಪಿಸಲಾಗುತ್ತಿರುವ ಅತ್ಯಾಧುನಿಕ ಮೆಟ್ರೋ ಯೋಜನೆಗೆ ರಾಜ್ಯದಿಂದ ಈಗಾಗಲೇ ರೂ.1600 ಕೋಟಿ ಷೇರು ಬಂಡವಾಳ ಮತ್ತು ಸಾಲವನ್ನು ಒದಗಿಸಲಾಗಿದೆ. 2010-11ರಲ್ಲಿ ಈ ಯೋಜನೆಯ ಮೊದಲ ಹಂತದ ಕಾರ್ಯಾಚರಣೆಯು ಪ್ರಾರಂಭವಾಗಲಿದ್ದು ರಾಜ್ಯ ಸರ್ಕಾರದಿಂದ ಇದಕ್ಕಾಗಿ ರೂ.600 ಕೋಟಿ ಒದಗಿಸಲಾಗುವುದು.

190. ಬೆಂಗಳೂರು ನಗರದಲ್ಲಿ ಸ್ಥಳೀಯ ರೈಲು ಸಂಚಾರವನ್ನು ಪ್ರಾರಂಭಿಸಲು ಅಗತ್ಯವಿರುವ ಬಂಡವಾಳದಲ್ಲಿ ಶೇ.50ರಷ್ಟನ್ನು ಭರಿಸಲು ರಾಜ್ಯ ಸರ್ಕಾರವು ಸಿದ್ಧವಿದ್ದು ಈ ಯೋಜನೆಗೆ ತ್ವರಿತವಾಗಿ ಚಾಲನೆ ನೀಡಲು ಕೇಂದ್ರವನ್ನು ಕೋರಲಾಗುವುದು.

191. ಬೆಂಗಳೂರಿನ ವಿವಿಧ ಭಾಗಗಳಲ್ಲಿ ವಾಹನ ನಿಲುಗಡೆಗೆ ಬಹುಮಹಡಿ ನಿಲುಗಡೆ ಕೇಂದ್ರಗಳನ್ನು ನಿರ್ಮಿಸಲು ಮತ್ತು ಬೆಂಗಳೂರಿನ 10 ಪ್ರಮುಖ ಸಂಚಾರಿ ಮಾರ್ಗಗಳನ್ನು ಉತ್ತಮಪಡಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 2010–11ರಲ್ಲಿ ರೂ.1000 ಕೋಟಿ ವೆಚ್ಚ ಮಾಡಲಾಗುವುದು.

192. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಗರದ 25 ಕೆರೆಗಳನ್ನು ಅಭಿವೃದ್ಧಿಪಡಿಸಲು ರೂ.200 ಕೋಟಿ ವಿನಿಯೋಗಿಸಲಾಗುವುದು.

193. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆವತಿಯಿಂದ ವ್ಯಾಪಕ ರೀತಿಯಲ್ಲಿ ರೂ.3000 ಕೋಟಿ ವೆಚ್ಚದಲ್ಲಿ ನಗರದ ರಸ್ತೆಗಳ ಅಭಿವೃದ್ಧಿ, ಪಾದಚಾರಿ ಮಾರ್ಗಗಳ ಅಭಿವೃದ್ಧಿ, ಮೇಲುಸೇತುವೆ ಹಾಗೂ ಕೆಳಸೇತುವೆಗಳ ನಿರ್ಮಾಣ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು.

194. ಬೃಹತ್ ಬೆಂಗಳೂರು ವ್ಯಾಪ್ತಿಗೆ ಹೊಸದಾಗಿ ಸೇರಿಸಲ್ಪಟ್ಟ ಗ್ರಾಮಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲು ಬೆಂಗಳೂರು ಜಲಮಂಡಳಿ ವತಿಯಿಂದ ರೂ.425 ಕೋಟಿ ಯೋಜನೆಯನ್ನು ಪ್ರಾರಂಭಿಸಲಾಗುವುದು. ಬೆಂಗಳೂರಿನ ಹಳೆಯ ಪ್ರದೇಶಗಳಲ್ಲಿ ದೋಷಯುಕ್ತ ನೀರಿನ ಹಾಗೂ ಒಳಚರಂಡಿಯ ಕೊಳವೆಗಳನ್ನು ಬದಲಾಯಿಸಿ ವ್ಯವಸ್ಥೆಯನ್ನು ನವೀಕರಿಸಲು ರೂ.100 ಕೋಟಿ ವಿನಿಯೋಗಿಸಲಾಗುವುದು.

195. ರಾಜ್ಯದ ಸುಮಾರು ಶೇ.34ಕ್ಕೂ ಹೆಚ್ಚು ಜನರು ನಗರಗಳಲ್ಲಿ ವಾಸಿಸುತ್ತಿದ್ದು ಈ ಪ್ರಮಾಣವೂ ಪ್ರತಿ ವರ್ಷವೂ ಬೆಳೆಯುತ್ತಿದೆ. ಈ ನಗರವಾಸಿಗಳಿಗೆ ಸೂಕ್ತ ಮೂಲಭೂತ ಸೌಕರ್ಯಗಳನ್ನು ಒದಗಿಸಲು ವ್ಯವಸ್ಥಿತ ಯೋಜನೆಯೊಂದನ್ನು ರೂಪಿಸುವ ಅಗತ್ಯವಿದೆ. ಬೆಂಗಳೂರನ್ನು ಹೊರತುಪಡಿಸಿ ರಾಜ್ಯದಲ್ಲಿ ಏಳು ನಗರಪಾಲಿಕೆಗಳು, 44 ನಗರ ಸಭೆಗಳು, 94 ಪುರಸಭೆಗಳು ಹಾಗೂ 68 ಪಟ್ಟಣ ಪಂಚಾಯಿತಿಗಳಿವೆ. ಈ

ಪ್ರದೇಶಗಳ ಅಭಿವೃದ್ಧಿಗಾಗಿ 2010-11ರಿಂದ **'ಮುಖ್ಯಮಂತ್ರಿ ನಗರೋತ್ಥಾನ ಯೋಜನೆ'**ಯನ್ನು ಪ್ರಾರಂಭಿಸಲಾಗುವುದು. ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ರಸ್ತೆಗಳ ಅಭಿವೃದ್ಧಿ ಮುಂತಾದ ನಿರ್ದಿಷ್ಟ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಈ ಯೋಜನೆಯಡಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ರೂ.600 ಕೋಟಿ ಅನುದಾನ ಒದಗಿಸಲು ನಿರ್ಧರಿಸಲಾಗಿದೆ.

196. ರಾಜ್ಯದ ಬೆಳೆಯುತ್ತಿರುವ ನಗರ ಪ್ರದೇಶಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರಿನ ಸರಬರಾಜಿಗಾಗಿ ಸರ್ಕಾರವು ವಿಶೇಷ ಆದ್ಯತೆಯನ್ನು ನೀಡಿದ್ದು 120 ನಗರಗಳಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ವಿಸ್ತರಿಸಲು 2010-11ರಲ್ಲಿ ರೂ.304 ಕೋಟಿ ನೀಡಲಾಗುತ್ತಿದೆ.

197. ಈಗಾಗಲೇ ಗುಲ್ಬರ್ಗ, ಹುಬ್ಬಳ್ಳಿ ಮತ್ತು ಬೆಳಗಾವಿ ನಗರಗಳ ಭಾಗಗಳಲ್ಲಿ 24 ಗಂಟೆ ನೀರು ಸರಬರಾಜು ಮಾಡುವ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಲಾಗಿದ್ದು ರಾಜ್ಯದ ಇತರ 16 ನಗರಗಳಿಗೆ ಈ ಯೋಜನೆಯನ್ನು ವಿಸ್ತರಿಸಲಾಗುವುದು.

198. ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ನಡುವೆ ಚತುಷ್ಪಥ ರಸ್ತೆಯನ್ನು ನಿರ್ಮಿಸಲು ರೂ.50 ಕೋಟಿ ನೀಡಲಾಗುವುದು.

199. ನೂತನ ಜಿಲ್ಲಾ ಕೇಂದ್ರವಾಗಿರುವ ಯಾದಗೀರ ಪಟ್ಟಣದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ರೂ.25 ಕೋಟಿ ನೀಡಲಾಗುವುದು.

200. ಉಡುಪಿ ನಗರಪಾಲಿಕೆಯು ತನ್ನ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ನಗರದ ಅಭಿವೃದ್ಧಿಗಾಗಿ ರೂ.25 ಕೋಟಿ ವಿಶೇಷ ಅನುದಾನವನ್ನು ನೀಡಲು ನಿರ್ಧರಿಸಲಾಗಿದೆ.

201. ನಗರಾಭಿವೃದ್ಧಿ ವಿಷಯದಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯಕ್ಕೆ ರೂ.5 ಕೋಟಿ ನೀಡಲಾಗುವುದು.

ಕಾರ್ಮಿಕ ಕಲ್ಯಾಣ

202. ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿ ರಾಜ್ಯದ 5 ಜಿಲ್ಲೆಗಳಲ್ಲಿ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ

ರೂ.30,000ದವರೆಗೆ ಆರೋಗ್ಯ ವಿಮೆ ಒದಗಿಸಲು ಪ್ರತಿ ಕುಟುಂಬಕ್ಕೆ ರೂ.475 ವಾರ್ಷಿಕ ವಂತಿಗೆಯನ್ನು ನೀಡುತ್ತಿದ್ದು ಇದಕ್ಕಾಗಿ ರಾಜ್ಯದ ಪಾಲು ರೂ.118.75 ನಂತೆ ಒಟ್ಟು ರೂ.12.04 ಕೋಟಿ ನೀಡಿದೆ. 2010–11ರಲ್ಲಿ ಈ ಯೋಜನೆಯನ್ನು ರಾಜ್ಯದ ಇತರ ಜಿಲ್ಲೆಗಳಿಗೆ ವಿಸ್ತರಿಸಲು ರೂ.15 ಕೋಟಿ ಒದಗಿಸಿದೆ.

203. ಅಸಂಘಟಿತ ಕಾರ್ಮಿಕ ವರ್ಗಕ್ಕೆ ಸೇರಿದ ಖಾಸಗಿ ಹೋಟೆಲ್ ಕಾರ್ಮಿಕರು, ಬಸ್, ಲಾರಿ ಹಾಗೂ ಆಟೋ ಚಾಲಕರು, ಕಂಡಕ್ಟರ್ ಮತ್ತು ದುರಸ್ತಿ ವರ್ಕ್‌ಷಾಪ್‌ಗಳಲ್ಲಿ ದುಡಿಯುವ ಕೆಲಸಗಾರರು, ಮುಂತಾದವರಿಗೆ ನೂತನ ಪಿಂಚಣಿ ಯೋಜನೆಗೆ ಸೇರಲು ರಾಜ್ಯ ಸರ್ಕಾರದಿಂದ ಪ್ರತಿ ವರ್ಷ ರೂ.1200ರಂತೆ ಮೂರು ವರ್ಷಗಳ ಕಾಲ ನೀಡಲು ನಿರ್ಧರಿಸಿದ್ದು ಇದಕ್ಕಾಗಿ ಸಂಬಂಧಪಟ್ಟ ಕಾರ್ಮಿಕರು ತಮ್ಮ ವಂತಿಗೆಯಾಗಿ ಪ್ರತಿ ತಿಂಗಳು ಕನಿಷ್ಠ ರೂ.100 ವಂತಿಗೆಯನ್ನು ಇದಕ್ಕಾಗಿ ನೀಡಬೇಕಾಗುವುದು. ಇದಕ್ಕಾಗಿ 2010–11ರಲ್ಲಿ ರೂ.20 ಕೋಟಿ ಒದಗಿಸಲಾಗುವುದು.

204. ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದು ಹಾಕುವುದು ಸರ್ಕಾರದ ಉದ್ದೇಶವಾಗಿದೆ. ಆಯ್ದ ನಾಲ್ಕು ಜಿಲ್ಲೆಗಳಲ್ಲಿ ಬಾಲಕಾರ್ಮಿಕರಿಗಾಗಿ ವಿಶೇಷ ವಿದ್ಯಾಭ್ಯಾಸ ಮತ್ತು ಕೌಶಲ್ಯಾಭಿವೃದ್ಧಿಗಾಗಿ ಪರಿಹಾರ ಶಿಕ್ಷಣ ಕೇಂದ್ರಗಳನ್ನು ತೆರೆಯಲು ರೂ.5 ಕೋಟಿ ನೀಡಲು ನಿರ್ಧರಿಸಲಾಗಿದೆ.

ಸಮಾಜ ಕಲ್ಯಾಣ

ನಾವೆಲ್ಲರೂ ಒಂದೇ ಜಾತಿ, ಒಂದೇ ಮತ
ಒಂದೇ ಕುಲ, ನಾವು ಮನುಜರು.
ನರರ ನಡುವಿನ ಅಡ್ಡಗೋಡೆಗಳನು
ಕುಟ್ಟಿ ಕೆಡಹುವೆವು, ನಾವು ವಿಲಯ
ರುದ್ರರು, ಹೊಸ ಬಾಳಿನ ಹೊಸ
ಸಮತೆಯ ಸಮರಸವನು ಸಮೆವೆವು
ನಾವು ನವ ವಿಧಾತರು.

– ಗೋಪಾಲಕೃಷ್ಣ ಅಡಿಗ

ಜಾತೀಯತೆ, ಮತೀಯತೆ ಮೊದಲಾದ ಸಂಕುಚಿತತೆಗೆ ಎಡೆಗೊಡದೆ ಎಲ್ಲರ ಒಳಿತಿಗೆ ಶ್ರಮಿಸಲು ನಮ್ಮ ಸರ್ಕಾರ ಬದ್ಧವಾಗಿದೆ.

205. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ಸರ್ವತೋಮುಖ ಏಳಿಗೆಯನ್ನು ಸಾಧಿಸಲು ಅವರಿಗೆ ಶಿಕ್ಷಣ ಹಾಗೂ ಉದ್ಯೋಗಾವಕಾಶಗಳನ್ನು ಒದಗಿಸುವುದು ಅತ್ಯುತ್ತಮ ಮಾರ್ಗ ವಾಗಿದೆ. ಈ ದಿಸೆಯಲ್ಲಿ 2009–10ರಲ್ಲಿ 14 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮತ್ತು 114 ಕಿತ್ತೂರು ಚೆನ್ನಮ್ಮ ವಸತಿ ಶಾಲೆಗಳನ್ನು ರಾಜ್ಯದಲ್ಲಿ ಪ್ರಾರಂಭಿಸಲಾಯಿತು. ಈ ಶಾಲೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಸುಮಾರು 150 ಶಾಲೆಗಳಿಗೆ ಅಗತ್ಯವಿರುವ ಕಟ್ಟಡಗಳನ್ನು ಒದಗಿಸಲು 2010–11ರಲ್ಲಿ ರೂ.150 ಕೋಟಿಗಳನ್ನು ಒದಗಿಸಲಾಗುತ್ತಿದೆ.

206. ರಾಜ್ಯದಲ್ಲಿ ಪರಿಶಿಷ್ಟಜಾತಿ ಹಾಗೂ ವರ್ಗಗಳಿಗಾಗಿ ಕ್ರಮವಾಗಿ 1683 ಮತ್ತು 186 ವಿದ್ಯಾರ್ಥಿನಿಲಯಗಳಿವೆ. ಹಿಂದುಳಿದ ವರ್ಗಗಳಿಗಾಗಿ ಒಟ್ಟು 1760 ವಿದ್ಯಾರ್ಥಿನಿಲಯಗಳನ್ನು ಸಹ ಸರ್ಕಾರದಿಂದ ತೆರೆಯಲಾಗಿದೆ. ಈ ವಿದ್ಯಾರ್ಥಿ ನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ನೀಡುವ ಆಹಾರ ವೆಚ್ಚವನ್ನು ಕಳೆದ ವರ್ಷ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಮಾಸಿಕ ರೂ.400 ರಿಂದ 600ಕ್ಕೆ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಲ್ಲಿ ರೂ.450ರಿಂದ 650ಕ್ಕೆ ಹೆಚ್ಚಿಸಲಾಗಿತ್ತು. ಅವಶ್ಯಕ ಸಾಮಗ್ರಿಗಳ ಬೆಲೆಗಳಲ್ಲಿ ಏರಿಕೆ ಆಗಿರುವುದನ್ನು ಗಮನಿಸಿ ಈ ವೆಚ್ಚದ ಮಿತಿಯನ್ನು ಕ್ರಮವಾಗಿ ರೂ.650 ಮತ್ತು ರೂ.750ಕ್ಕೆ ಹೆಚ್ಚಿಸಲಾಗುವುದು. ಅದರಂತೆ 2010–11ರಲ್ಲಿ ಅನುದಾನಿತ ವಿದ್ಯಾರ್ಥಿ ನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ನೀಡಲಾಗುತ್ತಿರುವ ಅನುದಾನವನ್ನು ಸಹ ಹೆಚ್ಚಿಸಲಾಗುವುದು.

207. ಪರಿಶಿಷ್ಟ ಜಾತಿಗಳು, ಪರಿಶಿಷ್ಟ ವರ್ಗಗಳು, ಹಿಂದುಳಿದ ವರ್ಗಗಳು, ಮತ್ತು ಅಲ್ಪಸಂಖ್ಯಾತರಿಗಾಗಿ ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ಈಗ ನಡೆಸಲಾಗುತ್ತಿದ್ದು ಈ ವಿದ್ಯಾರ್ಥಿನಿಲಯಗಳಲ್ಲಿ ಸೀಮಿತ ಸಂಖ್ಯೆಯಲ್ಲಿ ಇತರ ವರ್ಗಗಳಿಗೆ ಪ್ರವೇಶ ನೀಡಲಾಗುತ್ತಿದೆ. ಈ ವ್ಯವಸ್ಥೆಯನ್ನು ಜಿಲ್ಲಾ ಮಟ್ಟದಲ್ಲಿ ಇನ್ನಷ್ಟು ವಿಸ್ತರಿಸಿ ಎಲ್ಲ ವರ್ಗಗಳಿಗೆ ನಿಗದಿತ ಪ್ರವೇಶಾವಕಾಶ ವಿರುವ ಮಾದರಿ ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು 10 ಜಿಲ್ಲೆಗಳಲ್ಲಿ ತೆರೆಯಲು ರೂ.20 ಕೋಟಿ ವಿನಿಯೋಗಿಸಲಾಗುವುದು. ಇದರಿಂದ ವಿದ್ಯಾರ್ಥಿ ದೆಸೆಯಿಂದಲೂ ರಾಜ್ಯದ ಯುವಕ ಯುವತಿಯರಲ್ಲಿ ಸೋದರತ್ವ ಮತ್ತು ಸಮಾನತೆಯ ಭಾವನೆಯನ್ನು ಬೆಳೆಸಲು ಸಹಾಯವಾಗುವುದು.

208. 2009–10ರಲ್ಲಿ ವಿಶೇಷ ಘಟಕ ಯೋಜನೆಗೆ ಮತ್ತು ಗಿರಿಜನ ಉಪಯೋಜನೆಗೆ ಕ್ರಮವಾಗಿ ರೂ.2916.6 ಕೋಟಿ ಮತ್ತು ರೂ.1144 ಕೋಟಿ ಒದಗಿಸಲಾಗಿತ್ತು. 2010–11ರಲ್ಲಿ ಈ ಮೊತ್ತವನ್ನು ರೂ.3358.78 ಕೋಟಿ ಮತ್ತು ರೂ.1344.19 ಕೋಟಿಗೆ ಏರಿಸಲಾಗಿದೆ.

209. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಅಡಿಯಲ್ಲಿ ಕ್ರೋಢೀಕೃತ ಅನುದಾನವನ್ನು 2010–11ರಲ್ಲಿ ಕ್ರಮವಾಗಿ ರೂ.617.2 ಕೋಟಿ ಮತ್ತು ರೂ.182.8 ಕೋಟಿಗೆ ಹೆಚ್ಚಿಸಲಾಗುವುದು. 2009–10ಕ್ಕೆ ಹೋಲಿಸಿದರೆ ಇದರಿಂದ ಕ್ರೋಢೀಕೃತ ಅನುದಾನದಲ್ಲಿ ರೂ.200 ಕೋಟಿ ಹೆಚ್ಚಳ ಆಗುವುದು.

210. ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಜಗಜೀವನರಾಮ್ ಭವನಗಳನ್ನು ನಿರ್ಮಿಸಲು ರೂ.20 ಕೋಟಿ ಅನುದಾನ ನೀಡಲಾಗುವುದು.

ಹಿಂದುಳಿದ ವರ್ಗಗಳ ಕಲ್ಯಾಣ

211. ಹಿಂದುಳಿದ ವರ್ಗಗಳಾದ ಕಮ್ಮಾರರು, ಕುಂಬಾರರು, ಅಕ್ಕಸಾಲಿಗರು, ಅಗಸರು, ಮುಂತಾದ ಪಾರಂಪರಿಕ ವೃತ್ತಿಗಳನ್ನು ಅವಲಂಬಿಸಿರುವ ಸಮಾಜಗಳ ಆರ್ಥಿಕ ಚಟುವಟಿಕೆಗಳಿಗೆ ಬೆಂಬಲ ನೀಡಲು ರೂ.20 ಕೋಟಿ ನೀಡಲಾಗುವುದು.

212. ಪಾರಂಪರಿಕ ಕುಂಬಾರಿಕೆ ಕೈಗಾರಿಕೆಯು ನಶಿಸುತ್ತಿರುವ ಈ ದಿನಗಳಲ್ಲಿ ಕುಂಬಾರರಿಗೆ ನೂತನ ವಿನ್ಯಾಸ ಹಾಗೂ ಕೌಶಲ್ಯಗಳನ್ನು ಒದಗಿಸಿ ಅವರ ಉತ್ಪನ್ನಗಳಿಗೆ ಒಳ್ಳೆಯ ಮಾರುಕಟ್ಟೆ ಸೌಕರ್ಯವನ್ನು ಒದಗಿಸುವ ಅಗತ್ಯವಿದೆ. ಈ ದೃಷ್ಟಿಯಿಂದ ರಾಜ್ಯದಲ್ಲಿ 'ಕುಂಭಕಲಾ ಅಭಿವೃದ್ಧಿ ಮಂಡಳಿ'ಯನ್ನು ಸ್ಥಾಪಿಸಲು ರೂ.3 ಕೋಟಿ ಒದಗಿಸಲಾಗುವುದು.

213. ಉತ್ತರ ಕನ್ನಡ ಜಿಲ್ಲೆಯ ದೈವಜ್ಞ ಬ್ರಾಹ್ಮಣ ಮಹಾ ಸಂಸ್ಥೆಗೆ ಹಾಗೂ ಮಣಿಪಾಲದ ಭಾಲಾವಾಲೀಕರ್ ಸಮಾಜದ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ತಲಾ ರೂ.1 ಕೋಟಿ ನೀಡಲಾಗುವುದು.

ಅಲ್ಪಸಂಖ್ಯಾತರ ಕಲ್ಯಾಣ

214. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ 2009–10ರಲ್ಲಿ ರೂ.167 ಕೋಟಿ ಒದಗಿಸಿದ್ದು ಇದನ್ನು 2010–11ರಲ್ಲಿ ರೂ.207 ಕೋಟಿಗೆ ಹೆಚ್ಚಿಸಲಾಗುವುದು.

215. ಬೆಂಗಳೂರಿನಲ್ಲಿ ಹಜ್ ಭವನದ ನಿರ್ಮಾಣಕ್ಕಾಗಿ ರೂ.5 ಕೋಟಿ ಒದಗಿಸಲಾಗುವುದು.

216. ಈ ಬಾರಿ ಶಾದಿ ಮಹಲ್/ಕಲ್ಯಾಣ ಮಂಟಪಗಳ ನಿರ್ಮಾಣಕ್ಕಾಗಿ ರೂ.10 ಕೋಟಿ ಒದಗಿಸಿದೆ.

217. ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಭಾಷಾ ಮಾಧ್ಯಮವನ್ನು ಬದಲಿಸಲು ಸಾಧ್ಯವಾಗುವಂತೆ ವಿಶೇಷ ಭಾಷಾ ತರಬೇತಿಗಾಗಿ ರೂ.3 ಕೋಟಿ ಒದಗಿಸಲಾಗುವುದು.

218. ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದ ವಿವಿಧ ವೃತ್ತಿಗಳಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲು ರೂ.10 ಕೋಟಿ ಒದಗಿಸಲಾಗುವುದು.

219. ಶಿವನಸಮುದ್ರದ ಬಳಿಯಿರುವ ಮರ್ದಾನ್-ಎ-ಘೈಬ್ ಮತ್ತು ಬೆಂಗಳೂರಿನ ತವಕ್ಕಲ್ ಮಸ್ತಾನ್ ದರ್ಗಾದ ಅಭಿವೃದ್ಧಿಗಾಗಿ ರೂ.1 ಕೋಟಿ ಒದಗಿಸಲಾಗುವುದು.

ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ

220. ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಈವರೆಗೆ ರಾಜ್ಯ ಸರ್ಕಾರವು ರೂ.831.98 ಕೋಟಿ ಮೊತ್ತವನ್ನು 7.21 ಲಕ್ಷ ಹೆಣ್ಣುಮಕ್ಕಳ ಹೆಸರಿನಲ್ಲಿ ತೊಡಗಿಸಿದ್ದು ಈ ಯೋಜನೆಯಿಂದ ಬಡಕುಟುಂಬಗಳ ಹೆಣ್ಣುಮಕ್ಕಳಿಗೆ ಉತ್ತಮ ಜೀವನಾಧಾರ ಕಲ್ಪಿಸಲಾಗಿದೆ. ಈ ಯೋಜನೆಯನ್ನು ಮುಂದುವರೆಸಲು 2010–11ರಲ್ಲಿ ರೂ.380 ಕೋಟಿ ನೀಡಲಾಗಿದೆ.

221. ರಾಜ್ಯದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಗಣನೀಯವಾಗಿದ್ದು, ಅದರ ನಿವಾರಣೆಗಾಗಿ ವಿಶೇಷ ಪ್ರಯತ್ನವನ್ನು ಮಾಡಬೇಕಾಗಿದೆ. ಇದನ್ನು ಪರಿಹರಿಸಲು ಸರ್ಕಾರವು ಒಂದು 'ಸಮಗ್ರ ಪೌಷ್ಟಿಕತಾ ಅಭಿಯಾನ' (Comprehensive Nutrition Mission)ವನ್ನು ಪ್ರಾರಂಭಿಸಲು ಉದ್ದೇಶಿಸಿದ್ದು ಈ ಬಗ್ಗೆ ಪ್ರಾಯೋಗಿಕ ಯೋಜನೆಯೊಂದನ್ನು ಪ್ರಾರಂಭಿಸಲು ರೂ.5 ಕೋಟಿ ಒದಗಿಸಲಾಗುವುದು.

222. ಗ್ರಾಮೀಣ ಮಹಿಳೆಯರಿಗೆ ಬೃಹತ್ ಸಂಖ್ಯೆಯಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಪ್ರತಿ ಜಿಲ್ಲೆಯಲ್ಲಿಯೂ ಸಿದ್ಧ ಉಡುಪುಗಳ ತಯಾರಿಕೆಯಲ್ಲಿ ತರಬೇತಿ ನೀಡುವ ಕೇಂದ್ರಗಳನ್ನು

ಸ್ಥಾಪಿಸಲಾಗುವುದು. ಇದಕ್ಕಾಗಿ ಸಿದ್ಧ ಉಡುಪು ವಿನ್ಯಾಸ ಮತ್ತು ತರಬೇತಿ ಸಂಸ್ಥೆಗೆ (ATDC) ರೂ.10 ಕೋಟಿ ಅನುದಾನ ನೀಡಲಾಗುವುದು.

223. ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿ ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ಗಳನ್ನು ಸ್ಥಾಪಿಸುವ ಖಾಸಗಿ ಅಥವಾ ಸ್ವಯಂಸೇವಾ ಸಂಸ್ಥೆಗಳಿಗೆ 10 ಸಾವಿರ ಚದರಡಿಯವರೆಗೆ ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರ / ನಗರ ಪಾಲಿಕೆಗಳಿಂದ ಮಾರ್ಗಸೂಚಿ ಬೆಲೆಯ ಶೇ.50ರ ದರದಲ್ಲಿ ನಿವೇಶನ ನೀಡಲಾಗುವುದು ಮತ್ತು ಕನಿಷ್ಠ 25 ಕೊಠಡಿಗಳ ವಸತಿ ನಿರ್ಮಾಣಕ್ಕಾಗಿ ರೂ.25 ಲಕ್ಷ ಸಹಾಯಧನ ನೀಡಲಾಗುವುದು. ಇದಕ್ಕಾಗಿ ಈ ವರ್ಷ ರೂ.10 ಕೋಟಿ ವಿನಿಯೋಗಿಸಲಾಗುವುದು.

224. ರಾಜ್ಯದಲ್ಲಿರುವ 50,000 ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ವಂತಿಗೆ ಆಧಾರಿತ ಪಿಂಚಣಿ ವ್ಯವಸ್ಥೆಯನ್ನು ಪ್ರಾರಂಭಿಸಲಾಗುವುದು. ಇದರಂತೆ ಪ್ರತಿ ಕಾರ್ಯಕರ್ತೆಯಿಂದ ಮಾಸಿಕ ರೂ.150 ಮತ್ತು ಸಹಾಯಕಿಯಿಂದ ರೂ.75 ಪಡೆದು ಸರ್ಕಾರದಿಂದ ಸಮಪ್ರಮಾಣದ ವಂತಿಗೆಯನ್ನು ನೀಡಲಾಗುವುದು. 2010–11ರಲ್ಲಿ ಇದಕ್ಕಾಗಿ ರೂ.10 ಕೋಟಿ ವಿನಿಯೋಗಿಸಲಾಗುವುದು.

225. ಬುದ್ಧಿಮಾಂದ್ಯ ಮತ್ತು ಆಟಿಸಂ ನ್ಯೂನತೆಯುಳ್ಳ ಹಾಗೂ ಅಂಥ ಮುಂತಾದ ವಿಕಲತೆಯುಳ್ಳ ಮಕ್ಕಳ ಪಾಲನೆಗಾಗಿ ನಡೆಸುತ್ತಿರುವ ಸಂಸ್ಥೆಗಳಿಗೆ ಪಾಲನಾ ವೆಚ್ಚ ಹಾಗೂ ಶಿಕ್ಷಕರ ಸಂಭಾವನೆಗಳನ್ನು ಒಳಗೊಂಡಂತೆ ಮಕ್ಕಳ ಸಂಖ್ಯೆಯ ಆಧಾರದ ಮೇಲೆ ಅನುದಾನವನ್ನು ನೀಡಲು ರೂ.20 ಕೋಟಿ ಒದಗಿಸಲಾಗುವುದು.

ಆಹಾರ ಮತ್ತು ನಾಗರೀಕ ಸರಬರಾಜು

226. ರಾಜ್ಯದಲ್ಲಿ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಕಡಿಮೆ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಒದಗಿಸಲು ರಾಜ್ಯದ ಆಹಾರ ಇಲಾಖೆಯು ವಿಶೇಷ ಕ್ರಮಗಳನ್ನು ಕೈಗೊಂಡಿದೆ. ಅಗತ್ಯ ವಸ್ತುಗಳ ಪಡಿತರ ವ್ಯವಸ್ಥೆಯಲ್ಲಿ ಸುಮಾರು 77 ಲಕ್ಷ ಕುಟುಂಬಗಳಿಗೆ ಬಿ.ಪಿ.ಎಲ್. ಪಡಿತರ ಚೀಟಿಗಳನ್ನು ನೀಡಿದ್ದು ಇವರಿಗೆ ಅಕ್ಕಿ ಹಾಗೂ ಗೋಧಿಯನ್ನು ರೂ.3ಕ್ಕೆ ಒಂದು ಕೆ.ಜಿ.ಯಂತೆ ವಿತರಿಸಲಾಗುತ್ತಿದೆ. ಇದಲ್ಲದೆ, ತಾತ್ಕಾಲಿಕ ಪಡಿತರ ಚೀಟಿಗಳನ್ನು ಪಡೆದಿರುವ ಕುಟುಂಬಗಳಿಗೂ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ನೀಡಲಾಗುತ್ತಿದೆ. ರಾಜ್ಯದಲ್ಲಿ ತಿಂಗಳಿಗೆ ಸುಮಾರು 1.36 ಲಕ್ಷ

ಟನ್ ಅಕ್ಕಿ ಹಾಗೂ 44 ಸಾವಿರ ಟನ್ ಗೋಧಿಯನ್ನು ಪಡಿತರ ವ್ಯವಸ್ಥೆಯ ಮೂಲಕ ವಿತರಿಸಲಾಗುತ್ತಿದ್ದು 2009–10ರಲ್ಲಿ ಪಡಿತರ ವ್ಯವಸ್ಥೆಯ ಸಹಾಯಧನವಾಗಿ ರೂ.1250 ಕೋಟಿಯನ್ನು ನೀಡಲಾಗಿದೆ.

ಅರಣ್ಯ ಮತ್ತು ಜೀವಿ ಶಾಸ್ತ್ರ

227. ರಾಜ್ಯದಲ್ಲಿ ಸಾಮಾಜಿಕ ಅರಣ್ಯ ಕಾರ್ಯಕ್ರಮದ ಮೂಲಕ ಪ್ರತಿ ಜಿಲ್ಲೆಯಲ್ಲಿಯೂ ಅರಣ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು 2009–10ರಲ್ಲಿ ಉದ್ಯೋಗ ಖಾತರಿ ಯೋಜನೆಯಡಿ ರೂ.200 ಕೋಟಿ ಬಳಸಲಾಗಿದೆ. 2010–11ರಲ್ಲಿ ಇದೇ ರೀತಿಯಲ್ಲಿ ಅರಣ್ಯಾಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗುವುದು.

228. ಹೊಸನಗರ ತಾಲ್ಲೂಕಿನ ಚಕ್ರಾ ಯೋಜನೆಯ ಬಳಿ ಲಭ್ಯವಿರುವ ನೀರಾವರಿ ಇಲಾಖೆಯ ಭೂಮಿ ಮತ್ತು ಕಟ್ಟಡಗಳನ್ನು ಉಪಯೋಗಿಸಿ ನೂತನ ಅರಣ್ಯ ಹಾಗೂ ವನ್ಯಜೀವಿ ಅಧ್ಯಯನ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಲು ರೂ.5 ಕೋಟಿ ವಿನಿಯೋಗಿಸಲಾಗುವುದು.

229. ನಾಗರಹೊಳೆ ವನ್ಯಧಾಮದ ಭದ್ರತೆಗಾಗಿ ವಿದ್ಯುತ್ ಬೇಲಿಯನ್ನು ಅಳವಡಿಸಲು ರೂ.3 ಕೋಟಿ ವಿನಿಯೋಗಿಸಲಾಗುವುದು.

230. ತುಮಕೂರು ಜಿಲ್ಲೆ ಸಿದ್ದರಬೆಟ್ಟದಲ್ಲಿ ಔಷಧೀಯ ಸಸ್ಯಗಳ ಅಭಿವೃದ್ಧಿಗಾಗಿ ರೂ.1 ಕೋಟಿ ನೀಡಲಾಗುವುದು.

231. ಕೊಪ್ಪಳ ಜಿಲ್ಲೆ ಯಲಬುರ್ಗ ತಾಲ್ಲೂಕಿನಲ್ಲಿ ಜಿಂಕೆ ವನ ನಿರ್ಮಿಸಲು ರೂ.50 ಲಕ್ಷ ನೀಡಲಾಗುವುದು.

ಕನ್ನಡ ಮತ್ತು ಸಂಸ್ಕೃತಿ

ಕನ್ನಡದ ಸನ್ಮಾನವೆನಗದುವೆ ವರಮಾನ
ಕನ್ನಡಿಗರ ಸ್ವತಂತ್ರವದೆ ಪರಮಮಂತ್ರ
ಕನ್ನಡದ ಕೀರ್ತಿ ಎನ್ನ ಚಿತ್ತದ ಸ್ಫೂರ್ತಿ
ಕನ್ನಡದ ಒಗ್ಗೂಟವೆನಗದೆ ಕಿರೀಟ.

– ಬೆನಗಲ್ ರಾಮರಾವ್

ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪೋಷಣೆ ಹಾಗೂ ಸಂರಕ್ಷಣೆಗೆ ನಮ್ಮ ಸರ್ಕಾರ ಸಂಕಲ್ಪ ತೊಟ್ಟಿದೆ. ಎಲ್ಲರ ಸಹಕಾರದಿಂದ ನಮ್ಮ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನವನ್ನು ಗಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಈ ಸ್ಥಾನ

ನಿಮಿತ್ತ ದೊರೆಯಬೇಕಾದ ಸೌಲಭ್ಯಗಳನ್ನು ಕೇಂದ್ರದಿಂದ ಪಡೆದುಕೊಳ್ಳಲು ಸರ್ವ ಪ್ರಯತ್ನವನ್ನೂ ನಮ್ಮ ಸರ್ಕಾರ ಮಾಡಲಿದೆ.

232. ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿರುವ ಸಂದರ್ಭದಲ್ಲಿ ಭಾಷೆಯ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡಲು ರೂ.50 ಕೋಟಿ ಒದಗಿಸಲಾಗುವುದು.

233. ಕಳೆದ ವರ್ಷದ ಮುಂಗಡ ಪತ್ರದಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಚಾಲನೆ ನೀಡಲಾದ ಹಲವಾರು ಕಾರ್ಯಕ್ರಮಗಳಿಂದ ಕನ್ನಡ ಭಾಷೆಯ ಬೆಳವಣಿಗೆ ಹಾಗೂ ಸಂಸ್ಕೃತಿ ಪ್ರಚಾರಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತಿದೆ. ಕನ್ನಡ ಸಾಹಿತ್ಯ ಸಮ್ಮೇಳನಗಳು ಪ್ರತಿ ವರ್ಷವೂ ಅತ್ಯಂತ ಅರ್ಥಪೂರ್ಣವಾಗಿ ನಡೆಯುತ್ತಿವೆ.

234. ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪಾರಂಪರಿಕ ಕ್ಷೇತ್ರಗಳ ಅಭಿವೃದ್ಧಿಗಾಗಿ ಶಿವಮೊಗ್ಗದಲ್ಲಿ 'ಸಹ್ಯಾದ್ರಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರ'ವನ್ನು ಸ್ಥಾಪಿಸಲು ರೂ.20 ಕೋಟಿ ನೀಡಲಾಗುವುದು.

235. ಕಾರಣಾಂತರದಿಂದ ಕಳೆದ ವರ್ಷ ನಡೆಯಬೇಕಾಗಿದ್ದ ವಿಶ್ವಕನ್ನಡ ಸಮ್ಮೇಳನವನ್ನು ಮುಂದೂಡಲಾಗಿದ್ದು 2010-11ರಲ್ಲಿ ಬೆಳಗಾವಿಯಲ್ಲಿ ಅದ್ದೂರಿಯಿಂದ ಈ ಸಮ್ಮೇಳನವನ್ನು ನಡೆಸಲು ಉದ್ದೇಶಿಸಿದೆ. ಇದಕ್ಕಾಗಿ ರೂ.10 ಕೋಟಿ ನೀಡಲಾಗುವುದು.

236. ಕುಮಾರವ್ಯಾಸನ ಕಾವ್ಯ ಕ್ಷೇತ್ರವಾದ ಗದಗದಲ್ಲಿ ಸಾಹಿತ್ಯ ಭವನವನ್ನು ನಿರ್ಮಿಸಲು ರೂ.3 ಕೋಟಿ ಹಾಗೂ ಆತನ ಜನ್ಮ ಸ್ಥಳವಾದ ಕೋಳಿವಾಡದಲ್ಲಿ ಸ್ಮಾರಕವನ್ನು ನಿರ್ಮಿಸಲು ರೂ.1 ಕೋಟಿ ನೀಡಲಾಗುವುದು.

237. ಬೆಂಗಳೂರು ನಗರ ಜಿಲ್ಲೆ ಕೆಂಗೇರಿಯಲ್ಲಿ ಮಹಾತ್ಮ ಗಾಂಧೀಜಿಯವರು ಭೇಟಿ ನೀಡಿದ್ದ ಸ್ಥಳದಲ್ಲಿ ಸ್ಮಾರಕ ಭವನವನ್ನು ನಿರ್ಮಿಸಲು ರೂ.1 ಕೋಟಿ ನೀಡಲಾಗುವುದು.

238. ಕೊಪ್ಪಳ ಜಿಲ್ಲೆಯ ಆನೆಗೊಂದಿ ಉತ್ಸವದ ವ್ಯವಸ್ಥೆಗೆ ರೂ.2 ಕೋಟಿ ಒದಗಿಸಲಾಗುವುದು.

239. ಗಡಿ ಪ್ರದೇಶಗಳ ಅಭಿವೃದ್ಧಿ ಪ್ರಾಧಿಕಾರದ ಚಟುವಟಿಕೆಗಳಿಗಾಗಿ ರೂ.10 ಕೋಟಿ ಒದಗಿಸಲಾಗುವುದು.

240. ರಾಷ್ಟ್ರಪ್ರಶಸ್ತಿ ಪುರಸ್ಕೃತರಿಗೆ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತ ಪ್ರಯಾಣದ ವ್ಯವಸ್ಥೆ ಮಾಡಲಾಗುವುದು.

241. ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳ ಪ್ರಾತಿನಿಧಿಕ ಕೃತಿಗಳ ಸಂಕಲನಗಳನ್ನು ಪ್ರಕಟಿಸಲು ಈ ವರ್ಷದ ಆಯವ್ಯಯದಲ್ಲಿ ರೂ.1 ಕೋಟಿ ನೀಡಲಾಗುವುದು. ಜ್ಞಾನಪೀಠ ಪ್ರಶಸ್ತಿ ವಿಜೇತರ ಗ್ರಂಥಗಳನ್ನು ಇಂಗ್ಲೀಷ್ ಮತ್ತು ಇತರ ಭಾಷೆಗಳಿಗೆ ಭಾಷಾಂತರ ಮಾಡಲು ವ್ಯವಸ್ಥೆ ಮಾಡಲಾಗುವುದು.

242. ಸಾಹಿತಿಗಳು ಹಾಗೂ ಕಲಾವಿದರುಗಳು ತಮ್ಮ ಕ್ಷೇತ್ರದಲ್ಲಿ ನಿರ್ದಿಷ್ಟ ವಿಷಯದ ಬಗ್ಗೆ ಹೆಚ್ಚಿನ ಸಂಶೋಧನೆ ಅಥವಾ ಅಧ್ಯಯನ ಮಾಡಲು ಸಾಧ್ಯವಾಗುವಂತೆ ಸಂಬಂಧಪಟ್ಟ ಅಕಾಡೆಮಿಗಳ ವತಿಯಿಂದ ತಲಾ 5 ಜನರಿಗೆ ಪ್ರತಿವರ್ಷವೂ ಫೆಲೋಷಿಪ್ ನೀಡುವ ಯೋಜನೆಯನ್ನು ಜಾರಿಗೆ ತರಲಾಗುವುದು. ಹಿರಿಯ ಸಾಹಿತಿ / ಕಲಾವಿದರಿಗೆ ಮಾಸಿಕ ರೂ.10,000ದಂತೆ ಒಂದು ವರ್ಷಕಾಲ ಈ ಫೆಲೋಷಿಪ್ ನೀಡಲಾಗುವುದು.

243. ಬೆಳಗಾವಿಯಲ್ಲಿ ಕನ್ನಡ ಸಾಂಸ್ಕೃತಿಕ ಭವನ ನಿರ್ಮಾಣಕ್ಕಾಗಿ ರೂ.2 ಕೋಟಿ ನೀಡಲಾಗುವುದು.

244. ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಬೆಂಗಳೂರು ಹಬ್ಬವನ್ನು ಆಚರಿಸಲು ರೂ.2 ಕೋಟಿ ನೀಡಲಾಗುವುದು.

245. ಹುಬ್ಬಳ್ಳಿಯಲ್ಲಿ ಗಂಗೂಬಾಯಿ ಹಾನಗಲ್ ಸಂಗೀತ ವಿದ್ಯಾಲಯದ ನಿರ್ವಹಣೆಗಾಗಿ ರೂ.1 ಕೋಟಿ ನೀಡಲಾಗುವುದು.

ವಾರ್ತಾ ಇಲಾಖೆ

246. ಕನ್ನಡ ಚಲನಚಿತ್ರೋದ್ಯಮದ ಅಮೃತೋತ್ಸವ ಭವನ ನಿರ್ಮಾಣಕ್ಕಾಗಿ ಈಗಾಗಲೇ ಅಗತ್ಯ ನಿವೇಶನವನ್ನು ನೀಡಲಾಗಿದ್ದು ಕಟ್ಟಡದ ನಿರ್ಮಾಣಕ್ಕಾಗಿ ರೂ.5 ಕೋಟಿ ಅನುದಾನ ನೀಡಲಾಗುವುದು.

247. ಚಿತ್ರನಟ ವಿಷ್ಣುವರ್ಧನ್ ಅವರ ಸ್ಮಾರಕದ ನಿರ್ಮಾಣಕ್ಕಾಗಿ ರೂ.10 ಕೋಟಿ ನೀಡಲಾಗುವುದು. ಡಾ॥ ರಾಜಕುಮಾರ್ ಸ್ಮಾರಕ ಭವನದ ನಿರ್ಮಾಣದ ಮುಂದುವರಿದ ಕಾಮಗಾರಿಗಾಗಿ ರೂ.4 ಕೋಟಿ ಬಿಡುಗಡೆ ಮಾಡಲಾಗುವುದು.

248. ಚಿತ್ರೋದ್ಯಮದ ಕಲಾವಿದರು ಹಾಗೂ ಕಾರ್ಮಿಕರ ಕ್ಷೇಮಾಭಿವೃದ್ಧಿ ನಿಧಿಗೆ ರೂ.50 ಲಕ್ಷ ವಂತಿಗೆ ನೀಡಲಾಗುವುದು.

249. ಬೆಂಗಳೂರಿನಲ್ಲಿ ಪತ್ರಿಕಾ/ಮಾಧ್ಯಮ ಭವನ ನಿರ್ಮಾಣಕ್ಕಾಗಿ ರೂ.5 ಕೋಟಿ ನೀಡಲಾಗುವುದು. ಜಿಲ್ಲಾ ಕೇಂದ್ರಗಳಲ್ಲಿ ಮಾಧ್ಯಮ ಭವನಗಳನ್ನು ನಿರ್ಮಿಸಲು ರೂ.3 ಕೋಟಿ ನೀಡಲಾಗುವುದು.

250. ರಾಜ್ಯದ ಮಾಧ್ಯಮ ಅಕಾಡೆಮಿಯ ವಿವಿಧ ಚಟುವಟಿಕೆಗಳಿಗಾಗಿ ರೂ.1 ಕೋಟಿ ಒದಗಿಸಲಾಗುವುದು.

251. ಪತ್ರಕರ್ತರಿಗೆ ಹಾಲಿ ನೀಡುತ್ತಿರುವ ಮಾಸಾಶನವನ್ನು ರೂ.1000 ದಿಂದ ರೂ.2000ಕ್ಕೆ ಏರಿಸಲಾಗುವುದು.

ಯುವಜನ ಸೇವೆ ಮತ್ತು ಕ್ರೀಡೆ

252. 2010-11ನೆಯ ಸಾಲಿನಲ್ಲಿ ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆಗೆ ಒಟ್ಟು ರೂ.98 ಕೋಟಿ ಅನುದಾನವನ್ನು ಒದಗಿಸಲಾಗಿದ್ದು, ಕ್ರೀಡಾ ಚಟುವಟಿಕೆಗಳಿಗೆ ಲಭ್ಯವಿರುವ ಮೂಲಸೌಕರ್ಯಗಳನ್ನು ಉತ್ತಮ ಪಡಿಸಲು ಹಲವು ಚಟುವಟಿಕೆಗಳನ್ನು ಹಮ್ಮಿಕೊಂಡಿದೆ.

253. ಮೈಸೂರು, ಶಿವಮೊಗ್ಗ ಹಾಗೂ ಗುಲಬರ್ಗ ನಗರಗಳಲ್ಲಿ ಅಥ್ಲೆಟಿಕ್ಸ್ ಪಂದ್ಯಾವಳಿಗಳಿಗಾಗಿ ಸಿಂಥೆಟಿಕ್ ಟ್ರ್ಯಾಕ್ ಒದಗಿಸಲು ರೂ.5 ಕೋಟಿ ವಿನಿಯೋಗಿಸಲಾಗುವುದು.

254. ನೂತನ ಜಿಲ್ಲಾ ಕೇಂದ್ರವಾದ ಯಾದಗಿರಿಯಲ್ಲಿ ಸ್ಟೇಡಿಯಂ ನಿರ್ಮಿಸಲು ರೂ.2 ಕೋಟಿ ಒದಗಿಸಲಾಗುವುದು.

255. ಗ್ರಾಮಾಂತರ ಪ್ರದೇಶಗಳಲ್ಲಿ ಗರಡಿ ಮನೆಗಳ ಅಭಿವೃದ್ಧಿಗಾಗಿ ರೂ.2 ಕೋಟಿ ಒದಗಿಸಲಾಗುವುದು.

ಕಂದಾಯ ಇಲಾಖೆ

256. ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ನೀರಾವರಿ, ವಸತಿ, ಕೈಗಾರಿಕೆ, ಮುಂತಾದ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಗೊಳ್ಳುತ್ತಿದ್ದು, ಭೂಸ್ವಾಧೀನ ಪ್ರಕರಣಗಳು ಅಂತಿಮ ಅಧಿಸೂಚನೆಗೆ ಅನುಮೋದನೆ ನೀಡುವ ಅಧಿಕಾರವನ್ನು ಪ್ರಾದೇಶಿಕ ಆಯುಕ್ತರುಗಳಿಗೆ ಪ್ರತ್ಯಾಯೋಜಿಸಲು ನಿರ್ಧರಿಸಲಾಗಿದೆ. ಇದಲ್ಲದೆ, ಜಿಲ್ಲಾಧಿಕಾರಿಗಳಿಗೆ ಭೂಸ್ವಾಧೀನ ಪ್ರಕರಣಗಳಲ್ಲಿ ಕಾನೂನಿನ ಸಲಹೆ ನೀಡಲು

ಪ್ರತಿಯೊಂದು ಜಿಲ್ಲೆಯಲ್ಲಿಯೂ ನಿವೃತ್ತ ನ್ಯಾಯಾಧೀಶರ ನೆರವನ್ನು ಪಡೆಯಲಾಗುವುದು.

257. ಸರ್ಕಾರದಿಂದ ವಿವಿಧ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಮಂಜೂರು ಮಾಡಿರುವ ಎಲ್ಲ ಸರ್ಕಾರಿ ಜಮೀನಿನ ಮೋಜಣಿ ಮಾಡಲು ಮತ್ತು ಅವುಗಳ ಎಲ್ಲೆಗಳನ್ನು ಗುರುತಿಸಲು 2010–11ರಲ್ಲಿ ಮೋಜಣಿ ಅಭಿಯಾನವನ್ನು ಕೈಗೊಳ್ಳಲು ರೂ.5 ಕೋಟಿ ಒದಗಿಸಿದೆ.

258. ಈಗಾಗಲೇ ರಾಜ್ಯದ 5 ನಗರಗಳಲ್ಲಿ ಜಿ.ಐ.ಎಸ್.ಆಧಾರಿತ ಮೋಜಣಿ ಮೂಲಕ ಆಸ್ತಿಗಳ ನಕ್ಷೆ ನಿರೂಪಣೆ ಮಾಡುತ್ತಿದ್ದು, ಈ ಕಾರ್ಯವನ್ನು ಮುಂದಿನ ವರ್ಷ ಇನ್ನೂ 10 ನಗರಗಳಿಗೆ ವಿಸ್ತರಿಸಲಾಗುವುದು.

259. ಬೆಳಗಾವಿಯಲ್ಲಿ ನಿರ್ಮಿಸಲಾಗುತ್ತಿರುವ ಸುವರ್ಣ ಸೌಧದ ಕಾಮಗಾರಿಯು ಭರದಿಂದ ಸಾಗುತ್ತಿದ್ದು 2010–11ರಲ್ಲಿ ಇದನ್ನು ಪೂರ್ಣಗೊಳಿಸಲು ರೂ.150 ಕೋಟಿ ಒದಗಿಸಲಾಗುತ್ತಿದೆ.

260. ನೂತನ ಜಿಲ್ಲೆಗಳಾದ ಯಾದಗೀರ ಮತ್ತು ಚಿಕ್ಕಬಳ್ಳಾಪುರದಲ್ಲಿ ಹಾಗೂ ಬಳ್ಳಾರಿಯಲ್ಲಿ ಜಿಲ್ಲಾ ಸಂಕೀರ್ಣಗಳನ್ನು ನಿರ್ಮಿಸಲು ಮತ್ತು ಈಗಾಗಲೇ ನಿರ್ಮಾಣ ಹಂತದಲ್ಲಿರುವ ಜಿಲ್ಲಾ ಸಂಕೀರ್ಣಗಳನ್ನು ಪೂರ್ಣಗೊಳಿಸಲು ರೂ.30 ಕೋಟಿ ಒದಗಿಸಲಾಗಿದೆ. ತಾಲ್ಲೂಕು ಮಟ್ಟದ ಮಿನಿ ವಿಧಾನ ಸೌಧಗಳ ನಿರ್ಮಾಣಕ್ಕಾಗಿ ರೂ.25 ಕೋಟಿ ಒದಗಿಸಿದೆ.

ಮುಜರಾಯಿ ಇಲಾಖೆ

261. ರಾಜ್ಯದಲ್ಲಿರುವ ಒಟ್ಟು 27,000 ದೇವಸ್ಥಾನಗಳು ಮತ್ತು ಮುಜರಾಯಿ ಸಂಸ್ಥೆಗಳಿಗೆ ನೀಡಲಾಗುತ್ತಿರುವ ತಸದೀಕ್ ಭತ್ಯವನ್ನು ಮಾಸಿಕ ರೂ.600 ರಿಂದ ರೂ.1000ಕ್ಕೆ ಏರಿಸಲಾಗುವುದು.

262. ಕೂಡಲಸಂಗಮ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.5 ಕೋಟಿ ಮತ್ತು ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ಬಾಕಿ ಕಾಮಗಾರಿಗಳಿಗಾಗಿ ರೂ.5 ಕೋಟಿ ಒದಗಿಸಲಾಗುವುದು.

263. ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಕಾಮಗಾರಿಗಳಿಗಾಗಿ ರೂ.10 ಕೋಟಿ ಹಾಗೂ ಶ್ರವಣಬೆಳಗೊಳ ಬಾಹುಬಲಿ ಕ್ಷೇತ್ರದ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.5 ಕೋಟಿ ಒದಗಿಸಲಾಗಿದೆ.

264. ಎಡೆಯೂರು ಸಿದ್ಧಲಿಂಗೇಶ್ವರ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗಾಗಿ ರೂ.10 ಕೋಟಿ ಒದಗಿಸಲಾಗಿದೆ.

265. ತಿರುಪತಿಯಲ್ಲಿ ಕರ್ನಾಟಕದ ಯಾತ್ರಿಗಳ ಸೌಕರ್ಯಕ್ಕಾಗಿ ಅತಿಥಿ ಗೃಹ ನಿರ್ಮಿಸಲು ಈ ವರ್ಷ ರೂ.5 ಕೋಟಿ ನೀಡಲಾಗುತ್ತಿದೆ.

266. ಶಬರಿಮಲೈನಲ್ಲಿ ಕರ್ನಾಟಕದ ಯಾತ್ರಿಗಳ ಉಪಯೋಗಕ್ಕಾಗಿ ಅತಿಥಿ ಗೃಹವನ್ನು ನಿರ್ಮಿಸಲು ರೂ.5 ಕೋಟಿ ನೀಡಲಾಗುತ್ತಿದೆ.

267. ಮಾನಸ ಸರೋವರದ ಯಾತ್ರಿಗಳಿಗೆ ನೀಡುತ್ತಿರುವ ಅನುದಾನವನ್ನು ರೂ.3 ಕೋಟಿಗೆ ಹೆಚ್ಚಿಸಲಾಗುತ್ತಿದೆ.

268. ಗುಲ್ಬರ್ಗಾ ಜಿಲ್ಲೆಯ ದೇವಲಘಾಣಗಾಪುರದಲ್ಲಿ ದತ್ತಾತ್ರೇಯ ಕ್ಷೇತ್ರದ ಅಭಿವೃದ್ಧಿಗಾಗಿ ರೂ.2 ಕೋಟಿ ನೀಡಲಾಗುವುದು.

269. ನಾಗಮಂಗಲ ತಾಲ್ಲೂಕಿನಲ್ಲಿ ಆದಿಚುಂಚನಗಿರಿ ಕ್ಷೇತ್ರದ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ರೂ.5 ಕೋಟಿ ನೀಡಲಾಗುವುದು.

270. ಚಿಕ್ಕಮಗಳೂರು ಜಿಲ್ಲೆಯ ರಂಭಾಪುರಿ ಶ್ರೀ ಸೋಮೇಶ್ವರ ಕ್ಷೇತ್ರದ ಅಭಿವೃದ್ಧಿಗಾಗಿ ರೂ.3 ಕೋಟಿ ನೀಡಲಾಗುವುದು. ಅದೇ ಜಿಲ್ಲೆಯ ಹರಿಹರಪುರ ಕ್ಷೇತ್ರದ ಅಭಿವೃದ್ಧಿಗಾಗಿ ರೂ.1 ಕೋಟಿ ನೀಡಲಾಗುವುದು.

271. ರಾಜ್ಯದ ಹೊರಗಡೆ ಇರುವ ಧಾರ್ಮಿಕ ಕ್ಷೇತ್ರಗಳಾದ ಮಂತ್ರಾಲಯ, ಕಾಶಿ, ಹರಿದ್ವಾರ, ಮುಂತಾದ ಕಡೆಗಳಲ್ಲಿ ರಾಜ್ಯ ಸರ್ಕಾರದ ಅಧೀನದಲ್ಲಿರುವ ಅತಿಥಿ ಗೃಹಗಳ ನಿರ್ವಹಣೆಗಾಗಿ ಪ್ರತಿಯೊಂದಕ್ಕೆ ರೂ.25 ಲಕ್ಷ ಒದಗಿಸಲಾಗುವುದು.

ಗೃಹ ಇಲಾಖೆ

272. ಪೊಲೀಸ್ ಇಲಾಖೆಯ ಆಯವ್ಯಯವನ್ನು ಒಟ್ಟಾರೆ 2009–10ರ ರೂ.2092 ಕೋಟಿಗಳಿಂದ ರೂ.2345 ಕೋಟಿಗಳಿಗೆ ಹೆಚ್ಚಿಸಲಾಗುತ್ತಿದೆ.

273. ಮುಂದಿನ ವರ್ಷದಲ್ಲಿ ಪೊಲೀಸ್ ವಸತಿಗಳ ದುರಸ್ತಿ ಹಾಗೂ ನಿರ್ಮಾಣಕ್ಕಾಗಿ ತಲಾ ರೂ.25 ಕೋಟಿ ಮತ್ತು ರೂ.50 ಕೋಟಿ ಒದಗಿಸಲಾಗುತ್ತಿದೆ.

274. ಪೊಲೀಸ್ ಸಿಬ್ಬಂದಿಯು ರಜಾದಿನಗಳಲ್ಲಿ ಕರ್ತವ್ಯ ನಿರ್ವಹಿಸುವುದಕ್ಕಾಗಿ ನೀಡುತ್ತಿರುವ ಭತ್ಯೆಯನ್ನು ದಿನಕ್ಕೆ ರೂ.50 ರಿಂದ ರೂ.100ಕ್ಕೆ ಹೆಚ್ಚಿಸಲಾಗುವುದು.

275. ಮಂಗಳೂರಿನ ನೂತನ ಪೋಲೀಸ್ ಕಮಿಷನರ್ ಕಚೇರಿಯ ಸ್ಥಾಪನೆ ಹಾಗೂ ಸಿಬ್ಬಂದಿಗಾಗಿ ರೂ.5 ಕೋಟಿ ಮತ್ತು ಧಾರವಾಡ ಹುಬ್ಬಳ್ಳಿ ಕಮಿಷನರ್ ಘಟಕದ ಅಭಿವೃದ್ಧಿಗಾಗಿ ರೂ.2 ಕೋಟಿ ಒದಗಿಸಲಾಗಿದೆ.

276. ಚಿಕ್ಕಮಗಳೂರಿನ ಕುದುರೆಮುಖದಲ್ಲಿ ಲಭ್ಯವಿರುವ ಕಟ್ಟಡ ಮುಂತಾದ ಮೂಲ ಸೌಲಭ್ಯಗಳನ್ನು ಉಪಯೋಗಿಸಿ ಕಮಾಂಡೋ ತರಬೇತಿ ಕೇಂದ್ರವನ್ನು ಸ್ಥಾಪಿಸಲು ರೂ.5 ಕೋಟಿ ವಿನಿಯೋಗಿಸಲಾಗುವುದು.

277. ರಾಜ್ಯದಲ್ಲಿ ನೂತನ ಅಗ್ನಿಶಾಮಕ ಘಟಕಗಳನ್ನು ಸ್ಥಾಪಿಸಲು ಕೆ–ಸೇಫ್ ಯೋಜನೆಯಡಿ ರೂ.25 ಕೋಟಿ ಒದಗಿಸಲಾಗುವುದು. ಬೃಹತ್ ನಗರಗಳಲ್ಲಿ ಬಹುಮಹಡಿ ಕಟ್ಟಡಗಳಿಗೆ ಅಗ್ನಿಶಾಮಕ ಸೇವೆ ಒದಗಿಸಲು ಮೂರು ಏರಿಯಲ್ ಪ್ಲಾಟ್‌ಫಾರಂಗಳ ಖರೀದಿಗಾಗಿ ರೂ.10 ಕೋಟಿ ಒದಗಿಸಲಾಗುವುದು.

278. ಅಗ್ನಿಶಾಮಕ ದಳದ ಕಲ್ಯಾಣ ನಿಧಿಯನ್ನು ಸ್ಥಾಪಿಸಲು ರೂ.25 ಲಕ್ಷ ನೀಡಲಾಗುವುದು.

279. ಧಾರವಾಡ, ಮಂಗಳೂರು, ರಾಯಚೂರು, ಕೋಲಾರ, ಬೀದರ್, ಮೈಸೂರು, ದಾವಣಗೆರೆ, ಬಳ್ಳಾರಿ ಮತ್ತು ಹಾಸನ ನಗರಗಳ ಮಧ್ಯದಲ್ಲಿರುವ ಜಿಲ್ಲಾ ಕಾರಾಗೃಹಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸಲು ರೂ.40 ಕೋಟಿ ಒದಗಿಸಲಾಗುವುದು. ರಾಜ್ಯದಲ್ಲಿ ಕಾರಾಗೃಹಗಳ ಆಧುನೀಕರಣಕ್ಕಾಗಿ ರೂ.5 ಕೋಟಿ ಒದಗಿಸಲಾಗುವುದು.

ಸೈನಿಕರ ಕಲ್ಯಾಣ

280. ರಾಜ್ಯದ ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಭೂಸೇನೆ, ವಾಯುಪಡೆ ಹಾಗೂ ನೌಕಾ ಪಡೆಗಳ ಸೈನಿಕರು ಹಾಗೂ ಮಾಜಿ ಯೋಧರ ಆಸ್ತಿ ತೆರಿಗೆಯನ್ನು ಮನ್ನಾ ಮಾಡಬೇಕೆಂಬ ಬೇಡಿಕೆಯನ್ನು ಬಹಳ ಕಾಲದಿಂದ ಮಂಡಿಸಲಾಗುತ್ತಿದೆ. ಸೈನಿಕರು ಹಾಗೂ ಮಾಜಿ ಯೋಧರು ಅಥವಾ ಅವರ ಕುಟುಂಬಗಳು ವಾಸಿಸುತ್ತಿರುವ ಸ್ವಂತ ಮನೆಯ ಆಸ್ತಿ ತೆರಿಗೆಯಲ್ಲಿ 2010–11ರಿಂದ ಜಾರಿಗೆ ಬರುವಂತೆ ಶೇ.50 ರಷ್ಟು ವಿನಾಯಿತಿ ನೀಡಲು ನಿರ್ಧರಿಸಿದೆ. ಸಂಬಂಧಪಟ್ಟ ನಗರಪಾಲಿಕೆ ಮತ್ತು ಇತರ ಸ್ಥಳೀಯ ಸಂಸ್ಥೆಗಳಿಗೆ ಈ ವಿಷಯದಲ್ಲಿ ಸರ್ಕಾರದಿಂದ ಸೂಕ್ತ ಪರಿಹಾರ ಕಲ್ಪಿಸಲಾಗುವುದು.

ಕಾನೂನು ಇಲಾಖೆ

281. ಹುಬ್ಬಳ್ಳಿಯಲ್ಲಿ ಸ್ಥಾಪಿಸಲಾಗಿರುವ ಕಾನೂನು ವಿಶ್ವವಿದ್ಯಾನಿಲಯದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ರೂ.10 ಕೋಟಿ ಒದಗಿಸಲಾಗುವುದು.

282. ಬೆಂಗಳೂರಿನ ನ್ಯಾಯಾಲಯ ಸಂಕೀರ್ಣದಲ್ಲಿ ರಾಜ್ಯ ವಕೀಲರ ಸಂಘದ ಕಟ್ಟಡ ನಿರ್ಮಿಸಲು ರೂ.2 ಕೋಟಿ ಒದಗಿಸಲಾಗುವುದು.

283. ರಾಜ್ಯದ ನ್ಯಾಯಾಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ ಮತ್ತು ಪೀಠೋಪಕರಣಗಳಿಗಾಗಿ ರೂ.10 ಕೋಟಿ ನೀಡಲಾಗುವುದು ಮತ್ತು ನ್ಯಾಯಾಲಯಗಳಿಗೆ ಡಿಜಿಟಲ್ ಗ್ರಂಥಾಲಯದ ಸೌಲಭ್ಯವನ್ನು ಒದಗಿಸಲು ರೂ.1 ಕೋಟಿ ನೀಡಲಾಗುವುದು.

284. ಕರ್ನಾಟಕ ವಕೀಲರ ಕ್ಷೇಮಾಭಿವೃದ್ಧಿ ನಿಧಿಗೆ ರೂ.50 ಲಕ್ಷ ಅನುದಾನ ನೀಡಲಾಗುವುದು.

ಸಾರಿಗೆ ಇಲಾಖೆ

285. ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಸಣ್ಣ ಪಟ್ಟಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಮೂಲಸೌಲಭ್ಯಗಳನ್ನು ಒದಗಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಿಗೆ ತಲಾ ರೂ.25 ಕೋಟಿ ಒದಗಿಸಲಾಗುವುದು.

ಪ್ರವಾಸೋದ್ಯಮ

286. ರಾಜ್ಯದಲ್ಲಿ ಪ್ರವಾಸೋದ್ಯಮದ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ 2010–11ರಲ್ಲಿ ರೂ.204 ಕೋಟಿಗಳ ಅನುದಾನವನ್ನು ಒದಗಿಸಲಾಗುತ್ತಿದೆ. ಪ್ರತಿಯೊಂದು ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳಲ್ಲಿ ಪ್ರವಾಸಿಗಳಿಗೆ ಅಗತ್ಯವಾದ ಸೌಲಭ್ಯಗಳನ್ನು ಕಲ್ಪಿಸಲು ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಿ ಖಾಸಗಿ ಸಹಭಾಗಿತ್ವದೊಡನೆ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸಲಾಗುವುದು.

287. ಜಗದ್ವಿಖ್ಯಾತವಾದ ವಿಶ್ವಪರಂಪರೆ ಶ್ರೇಣಿಯ ಹಂಪೆಯಲ್ಲಿ ವಿಜಯನಗರ ಸಾಮ್ರಾಜ್ಯದ ಭವ್ಯ ಪರಂಪರೆಯನ್ನು ಬಿಂಬಿಸಲು ರೂ.50 ಕೋಟಿ ವೆಚ್ಚದಲ್ಲಿ 'ಥೀಮ್ ಪಾರ್ಕ್' ಒಂದನ್ನು ನಿರ್ಮಿಸಲಾಗುವುದು.

288. ಪ್ರಸಿದ್ಧ ಪ್ರವಾಸಿ ಕ್ಷೇತ್ರವಾದ ಶೃಂಗೇರಿಯಲ್ಲಿ ರಸ್ತೆ ಹಾಗೂ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ರೂ.5 ಕೋಟಿ ನೀಡಲಾಗುವುದು.

289. ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ರಾಜ್ಯದ 100 ಆಯ್ದ ಪ್ರವಾಸಿ ಕೇಂದ್ರಗಳಲ್ಲಿ ಹೋಟೆಲ್ ನಿರ್ಮಿಸುವ ಉದ್ಯಮಿಗಳಿಗೆ 5 ಎಕರೆವರೆಗೆ ಕೃಷಿ ಭೂಮಿಯನ್ನು ಖರೀದಿಸಲು .ಅನುಮತಿ ನೀಡಲಾಗುವುದು ಮತ್ತು ಶೇ.10ರ ದರದಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸಾಲ ಒದಗಿಸಲಾಗುವುದು. ಇಂತಹ ಉದ್ಯಮಗಳಿಗೆ 3 ವರ್ಷಗಳ ಕಾಲ ವ್ಯಾಟ್ ತೆರಿಗೆಯಿಂದ ವಿನಾಯಿತಿ ನೀಡಲಾಗುವುದು.

ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ

290. ಬೆಂಗಳೂರಿನಲ್ಲಿ ಪ್ರಾರಂಭಿಸಲಾದ 'ಬೆಂಗಳೂರು ಒನ್' ನಾಗರೀಕ ಸೇವಾ ಕೇಂದ್ರಗಳು ಅತ್ಯಂತ ಜನಪ್ರಿಯವಾಗಿದ್ದು ಸದ್ಯದ 60 ಕೇಂದ್ರಗಳನ್ನು 2010–11ರಲ್ಲಿ ಇಮ್ಮಡಿಗೊಳಿಸಲಾಗುವುದು. ರಾಜ್ಯದ ಇತರ ನಗರಗಳಲ್ಲಿ 'ಕರ್ನಾಟಕ ಒನ್' ಹೆಸರಿನ ನಾಗರಿಕ ಸೇವಾ ಕೇಂದ್ರಗಳನ್ನು ಮತ್ತು ನಾಗರಿಕ ಮಾಹಿತಿ ಜಾಲವನ್ನು ಸ್ಥಾಪಿಸಲು ರೂ.6 ಕೋಟಿ ವಿನಿಯೋಗಿಸಲಾಗುವುದು.

291. ಇ–ಆಡಳಿತ ಇಲಾಖೆಯ ನೆರವಿನಿಂದ ಪ್ರಾರಂಭಿಸಲಾದ ಇ–ಟೆಂಡರ್ ಪದ್ಧತಿಯು ಅತ್ಯಂತ ಯಶಸ್ವಿಯಾಗಿದ್ದು ಈವರೆಗೆ ರೂ.20,000 ಕೋಟಿ ಮೊತ್ತದ ಕಾಮಗಾರಿಗಳಿಗೆ ಇದನ್ನು ಬಳಸಲಾಗಿದೆ. ಈ ಪದ್ಧತಿಗೆ ರಾಷ್ಟ್ರೀಯ ಇ–ಆಡಳಿತ ಪ್ರಶಸ್ತಿ ಮತ್ತು ಕಂಪ್ಯೂಟರ್ ಸೊಸೈಟಿ ಆಫ್ ಇಂಡಿಯಾದ ನಿಹಿಲೆಂಟ್ ಪ್ರಶಸ್ತಿ ದೊರೆತಿರುವುದು ಹೆಮ್ಮೆಯ ಸಂಗತಿ. ಈ ಪದ್ಧತಿಯನ್ನು ಸರ್ಕಾರದ ಎಲ್ಲಾ ಕಾಮಗಾರಿ ಟೆಂಡರುಗಳಿಗೆ ಕಡ್ಡಾಯ ಮಾಡಲಾಗುವುದು.

292. ನಮ್ಮ ಸರ್ಕಾರಿ ಸ್ವಾಮ್ಯದ ಸಾರಿಗೆ ಸಂಸ್ಥೆಗಳಲ್ಲಿ ಎಲೆಕ್ಟ್ರಾನಿಕ್ ಟಿಕೆಟ್‌ಗಳನ್ನು ವಿತರಿಸುವ ಪದ್ಧತಿಯನ್ನು ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಅಳವಡಿಸಿವೆ. ಇತ್ತೀಚೆಗೆ ಅಂತರ್ಜಾಲದ ಮೂಲಕ ಸಾರಿಗೆ ಸಂಸ್ಥೆಗಳ ಮುಂಗಡ ಕಾಯ್ದಿರಿಸುವಿಕೆಯ 'ಅವತಾರ್' ಪದ್ಧತಿಗೆ ರಾಷ್ಟ್ರೀಯ ಬಹುಮಾನ ದೊರೆತಿದೆ. ರಾಜ್ಯದ ಖಜಾನೆಯಲ್ಲಿ ಹಿಂದೆ ಅಳವಡಿಸಲಾಗಿದ್ದ ತಂತ್ರಾಂಶ ವನ್ನು ಉನ್ನತೀಕರಿಸಲು ಹೊಸ ತಂತ್ರಾಂಶವನ್ನು ಅಳವಡಿಸಲಾಗುತ್ತಿದೆ.

ಆಡಳಿತ ಯಂತ್ರದ ಆಧುನೀಕರಣ

293. 2009-10ರ ಮುಂಗಡ ಪತ್ರದಲ್ಲಿ ಘೋಷಿಸಿದ ಅನುಷ್ಠಾನ ಪರ್ವದ ಕಾರ್ಯಕ್ರಮದಂತೆ ರಾಜ್ಯದ ಆಡಳಿತ ಯಂತ್ರದ ದಕ್ಷತೆಯನ್ನು ಹೆಚ್ಚಿಸಲು ಹಲವಾರು ಕ್ರಮಗಳನ್ನು ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮಗಳ ಅನುಷ್ಠಾನವನ್ನು 2010-11ರಲ್ಲಿ ಮುಂದುವರಿಸಿ ಪೂರ್ಣಗೊಳಿಸಲಾಗುವುದು.

294. ಪ್ರತಿಯೊಂದು ಇಲಾಖೆಯ ನೌಕರರಿಗೆ ಪ್ರತಿವರ್ಷವೂ ವ್ಯವಸ್ಥಿತವಾಗಿ ತರಬೇತಿ ಒದಗಿಸುವುದರಿಂದ ಅವರ ದಕ್ಷತೆ ಹಾಗೂ ಸಾಮರ್ಥ್ಯಗಳನ್ನು ಹೆಚ್ಚಿಸಬೇಕಾಗಿದೆ. ತರಬೇತಿ ವೆಚ್ಚಕ್ಕಾಗಿ ಪ್ರತ್ಯೇಕ ಅನುದಾನವನ್ನು ಒದಗಿಸಲಾಗುವುದು.

295. ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ, ಮೂಲಸೌಲಭ್ಯಗಳ ಇಲಾಖೆ, ಕೈಗಾರಿಕಾ ಇಲಾಖೆ, ಮುಂತಾದವುಗಳ ಮೂಲಕ ಕೈಗೊಳ್ಳಬೇಕಾದ ಹಲವು ಯೋಜನೆಗಳಿಗೆ ಯೋಜನಾ ವರದಿಗಳನ್ನು ಸಿದ್ಧಪಡಿಸಲು ತಜ್ಞ ಸಂಸ್ಥೆಗಳ ಮತ್ತು ವ್ಯಕ್ತಿಗಳ ಸಹಾಯವನ್ನು ಪಡೆಯುವುದರಿಂದ ಉತ್ತಮ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ಅದರಂತೆ, ಯೋಜನೆಗಳ ಅನುಷ್ಠಾನದ ಪ್ರಕ್ರಿಯೆ ಮತ್ತು ಫಲಿತಾಂಶಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿ ಮೌಲ್ಯಮಾಪನ ಮಾಡುವುದರಿಂದ ಯೋಜನೆಗಳ ದೋಷಗಳನ್ನು ಸರಿಪಡಿಸಿ ಹೆಚ್ಚು ಅರ್ಥಪೂರ್ಣವಾದ ಸಾಧನೆಯನ್ನು ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ಎಲ್ಲಾ ಇಲಾಖೆಗಳಿಗೆ ಯೋಜನಾ ವರದಿಗಳನ್ನು ತಯಾರಿಸಲು ಮತ್ತು ಮೌಲ್ಯಮಾಪನ ಮಾಡಲು ವಿಶೇಷ ಅನುದಾನವನ್ನು ಒದಗಿಸಲಾಗುವುದು.

296. ಕಳೆದ ವರ್ಷ ಪ್ರಾರಂಭಿಸಲಾದ ಜನಸ್ಪಂದನ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನಡೆದಿದ್ದು ಗ್ರಾಮಾಂತರ ಪ್ರದೇಶಗಳ ಕುಂದುಕೊರತೆಗಳ ನಿವಾರಣೆಗೆ ಮಾಡಿದ ಬಹುದೊಡ್ಡ ಪ್ರಯತ್ನವಾಗಿದೆ. ಈ ಆಂದೋಲನವನ್ನು ಪ್ರತಿ ತಿಂಗಳ ಮೊದಲನೇ ಶನಿವಾರದಂದು ಹೋಬಳಿ ಮಟ್ಟದಲ್ಲಿ ನಡೆಸುವ ಕ್ರಮವನ್ನು ಮುಂದುವರಿಸಲಾಗುವುದು. ಪ್ರತಿ ಸೋಮವಾರ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಸರ್ಕಾರಿ ಕಛೇರಿಗಳಲ್ಲಿ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಉಪಸ್ಥಿತರಿದ್ದು ಸಾರ್ವಜನಿಕ ಕುಂದು ಕೊರತೆಗಳನ್ನು ವಿಚಾರಿಸಲು ಮೀಸಲಾಗಿಡುವ ವ್ಯವಸ್ಥೆ ಮಾಡಲಾಗುವುದು.

297. ಸರ್ಕಾರದ ವಿವಿಧ ಇಲಾಖೆಗಳ ಕಾಮಗಾರಿಗಳ ಅನುಷ್ಠಾನದಲ್ಲಿ ಹೆಚ್ಚಿನ ಮಿತವ್ಯಯವನ್ನು ಸಾಧಿಸುವ ಅವಶ್ಯಕತೆ ಇದೆ. ಆದ್ದರಿಂದ ಕಾಮಗಾರಿ ಇಲಾಖೆಗಳ ದರಪಟ್ಟಿಗಳನ್ನು ವೈಜ್ಞಾನಿಕವಾಗಿ ಪರಿಷ್ಕರಿಸಲು ಮತ್ತು ಕಾಮಗಾರಿಗಳಿಗೆ ಅತ್ಯಂತ ಮಿತವ್ಯಯದ ವಿನ್ಯಾಸ ಹಾಗೂ ಕಾರ್ಯವಿಧಾನಗಳನ್ನು ಅಳವಡಿಸುವ ಬಗ್ಗೆ ತಜ್ಞರ ಸಲಹೆ ಪಡೆದು ಕಾರ್ಯಗತಗೊಳಿಸಲಾಗುವುದು.

298. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನುಷ್ಠಾನ ಮಾಡುತ್ತಿರುವ ರೂ.50 ಕೋಟಿಗೂ ಮೀರಿದ ಎಲ್ಲಾ ಕಾಮಗಾರಿ/ಯೋಜನೆಗಳ ಪ್ರಗತಿಯನ್ನು ಪ್ರತಿ ಮಾಹೆಯೂ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಸಮಿತಿಯೊಂದರ ಮೂಲಕ ಪರಿಶೀಲಿಸಲಾಗುವುದು.

299. ವಿವಿಧ ಇಲಾಖೆಗಳಲ್ಲಿ ಮಿತವ್ಯಯ ಸಾಧಿಸಲು ಹಾಗೂ ದಕ್ಷತೆಯನ್ನು ಹೆಚ್ಚಿಸುವ ಬಗ್ಗೆ ವೆಚ್ಚ ಸುಧಾರಣಾ ಆಯೋಗವು ನೀಡಿರುವ ಶಿಫಾರಸ್ಸುಗಳನ್ನು ಪರಿಶೀಲಿಸಲಾಗುತ್ತಿದ್ದು ಅವುಗಳ ತ್ವರಿತ ಅನುಷ್ಠಾನ ಮಾಡಲಾಗುವುದು.

300. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಲವು ಹುದ್ದೆಗಳು ತೆರವಾಗಿದ್ದು ಇತರ ಇಲಾಖೆಗಳಲ್ಲಿ ಮತ್ತು ಕೆಲವು ಸಾರ್ವಜನಿಕ ಉದ್ಯಮಗಳಲ್ಲಿ ಹೆಚ್ಚುವರಿ ಸಿಬ್ಬಂದಿ ಇರುವುದು ಕಂಡುಬಂದಿದೆ. ಇಂತಹ ಹೆಚ್ಚುವರಿ ಸಿಬ್ಬಂದಿಯನ್ನು ಅಗತ್ಯವಿರುವ ಇಲಾಖೆಗಳಿಗೆ ಕಡ್ಡಾಯವಾಗಿ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸರ್ಕಾರಿ ನೌಕರರು

301. ಸರ್ಕಾರಿ ನೌಕರರ ವರ್ಗಾವಣೆ ಪ್ರಕ್ರಿಯೆಯನ್ನು ಸರಳಗೊಳಿಸಲು 'ಸಿ' ಮತ್ತು 'ಡಿ' ಗುಂಪಿನ ನೌಕರರ ವರ್ಗಾವಣೆಯ ಅಧಿಕಾರವನ್ನು ಇಲಾಖಾ ಮುಖ್ಯಸ್ಥರಿಗೆ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ವಹಿಸಲಾಗುವುದು. ಸರ್ಕಾರದ ಮಟ್ಟದಲ್ಲಿ 'ಎ' ಮತ್ತು 'ಬಿ' ಗುಂಪಿನ ಅಧಿಕಾರಿಗಳ ವರ್ಗಾವಣೆಯನ್ನು ಮಾತ್ರ ನಿರ್ವಹಿಸಲಾಗುವುದು.

302. 'ಡಿ' ಗುಂಪಿನ ಸರ್ಕಾರಿ ನೌಕರರಿಗೆ ಹಿಂದೆ ನೀಡುತ್ತಿದ್ದಂತೆ ಸಮವಸ್ತ್ರ ಭತ್ಯೆಯನ್ನು ಮುಂದುವರಿಸಲಾಗುವುದು.

303. ನಿವೃತ್ತ ಸರ್ಕಾರಿ ನೌಕರರಿಗೆ ನೀಡುವ ನಿವೃತ್ತಿ ಉಪದಾನದ ಮೇಲಿನ ಮಿತಿಯನ್ನು ರೂ. 3 ಲಕ್ಷದಿಂದ ರೂ. 6 ಲಕ್ಷಕ್ಕೆ ಏರಿಸಲಾಗುವುದು.

304. ನಿವೃತ್ತ ಸರ್ಕಾರಿ ನೌಕರರ ದೂರು-ಸಮಸ್ಯೆಗಳನ್ನು ಪರಿಶೀಲಿಸಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಣ್ಣ ಉಳಿತಾಯ ಇಲಾಖೆಯನ್ನು ಪಿಂಚಣಿ ಇಲಾಖೆಯಾಗಿ ಪರಿವರ್ತಿಸಲಾಗುವುದು. ಇದರಿಂದ ಜಿಲ್ಲಾ ಮಟ್ಟದವರೆಗೆ ಪಿಂಚಣಿದಾರರ ಸಮಸ್ಯೆಗಳಿಗೆ ಸ್ಪಂದಿಸಲು ವ್ಯವಸ್ಥೆ ಕಲ್ಪಿಸಲಾಗುವುದು.

2010-11ರ ರಾಜ್ಯ ಯೋಜನೆಯ ಅಂದಾಜುಗಳು

305. 2009-10ರ ಮುಂಗಡ ಪತ್ರದಲ್ಲಿ ರಾಜ್ಯದ ಯೋಜನೆಯ ಗಾತ್ರವನ್ನು ರೂ.29,500 ಕೋಟಿ ಎಂದು ಅಂದಾಜು ಮಾಡಲಾಗಿತ್ತು. ಈ ಪೈಕಿ ರೂ.22,480 ಕೋಟಿಯನ್ನು ರಾಜ್ಯದ ಸಂಚಿತ ನಿಧಿಯಿಂದಲೂ ಮತ್ತು ರೂ.7020 ಕೋಟಿಯನ್ನು ಸೆಸ್ ಮತ್ತು ಮುಂಗಡ ಪತ್ರದಿಂದ ಹೊರಗೆ ವಿವಿಧ ಸರ್ಕಾರಿ ಸಂಸ್ಥೆಗಳ ಸ್ವಂತ ಮೂಲಗಳಿಂದಲೂ ವೆಚ್ಚ ಮಾಡಲು ಉದ್ದೇಶಿಸಿತ್ತು. ಪರಿಷ್ಕೃತ ಅಂದಾಜುಗಳ ಪ್ರಕಾರ ಸಂಚಿತ ನಿಧಿಯಿಂದ ಸುಮಾರು ರೂ.21336 ಕೋಟಿ ಮತ್ತು ಸೆಸ್ ಹಾಗೂ ಮುಂಗಡ ಪತ್ರದ ಹೊರಗಿನ ಮೂಲಗಳಿಂದ ಸುಮಾರು ರೂ.4631 ಕೋಟಿ ಸೇರಿ ಒಟ್ಟು ರೂ.25,967 ಕೋಟಿ ಯೋಜನಾ ವೆಚ್ಚವನ್ನು ಪ್ರಸ್ತುತ ಸಾಲಿನಲ್ಲಿ ಮಾಡಬಹುದಾದ ನಿರೀಕ್ಷೆ ಇದೆ. 2007-08ರಲ್ಲಿ ಸಾಧಿಸಲಾದ ಒಟ್ಟು ಯೋಜನಾ ವೆಚ್ಚದ ರೂ.17,227 ಕೋಟಿ ಮತ್ತು 2008-09ರಲ್ಲಿ ಮಾಡಲಾದ ಯೋಜನಾ ವೆಚ್ಚದ ರೂ.22,577 ಕೋಟಿಗೆ ಹೋಲಿಸಿದರೆ 2009-10ರಲ್ಲಿ ಶೇ.51ರಷ್ಟು ಮತ್ತು ಶೇ.15ರಷ್ಟು ಯೋಜನಾ ವೆಚ್ಚದ ಹೆಚ್ಚಳ ಆಗಿರುವುದು ಗಮನಾರ್ಹವಾಗಿದೆ.

306. ರಾಜ್ಯದ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಯನ್ನು ತೀವ್ರಗತಿಯಲ್ಲಿ ಸಾಧಿಸಲು ಯೋಜನಾ ವೆಚ್ಚವನ್ನು ಪ್ರತಿವರ್ಷವೂ ಗಣನೀಯವಾಗಿ ಹೆಚ್ಚಿಸುವುದು ಅವಶ್ಯಕವಾಗಿದೆ. ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಅಗತ್ಯವಿರುವ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಮತ್ತು ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಲು ಅಗತ್ಯವಿರುವ ವೆಚ್ಚವನ್ನು ಗಮನದಲ್ಲಿಟ್ಟು 2010-11ರ ಯೋಜನಾ ಗಾತ್ರವನ್ನು ರೂ.31,000 ಕೋಟಿಗೆ ಏರಿಸಲು ನಿರ್ಧರಿಸಲಾಗಿದೆ. ಈ ಪೈಕಿ ರೂ.17,636 ಕೋಟಿಯನ್ನು ಬಂಡವಾಳ ವೆಚ್ಚವಾಗಿಯೂ ಮತ್ತು

ರೂ.13,364 ಕೋಟಿಯನ್ನು ರಾಜಸ್ವ ವೆಚ್ಚವಾಗಿಯೂ ವಿನಿಯೋಗಿಸಲಾಗುವುದು. ಯೋಜನಾ ವೆಚ್ಚದ ವಿವರಗಳನ್ನು ಅನುಬಂಧ-I ರಲ್ಲಿ ನೀಡಲಾಗಿದೆ. ಇದಲ್ಲದೆ, ಅಭಿವೃದ್ಧಿ ಯೋಜನೆಗಳಿಗಾಗಿ ರೂ.5,776 ಕೋಟಿ ಮೊತ್ತವನ್ನು ಆಯವ್ಯಯದ ಹೊರಗಿನ ಮೂಲಗಳಿಂದ ಸರ್ಕಾರದ ವಿವಿಧ ನಿಗಮಗಳು ಮತ್ತು ಪ್ರಾಧಿಕಾರಗಳಿಂದ ವೆಚ್ಚ ಮಾಡಲಾಗುವುದು.

13ನೆಯ ಹಣಕಾಸಿನ ಆಯೋಗದ ಶಿಫಾರಸ್ಸುಗಳು

307. ಹನ್ನೆರಡನೆಯ ಕೇಂದ್ರ ಹಣಕಾಸಿನ ಆಯೋಗದ ಶಿಫಾರಸ್ಸಿನ ಅನ್ವಯ 2005-10ರ ಅವಧಿಯಲ್ಲಿ ಕರ್ನಾಟಕಕ್ಕೆ ಕೇಂದ್ರ ತೆರಿಗೆ ಆದಾಯದ ರಾಜ್ಯಗಳ ಭಾಗಾಂಶದಲ್ಲಿ ಶೇ.4.46ರ ಪಾಲು ದೊರೆಯುತ್ತಿತ್ತು. 2010-15ಕ್ಕೆ ಅನ್ವಯಿಸುವ ಹದಿಮೂರನೇ ಹಣಕಾಸಿನ ಆಯೋಗದ ವರದಿಯಲ್ಲಿ ಹಿಂದಿನ ಅವಧಿಯ ಶೇ.30.5ಕ್ಕೆ ಬದಲಾಗಿ ಕೇಂದ್ರದ ಒಟ್ಟು ತೆರಿಗೆಗಳ ಶೇ.32ರಷ್ಟು ರಾಜ್ಯಗಳಿಗೆ ನೀಡಬೇಕೆಂದು ಶಿಫಾರಸ್ಸು ಮಾಡಿದ್ದು ಕರ್ನಾಟಕದ ಭಾಗಾಂಶವನ್ನು ಶೇ.4.33ಕ್ಕೆ ನಿಗದಿ ಮಾಡಲಾಗಿದೆ. ಇದರಿಂದ 2009-10ರಲ್ಲಿ ರಾಜ್ಯಕ್ಕೆ ದೊರೆಯಬಹುದಾದ ರೂ.7,000 ಕೋಟಿ ಭಾಗಾಂಶಕ್ಕೆ ಪ್ರತಿಯಾಗಿ 2010-11ರಲ್ಲಿ ಅಂದಾಜು ರೂ.9,060 ಕೋಟಿ ಲಭ್ಯವಾಗುವ ನಿರೀಕ್ಷೆ ಇದೆ. ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ರಾಜ್ಯ ಸರ್ಕಾರಗಳು ವಹಿಸಬೇಕಾದ ಮಹತ್ತರ ಪಾತ್ರಕ್ಕೆ ಹೋಲಿಸಿದರೆ ಆಯೋಗವು ರಾಜ್ಯಗಳಿಗೆ ಶಿಫಾರಸ್ಸು ಮಾಡಿರುವ ಶೇ.32ರ ಭಾಗಾಂಶವು ಸಾಲದೆನಿಸುತ್ತದೆ. ವಿಶೇಷವಾಗಿ ಕರ್ನಾಟಕ ರಾಜ್ಯದ ಆಡಳಿತ ಕ್ಷೇತ್ರದ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ವೆಚ್ಚದ ಅಗತ್ಯಗಳನ್ನು ಪೂರೈಸಲು ಮೇಲ್ಕಂಡ ಭಾಗಾಂಶದ ಸಹಾಯವು ಸಾಲದಾಗುವುದೆಂದು ಹೇಳಬೇಕಾಗಿದೆ.

ಬಂಡವಾಳ ಸ್ವೀಕೃತಿ

308. ಮೇಲೆ ವಿವರಿಸಲಾದ ಹಿನ್ನೆಲೆಯಲ್ಲಿ ರಾಜ್ಯದ ಬಂಡವಾಳ ವೆಚ್ಚವನ್ನು ಹೆಚ್ಚಿಸುವ ದೃಷ್ಟಿಯಿಂದ ಸಾಲವಲ್ಲದ ಬಂಡವಾಳ ಸ್ವೀಕೃತಿಗಳನ್ನು ಕ್ರೋಢೀಕರಿಸುವುದು ಅಗತ್ಯವಾಗಿದೆ. ಇದಕ್ಕಾಗಿ 2010-11ನೆಯ ಸಾಲಿನಲ್ಲಿ ಉತ್ತಮ ಬೆಲೆಗೆ ನಿರ್ದಿಷ್ಟ ಪ್ರಮಾಣದಲ್ಲಿ ಸರ್ಕಾರಿ ಭೂಮಿಯ ಮಾರಾಟ ಮಾಡಲು ಪ್ರಯತ್ನಿಸಲಾಗುವುದು. ಅದರಂತೆ ಸರ್ಕಾರಿ ಉದ್ಯಮಗಳಲ್ಲಿ

ಸರ್ಕಾರದ ಬಂಡವಾಳವನ್ನು ಕಡಿಮೆ (Disinvest) ಮಾಡುವುದರಿಂದ ಸದರಿ ಉದ್ಯಮಗಳನ್ನು ಹೆಚ್ಚು ಲಾಭದಾಯಕವಾಗಿ ನಡೆಸಲು ಸಾಧ್ಯವಾಗುವುದಲ್ಲದೆ, ಇದರಿಂದ ಬಂಡವಾಳ ವೆಚ್ಚಕ್ಕಾಗಿ ಸಂಪನ್ಮೂಲಗಳನ್ನು ಸಂಗ್ರಹಿಸಲು ಸಾಧ್ಯವಾಗುವುದು. ಸರ್ಕಾರವು ನೀಡಿದ ಸಾಲಗಳ ಮರುಪಾವತಿಯೂ ಸೇರಿದಂತೆ 2010-11ರಲ್ಲಿ ಒಟ್ಟು ರೂ.2,903 ಕೋಟಿ ಸಾಲವಲ್ಲದ ಬಂಡವಾಳ ಸ್ವೀಕೃತಿಗಳನ್ನು ಸಂಗ್ರಹಿಸಬಹುದೆಂದು ಅಂದಾಜು ಮಾಡಲಾಗಿದೆ.

ತೆರಿಗೆಯಲ್ಲದ ರಾಜಸ್ವ

309. ಕಳೆದ ಕೆಲವು ವರ್ಷಗಳಿಂದ ರಾಜ್ಯದ ನಿವ್ವಳ ತೆರಿಗೆಯಲ್ಲದ ರಾಜಸ್ವವು (Net Non Tax Revenue) ಸುಮಾರು ರೂ.2200 ಕೋಟಿಯಷ್ಟಿದ್ದು ಈ ಮೂಲದ ರಾಜಸ್ವದ ಬೆಳವಣಿಗೆಯನ್ನು ಸಾಧಿಸುವುದು ಅವಶ್ಯಕವಾಗಿದೆ. ರಾಜ್ಯ ಸರ್ಕಾರದ ಒತ್ತಾಯಪೂರ್ವಕ ಮನವಿಯಂತೆ 2009-10ರಲ್ಲಿ ಕೇಂದ್ರ ಸರ್ಕಾರವು ಚಿನ್ನ, ಕಬ್ಬಿಣದ ಅದಿರು, ಸುಣ್ಣಕಲ್ಲು ಮುಂತಾದ ಭಾರೀ ಖನಿಜಗಳ ಮೇಲಿನ ರಾಜ್ಯಾದಾಯವನ್ನು (Royalty) ಪರಿಷ್ಕರಿಸಿದ್ದು ಇದರಿಂದ ನಮ್ಮ ರಾಜ್ಯಕ್ಕೆ ಸ್ವಲ್ಪ ಮಟ್ಟಿಗೆ ಪ್ರಯೋಜನವಾಗಿದೆ. ಈ ಮೂಲದಿಂದ 2008-09ರಲ್ಲಿ ರೂ.556 ಕೋಟಿ ರಾಜಸ್ವವು ಪ್ರಾಪ್ತವಾಗಿದ್ದರೆ, 2009-10ರಲ್ಲಿ ಇದು ರೂ.720 ಕೋಟಿಗೆ ಏರುವ ನಿರೀಕ್ಷೆ ಇದೆ. ಇದಲ್ಲದೆ, ಖನಿಜದ ಅದಿರು, ಮುಂತಾದ ವಸ್ತುಗಳನ್ನು ಸಾಗಾಟಮಾಡುವ ಭಾರೀ ವಾಹನಗಳಿಂದ ರಾಜ್ಯದ ರಸ್ತೆ ಸಂಪರ್ಕ ವ್ಯವಸ್ಥೆಯ ನಿರ್ವಹಣಾ ವೆಚ್ಚವು ತೀವ್ರವಾಗಿ ಹೆಚ್ಚುತ್ತಿದ್ದು ಇಂತಹ ವಾಹನಗಳಿಗೆ ಸೂಕ್ತ ರಸ್ತೆ ಶುಲ್ಕವನ್ನು ವಿಧಿಸುವುದು ಅವಶ್ಯಕವಾಗಿದೆ. ಆದ್ದರಿಂದ ಯಂತ್ರೋಪಕರಣಗಳನ್ನು ಹೊರತುಪಡಿಸಿ ಇತರ ಸಾಮಗ್ರಿಗಳನ್ನು ತುಂಬಿದ 16 ಟನ್‌ಗಳಿಗಿಂತಲೂ ಹೆಚ್ಚಿನ ಭಾರವಿರುವ ಪ್ರತಿಯೊಂದು ವಾಹನಕ್ಕೆ ಪ್ರತಿಬಾರಿಗೆ ರೂ.500ರಂತೆ ರಸ್ತೆ ಶುಲ್ಕವನ್ನು ವಿಧಿಸಲು ಪ್ರಸ್ತಾವಿಸುತ್ತೇನೆ.

ತೆರಿಗೆ ಪ್ರಸ್ತಾವನೆಗಳು

310. 'ಕೋಶಪೂರ್ವಾಃ ಸರ್ವಾರಂಭಾಃ। ತಸ್ಮಾತ್ ಪೂರ್ವಂ ಕೋಶಮವೇಕ್ಷೇತ' ಎಂಬ ಕೌಟಿಲ್ಯನ ಅರ್ಥಶಾಸ್ತ್ರದ ಸೂತ್ರೋಕ್ತಿಯಲ್ಲಿ ಸರ್ಕಾರದ ಎಲ್ಲಾ ಕಾರ್ಯಕ್ರಮಗಳು ಪ್ರಗತಿಯು ತೆರಿಗೆಯ ವರಮಾನವನ್ನು

ಅವಲಂಬಿಸಿದ್ದು ಅಭಿವೃದ್ಧಿ ಸಾಧನೆಯ ದೃಷ್ಟಿಯಿಂದ ಸಂಪನ್ಮೂಲಗಳ ಸಂಗ್ರಹಣೆಗೆ ಸರ್ಕಾರವು ವಿಶೇಷ ಗಮನವನ್ನು ನೀಡುವುದು ಅವಶ್ಯಕವಾಗಿದೆ.

311. 2009–10ರ ಆಯವ್ಯಯದಲ್ಲಿ ರಾಜ್ಯದ ಸ್ವಂತ ತೆರಿಗೆ ವರಮಾನವು ರೂ.32,721 ಕೋಟಿ ಆಗುವುದೆಂದು ಮುಂಗಡ ಪತ್ರದಲ್ಲಿ ಅಂದಾಜು ಮಾಡಲಾಗಿತ್ತು. ಈಗಾಗಲೇ ಪ್ರಸ್ತಾಪಿಸಿದ ಕಾರಣಗಳಿಂದಾಗಿ ಪರಿಷ್ಕೃತ ಅಂದಾಜಿನಂತೆ ತೆರಿಗೆ ಸಂಗ್ರಹವು ರೂ.29,339 ಕೋಟಿ ಆಗುವ ನಿರೀಕ್ಷೆ ಇದೆ. ಮುಂಗಡ ಪತ್ರದ ಅಂದಾಜಿಗೆ ಹೋಲಿಸಿದರೆ ವರಮಾನವು ಕಡಿಮೆ ಆಗುವುದಾದರೂ, 2009–10ರ ರಾಜ್ಯದ ಸ್ವಂತ ತೆರಿಗೆ ಸಂಗ್ರಹವು 2008–09ರ ಸಂಗ್ರಹ ರೂ.27,646 ಕೋಟಿಗಿಂತಲೂ ಶೇ.6 ರಷ್ಟು ಹೆಚ್ಚಾಗಲಿದೆ. ವಿಶೇಷವಾಗಿ ಅಬಕಾರಿ ಆದಾಯದಲ್ಲಿ 2009–10ರಲ್ಲಿ ಶೇ.17 ರಷ್ಟು ಬೆಳವಣಿಗೆಯನ್ನು ಸಾಧಿಸಿದ್ದು ವಾಣಿಜ್ಯ ತೆರಿಗೆಗಳಲ್ಲಿ ಶೇ.5 ರಷ್ಟು ಮತ್ತು ಮೋಟಾರು ವಾಹನ ತೆರಿಗೆಗಳಲ್ಲಿ ಶೇ.7 ರಷ್ಟು ಬೆಳವಣಿಗೆ ಕಂಡುಬಂದಿದೆ. ಮುದ್ರಾಂಕ ತೆರಿಗೆಯನ್ನು ಶೇ.7.5ರಿಂದ ಶೇ.6ಕ್ಕೆ ಇಳಿಸಿದುದರ ಪರಿಣಾಮವಾಗಿ ಮತ್ತು ಆಸ್ತಿ ವಹಿವಾಟುಗಳಲ್ಲಿ ಇಳಿಕೆ ಕಂಡುಬಂದಿರುವುದರಿಂದ ಮುದ್ರಾಂಕ ಹಾಗೂ ನೊಂದಣಿ ಮೂಲದಿಂದ ಸಂಗ್ರಹಿಸಿದ ತೆರಿಗೆ ಆದಾಯದಲ್ಲಿ ಶೇ.8 ರಷ್ಟು ಇಳಿಕೆ ಆಗಿರುತ್ತದೆ.

ವಾಣಿಜ್ಯ ತೆರಿಗೆಗಳು : ಮೌಲ್ಯವರ್ಧಿತ ತೆರಿಗೆ

312. ಕರ್ನಾಟಕ ರಾಜ್ಯವು ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯನ್ನು 2004–05ರಿಂದ ಅಳವಡಿಸಿದ ರಾಜ್ಯಗಳ ಮುಂಚೂಣಿಯಲ್ಲಿರುತ್ತದೆ. ಶೇ.12.5, ಶೇ.4, ಮತ್ತು ಶೇ.1ರ ದರಗಳಲ್ಲಿ ಇತರ ಹಲವು ರಾಜ್ಯಗಳಂತೆ ಕರ್ನಾಟಕವು ಮೌಲ್ಯವರ್ಧಿತ ತೆರಿಗೆಯನ್ನು ಸಂಗ್ರಹಿಸುತ್ತಾ ಬಂದಿದೆ. 2010–11ರಿಂದ ನೂತನ ಸರಕು ಮತ್ತು ಸೇವೆಗಳ ತೆರಿಗೆ (GST) ಪದ್ಧತಿಯನ್ನು ಜಾರಿಗೆ ತರುವ ನಿರ್ಧಾರವನ್ನು 2011ರ ಏಪ್ರಿಲ್‌ಗೆ ಮುಂದೂಡಲಾಗಿದ್ದು ಮುಂದಿನ ಒಂದು ವರ್ಷದಲ್ಲಿ ಈ ಹೊಸ ತೆರಿಗೆ ಪದ್ಧತಿಯನ್ನು ಅಳವಡಿಸಲು ರಾಜ್ಯವು ಸನ್ನದ್ಧವಾಗಬೇಕಾಗಿದೆ.

313. ಮೇಲ್ಕಂಡ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ತೆರಿಗೆ ಅನುವರ್ತನೆಯನ್ನು (Tax compliance)ಹೆಚ್ಚಿಸಲು ಮತ್ತು ತೆರಿಗೆದಾರರಿಗೆ ಅನುಕೂಲವಾಗುವಂತೆ ನಮ್ಮ ತೆರಿಗೆ ಪದ್ಧತಿಯಲ್ಲಿ ಕೆಲವು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲು ನಾನು ಉದ್ದೇಶಿಸಿದ್ದೇನೆ. ಈ ವಿಷಯದಲ್ಲಿ ವಾಣಿಜ್ಯೋದ್ಯಮ ಸಂಘಸಂಸ್ಥೆಗಳ

ಪ್ರತಿನಿಧಿಗಳೊಡನೆ ಚರ್ಚಿಸಿರುವುದಲ್ಲದೆ, ಅವರ ಮನವಿಗಳನ್ನು ಪರಿಶೀಲಿಸಲಾಗಿದ್ದು, ಈ ಕೆಳಗಿನ ಕೆಲವು ಸುಧಾರಣಾ ಪ್ರಸ್ತಾವನೆಗಳನ್ನು ಹಾಗೂ ಪರಿಹಾರಗಳನ್ನು ಮಂಡಿಸಲು ಇಚ್ಛಿಸುತ್ತೇನೆ.

1. ಆಹಾರಧಾನ್ಯಗಳಾದ ಭತ್ತ, ಅಕ್ಕಿ, ಗೋಧಿ, ಬೇಳೆಕಾಳುಗಳು, ಅಕ್ಕಿ ಮತ್ತು ಗೋಧಿಯ ಪದಾರ್ಥಗಳ ಮೇಲೆ ಸಂಪೂರ್ಣ ತೆರಿಗೆ ವಿನಾಯ್ತಿಯನ್ನು ಮತ್ತೊಂದು ವರ್ಷದ ಕಾಲ ಮುಂದುವರೆಸಲು ಪ್ರಸ್ತಾಪಿಸುತ್ತೇನೆ.
2. ಈಗ ಶೇ.12.5ರಷ್ಟು ತೆರಿಗೆ ಗುಂಪಿನಲ್ಲಿರುವ ಸಾಂಬಾರ ಪದಾರ್ಥಗಳು, ಮಸಾಲೆ ಪುಡಿ ಮಿಶ್ರಣಗಳು, ಗೋಧಿ ಉತ್ಪನ್ನವಾದ ಶಾವಿಗೆಗೆ ಸಮನಾದ ಮ್ಯಾಕರೋನಿ, ಕ್ರೀಡಾ ಪಾರಿತೋಷಕ ಟ್ರೋಫಿಗಳು, ಫಲಕಗಳು ಮತ್ತು ಪದಕಗಳು, ಎಲ್ಲಾ ತರಹದ ನಿರುಪಯುಕ್ತ (ಸ್ಕ್ರ್ಯಾಪ್) ವಸ್ತುಗಳು, 15 ಕೆ.ವಿ.ಎ.ಗಿಂತ ಕಡಿಮೆ ಸಾಮರ್ಥ್ಯದ ವಿದ್ಯುತ್ ಜನರೇಟರ್‌ಗಳು, ರೇಲ್ವೆ ಕಾಂಕ್ರೀಟ್ ಸ್ಲೀಪರ್‌ಗಳು, ಇವುಗಳ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ಶೇ.12.5ರಿಂದ ಶೇ.5ಕ್ಕೆ ಇಳಿಸಲು ಪ್ರಸ್ತಾವಿಸುತ್ತೇನೆ.
3. ವಿದ್ಯಾರ್ಥಿಗಳ ಉಪಯೋಗಕ್ಕಾಗಿ ರೂ.200ಕ್ಕೆ ಮೀರದ ಬೆಲೆಯ ಶಾಲಾ ಕೈಚೀಲಗಳ ಮೇಲಿನ ತೆರಿಗೆಯನ್ನು ಶೇ.12.5ರಿಂದ ಶೇ.5ಕ್ಕೆ ಇಳಿಸಲು ಪ್ರಸ್ತಾವಿಸುತ್ತೇನೆ.
4. ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಅಡಿಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಲು ವಹಿವಾಟಿನ ಕನಿಷ್ಠ ಮಿತಿಯನ್ನು ರೂ.2 ಲಕ್ಷದಿಂದ ರೂ.5 ಲಕ್ಷಕ್ಕೆ ಏರಿಸಲು ಉದ್ದೇಶಿಸಿದೆ.
5. ವ್ಯಾಪಾರಿಗಳಿಗೆ ರಾಜಿ ತೆರಿಗೆ ಪಾವತಿ (ಕಾಂಪೊಸಿಷನ್) ಯೋಜನೆಗೆ ಆಯ್ಕೆ ಮಾಡಲು ನಿಗದಿ ಮಾಡಿದ ಗರಿಷ್ಠ ವಹಿವಾಟು ಮಿತಿಯನ್ನು ರೂ.15 ಲಕ್ಷದಿಂದ ರೂ.25 ಲಕ್ಷಕ್ಕೆ ಏರಿಸಲು ಪ್ರಸ್ತಾವಿಸುತ್ತೇನೆ.
6. ವ್ಯಾಪಾರಿಗಳು ತಮ್ಮ ಲೆಕ್ಕ ಪುಸ್ತಕಗಳನ್ನು ಕಡ್ಡಾಯವಾಗಿ ಪರಿಶೋಧನೆಗೆ (ಆಡಿಟ್) ಒಳಪಡಿಸಿಕೊಳ್ಳಲು ಇರುವ ವಹಿವಾಟಿನ ಮಿತಿಯನ್ನು ರೂ.40 ಲಕ್ಷ ದಿಂದ ರೂ.60 ಲಕ್ಷಕ್ಕೆ ಏರಿಸಲು ಪ್ರಸ್ತಾವಿಸುತ್ತೇನೆ.

7. ಔಷಧಿ ವ್ಯಾಪಾರಿಗಳು ಸಾಮಾನ್ಯವಾಗಿ ಮಾರಾಟ ಮಾಡುವ ಔಷಧೇತರ ಸರಕುಗಳ ಮೇಲೆ ಗರಿಷ್ಠ ಚಿಲ್ಲರೆ ಬೆಲೆಯ (MRP) ಆಧಾರದ ಮೇಲೆ ತೆರಿಗೆ ಪಾವತಿಸಲು ಅವಕಾಶ ನೀಡಲು ಸೂಕ್ತ ತಿದ್ದುಪಡಿಯನ್ನು ತರಲಾಗುವುದು.
8. ತೆರಿಗೆದಾರರು ತಾವು . ಪಾವತಿಸಬೇಕಾದ ತೆರಿಗೆ ದರ ಮುಂತಾದುವುಗಳ ಬಗ್ಗೆ ಮುಂಗಡವಾಗಿ ಸ್ಪಷ್ಟೀಕರಣ ಅಥವಾ ಪೂರ್ವಭಾವಿ ನಿರ್ಣಯಗಳನ್ನು ಪಡೆಯಲು ಪೂರ್ವಭಾವಿ ನಿರ್ಣಯ ವ್ಯವಸ್ಥೆಯನ್ನು (Advance Ruling Mechanism) ರಚಿಸಲು ಉದ್ದೇಶಿಸಿದೆ.

ಅಧಿಕ ಸಂಪನ್ಮೂಲ ಸಂಗ್ರಹ ಕ್ರಮಗಳು

ಮಾನ್ಯ ಸಭಾಧ್ಯಕ್ಷರೇ,

314. ಕಳೆದ ನಾಲ್ಕು ವರ್ಷಗಳ ಮುಂಗಡ ಪತ್ರಗಳಲ್ಲಿ ಯಾವುದೇ ಗಣನೀಯ ಪ್ರಮಾಣದ ನೂತನ ತೆರಿಗೆ ಪ್ರಸ್ತಾವನೆಗಳನ್ನು ನಾನು ಸೇರಿಸಿರುವುದಿಲ್ಲ. ಈ ಅವಧಿಯಲ್ಲಿ ರಾಜ್ಯದ ಸ್ವಂತ ತೆರಿಗೆಗಳ ಸಂಗ್ರಹವು ಪ್ರತಿವರ್ಷವೂ ಸ್ವಲ್ಪಮಟ್ಟಿಗೆ ಹೆಚ್ಚುತ್ತಾ ಬಂದಿರುವುದಾದರೂ, ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅಗತ್ಯವಿರುವ ಬೃಹತ್ ಪ್ರಮಾಣದ ಬಂಡವಾಳ ಹೂಡಿಕೆಯನ್ನು ಈಡೇರಿಸಲು ನಮ್ಮ ತೆರಿಗೆ ಆದಾಯವನ್ನು ಇನ್ನಷ್ಟು ಹೆಚ್ಚಿಸುವ ಅಗತ್ಯವಿದೆ.

315. ಜಾಗತಿಕ ಆರ್ಥಿಕ ಹಿಂಜರಿತದ ಪ್ರತಿಕೂಲ ಪರಿಣಾಮದಿಂದಾಗಿ ರಾಜ್ಯದ ವಾಣಿಜ್ಯ ತೆರಿಗೆಗಳ ಸಂಗ್ರಹಣೆಯಲ್ಲಿ 2008–09 ಮತ್ತು 2009–10ರಲ್ಲಿ ನಿರೀಕ್ಷೆಯಷ್ಟು ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಗಿಲ್ಲ.

316. 2007–08ರ ಸಾಲಿನಿಂದ ಅನ್ವಯಿಸುವಂತೆ ಕೇಂದ್ರ ಸರ್ಕಾರವು ಕೇಂದ್ರದ ಮಾರಾಟ ತೆರಿಗೆಯ ದರಗಳನ್ನು ಶೇ.4 ರಿಂದ ಶೇ.3 ಹಾಗೂ ನಂತರ ಶೇ.2ಕ್ಕೆ ಇಳಿಸಿದ್ದು ಇದರಿಂದ ರಾಜ್ಯಗಳಿಗೆ ಉಂಟಾಗುವ ತೆರಿಗೆ ನಷ್ಟವನ್ನು ಭಾಗಶಃ ತುಂಬಿಸಲು ಕಡಿಮೆ ದರದ ಮೌಲ್ಯವರ್ಧಿತ ತೆರಿಗೆಯನ್ನು ಶೇ.4 ರಿಂದ 5ಕ್ಕೆ ಏರಿಸಬೇಕೆಂದು ರಾಜ್ಯಗಳಿಗೆ ಸೂಚಿಸಿತ್ತು. ಇದಲ್ಲದೆ, ಜವಳಿ ಹಾಗೂ ಸಕ್ಕರೆಯ ಮೇಲೆ ರಾಜ್ಯಗಳು ತೆರಿಗೆಯನ್ನು ವಿಧಿಸಬೇಕೆಂದು ಒಪ್ಪಲಾಗಿತ್ತು. ಕಾರಣಾಂತರಗಳಿಂದ ಈವರೆಗೆ ಮೇಲ್ಕಂಡಂತೆ

ತೆರಿಗೆಯನ್ನು ಹೆಚ್ಚಿಸಲು ಸಾಧ್ಯವಾಗಿರಲಿಲ್ಲ. ಈಗಾಗಲೇ ಹಲವು ರಾಜ್ಯಗಳು ಮೌಲ್ಯವರ್ಧಿತ ತೆರಿಗೆಯ ದರಗಳನ್ನು ಹೆಚ್ಚಿಸಿದ್ದು ನಮ್ಮ ರಾಜ್ಯದಲ್ಲಿಯೂ ಸಹ ಅಧಿಕ ಸಂಪನ್ಮೂಲಗಳ ಸಂಗ್ರಹದ ದೃಷ್ಟಿಯಿಂದ ತೆರಿಗೆಯ ದರಗಳನ್ನು ಪರಿಷ್ಕರಿಸುವುದು ಅವಶ್ಯಕವಾಗಿದೆ.

317. **ಮೌಲ್ಯವರ್ಧಿತ ತೆರಿಗೆಯಲ್ಲಿ ಏರಿಕೆ:** ಮೇಲ್ಕಂಡ ಕಾರಣಗಳಿಂದಾಗಿ ರಾಜ್ಯದ ಮೌಲ್ಯವರ್ಧಿತ ತೆರಿಗೆಯ ದರಗಳನ್ನು ಶೇ.12.5 ರಿಂದ ಶೇ.13.5ಕ್ಕೆ ಮತ್ತು ಶೇ.4 ರಿಂದ ಶೇ.5ಕ್ಕೆ ದಿನಾಂಕ 1.4.2010ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗುವುದು. ಆದರೆ, ಘೋಷಿತ ವಸ್ತುಗಳಾದ ಕಬ್ಬಿಣ, ಉಕ್ಕು, ಎಣ್ಣೆ ಬೀಜಗಳು, ಹತ್ತಿ, ಮುಂತಾದ ಪದಾರ್ಥಗಳ ಮೇಲಿನ ತೆರಿಗೆಯು ಶೇ.4ರಂತೆ ಮುಂದುವರಿಯುವುದು.

318. **ತಂಬಾಕು ಉತ್ಪನ್ನಗಳ ಮೇಲಿನ ತೆರಿಗೆ:** ತಂಬಾಕು ಉತ್ಪನ್ನಗಳ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ಶೇ.12.5ರಿಂದ ಶೇ.15ಕ್ಕೆ ಏರಿಸಲು ಉದ್ದೇಶಿಸಿದೆ. ಈ ಉತ್ಪನ್ನಗಳ ಚಿಲ್ಲರೆ ಮಾರಾಟದ ಹಂತದಲ್ಲಿ ಆಗುವ ಮೌಲ್ಯವರ್ಧನೆಯ ಮೇಲೆ ಸರ್ಕಾರಕ್ಕೆ ಬರಬೇಕಾದ ತೆರಿಗೆಯನ್ನು ಸಂಗ್ರಹಿಸಲು ಸಾಧ್ಯವಾಗುವಂತೆ ಸದರಿ ಉತ್ಪನ್ನಗಳ ಗರಿಷ್ಟ ಚಿಲ್ಲರೆ ಬೆಲೆಯ ಮೇಲೆ ತೆರಿಗೆಯನ್ನು ಸಂಗ್ರಹಿಸುವ ಪದ್ಧತಿಯನ್ನು ಜಾರಿಗೆ ತರಲು ತಿದ್ದುಪಡಿಯನ್ನು ಮಾಡಲಾಗುವುದು.

319. **ವಿಲಾಸ ತೆರಿಗೆಯಲ್ಲಿ ಹೆಚ್ಚಳ:** ದೈನಿಕ ರೂ.1000 ದಿಂದ ರೂ.2000ರವರೆಗೆ ಹೋಟೆಲ್‌ಗಳ ಕೊಠಡಿಗಳ ಬಾಡಿಗೆಯ ಮೇಲೆ ಶೇ.6 ರಿಂದ 8ಕ್ಕೆ ಮತ್ತು ರೂ.2000ಕ್ಕಿಂತ ಹೆಚ್ಚಿನ ಬಾಡಿಗೆಯ ಕೊಠಡಿಗಳ ಮೇಲೆ ಶೇ.10ರಿಂದ 12ಕ್ಕೆ ವಿಲಾಸಿ ತೆರಿಗೆಯನ್ನು ಏರಿಸಲು ಪ್ರಸ್ತಾವಿಸುತ್ತೇನೆ.

320. **ಸಕ್ಕರೆಯ ಮೇಲೆ ಪ್ರವೇಶ ತೆರಿಗೆ:** ಈಗಾಗಲೇ ಸಕ್ಕರೆಯ ಮೇಲೆ ಶೇ.1ರ ದರದಲ್ಲಿ ಪ್ರವೇಶ ತೆರಿಗೆ ಸಂಗ್ರಹಿಸಲಾಗುತ್ತಿದ್ದು ಇದನ್ನು ವಿತರಣೆದಾರರ ಹಂತಕ್ಕೆ ಬದಲಾಗಿ ಕಾರ್ಖಾನೆಗಳ ಹಂತದಲ್ಲಿ ಸಂಗ್ರಹಿಸಲು ಕಾನೂನಿನ ತಿದ್ದುಪಡಿ ಮಾಡಲಾಗುವುದು.

321. **ವಿದ್ಯುನ್ಮಾನ ವಿಧಾನದಲ್ಲಿ ದಾಖಲೆಗಳ ಸಲ್ಲಿಕೆ:** ತೆರಿಗೆದಾರರು ಎಲೆಕ್ಟ್ರಾನಿಕ್ ವಿಧಾನದ ಮೂಲಕ ತಮ್ಮ ತೆರಿಗೆ ವಿವರಪಟ್ಟಿಯನ್ನು ಸಲ್ಲಿಸಲು ಹಾಗೂ ಎಲೆಕ್ಟ್ರಾನಿಕ್ ವಿಧಾನದಿಂದ ತೆರಿಗೆ ಪಾವತಿಸಲು ಸಾಧ್ಯವಾಗುವಂತೆ

ಸಂಬಂಧಪಟ್ಟ ಅಧಿನಿಯಮಗಳಿಗೆ ತಿದ್ದುಪಡಿ ಮಾಡಲು ಉದ್ದೇಶಿಸಿದ್ದು, ಇದರಿಂದ ತೆರಿಗೆದಾರರಿಗೆ ಬಹಳಷ್ಟು ಅನುಕೂಲವಾಗಲಿದೆ.

322. ಮೇಲ್ಕಂಡ ತೆರಿಗೆ ಪರಿಷ್ಕರಣೆಗಳಿಂದ 2010–11ರಲ್ಲಿ ರೂ.1480 ಕೋಟಿ ಹೆಚ್ಚುವರಿ ಆದಾಯವನ್ನು ನಿರೀಕ್ಷಿಸಲಾಗಿದೆ.

ಮಾರಾಟ ತೆರಿಗೆ ಕರಸಮಾಧಾನ ಯೋಜನೆ

323. 2004–05ನೇ ಸಾಲಿನ ವರೆಗೆ ರಾಜ್ಯದಲ್ಲಿ ಎಲ್ಲ ಸರಕುಗಳಿಗೆ ಮಾರಾಟ ತೆರಿಗೆ ಇದ್ದು 2005–06ನೇ ಸಾಲಿನಿಂದ ಬಹುತೇಕ ಎಲ್ಲ ಸರಕುಗಳನ್ನು ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯಡಿಯಲ್ಲಿ ಸೇರಿಸಲಾಗಿದೆ. 2004–05ಕ್ಕೂ ಹಿಂದಿನ ವರ್ಷಗಳಿಗೆ ಸಂಬಂಧಿಸಿದ ಕರ್ನಾಟಕ ಮಾರಾಟ ತೆರಿಗೆ ಮತ್ತು ಕೇಂದ್ರ ಮಾರಾಟ ತೆರಿಗೆ ಬಾಬುಗಳಲ್ಲಿ ಸುಮಾರು ರೂ.498 ಕೋಟಿ ಮತ್ತು ಅದರ ಮೇಲಿನ ಬಡ್ಡಿ ಬಾಕಿ ಇರುತ್ತವೆ. ಇದರಲ್ಲಿ ನ್ಯಾಯಾಲಯದ ತಡೆಯಾಜ್ಞೆ, ಬಿ.ಐ.ಎಫ್.ಆರ್. ಪ್ರಕರಣಗಳು ಮುಂತಾದುವುಗಳ ಬಾಕಿ ಸೇರಿರುವುದಿಲ್ಲ. ವ್ಯಾಪಾರದಲ್ಲಿ ಸಂಭವಿಸಿರುವ ನಷ್ಟದಿಂದ, ವ್ಯಾಪಾರವು ಸ್ಥಗಿತಗೊಂಡಿರುವ ಕಾರಣದಿಂದ, ಅಥವಾ ಕರನಿರ್ಧರಣೆಯ ಬಗ್ಗೆ ನ್ಯಾಯಾಲಯದಲ್ಲಿ ಇರುವ ವಿವಾದ ಮುಂತಾದ ಕಾರಣಗಳಿಂದಾಗಿ ಈ ವರೆಗೆ ತೆರಿಗೆ ಪಾವತಿ ಮಾಡದಿರುವ ವ್ಯಾಪಾರಿಗಳಿಗೆ ಪರಿಹಾರ ನೀಡುವ ಸಲುವಾಗಿ ಕರಸಮಾಧಾನ ಯೋಜನೆಯೊಂದನ್ನು ಜಾರಿಗೆ ತರಲು ಉದ್ದೇಶಿಸಿದ್ದೇನೆ. ಇದರ ಅನ್ವಯ ಮೂಲ ತೆರಿಗೆಯ ಪೂರ್ಣ ಮೊತ್ತವನ್ನು ಜೂನ್ 30, 2010ರೊಳಗೆ ಪಾವತಿ ಮಾಡುವವರಿಗೆ ಈ ಯೋಜನೆಯಲ್ಲಿ ಬಡ್ಡಿ ಪಾವತಿಯಲ್ಲಿ ಪರಿಹಾರವನ್ನು ನೀಡಲಾಗುವುದು.

ಅಬಕಾರಿ

324. ಜುಲೈ 2007 ರಿಂದ ಸಾರಾಯಿ ಮಾರಾಟ ನಿಷೇಧ ನೀತಿಯನ್ನು ಸರ್ಕಾರವು ಜಾರಿಗೆ ತಂದಿದ್ದು, ತದನಂತರ ಮದ್ಯದ ಮೇಲೆ ಹೆಚ್ಚುವರಿ ಅಬಕಾರಿ ಸುಂಕದ ಏರಿಕೆ, ಸನ್ನದು ಶುಲ್ಕದ ಹೆಚ್ಚಳ, ಸನ್ನದುದಾರರ ಲಾಭಾಂಶ ಪರಿಷ್ಕರಣೆ, ಇತ್ಯಾದಿ ಪ್ರಮುಖ ನಿರ್ಧಾರಗಳನ್ನು ಹಿಂದಿನ ವರ್ಷಗಳಲ್ಲಿ ಸರ್ಕಾರವು ಜಾರಿಗೆ ತಂದಿರುತ್ತದೆ. 2009–10ನೇ ಸಾಲಿಗೆ ಅಬಕಾರಿ ಬಾಬ್ತಿನಿಂದ 6,565 ಕೋಟಿ ರೂ.ಗಳ ಆದಾಯ ಸಂಗಹಣೆ ಗುರಿ ನಿಗದಿಪಡಿಸಲಾಗಿದ್ದು, ಈ ಗುರಿಯನ್ನು ಮೀರಿ 2008–09ನೇ ಸಾಲಿನ

ರೂ.5792 ಕೋಟಿ ಸಂಗ್ರಹಣೆಯ ಮೇಲೆ ಸುಮಾರು ಶೇ.20ರಷ್ಟು ಬೆಳವಣಿಗೆ ನಿರೀಕ್ಷಿಸಲಾಗಿದೆ.

325. ಕಳೆದ ವರ್ಷಗಳಲ್ಲಿ ಜಾರಿಗೆ ತಂದ ಪ್ರಮುಖ ನೀತಿಗಳ ಕ್ರೋಢೀಕರಣದ ಉದ್ದೇಶ ಹೊಂದಿದ್ದು, ಈ ವರ್ಷದಲ್ಲಿ ಯಾವುದೇ ಹೆಚ್ಚಿನ ತೆರಿಗೆಗಳನ್ನು ಪ್ರಸ್ತಾಪಿಸಿರುವುದಿಲ್ಲ. ಆದಾಗ್ಯೂ, ಸಾಮಾನ್ಯ ಬೆಳವಣಿಗೆಯ ಮೂಲಕ ಮತ್ತು ಜಾರಿ ಮತ್ತು ತನಿಖಾ ಚಟುವಟಿಕೆಗಳನ್ನು ಇನ್ನೂ ಪರಿಣಾಮಕಾರಿಯಾಗಿ ಜಾರಿಗೆ ತರುವುದರಿಂದ 2009–10ನೇ ಸಾಲಿನ ಆದಾಯದ ಮೇಲೆ ಶೇ.10 ರಷ್ಟು ಬೆಳವಣಿಗೆಯನ್ನು ನಿರೀಕ್ಷಿಸಿದ್ದು, 2010–11ನೇ ಸಾಲಿನಲ್ಲಿ 7,500 ಕೋಟಿ ರೂ.ಗಳ ಅಬಕಾರಿ ಆದಾಯ ಸಂಗ್ರಹಣೆ ಅಂದಾಜು ಮಾಡಲಾಗಿದೆ.

ಅಬಕಾರಿ ಕರ ಸಮಾಧಾನ ಯೋಜನೆ

326. 2005–06 ನೇ ಸಾಲಿನಿಂದ ಯಾವುದೇ ಅಬಕಾರಿ ಬಾಕಿ ಉಳಿದಿರುವುದಿಲ್ಲ. ಅದಕ್ಕೂ ಹಿಂದಿನ ಅವಧಿಗೆ ಸಂಬಂಧಿಸಿದ 1947ರಿಂದ 2004–05ರವರೆಗೆ ಉಳಿದಿರುವ ಅಬಕಾರಿ ಬಾಕಿಯನ್ನು ವಸೂಲಿ ಮಾಡಲು ಸರ್ಕಾರವು ಈ ಹಿಂದೆ 2002 ಮತ್ತು 2006ನೇ ಸಾಲುಗಳಲ್ಲಿ ಎರಡು ಕರಸಮಾಧಾನ ಯೋಜನೆಗಳನ್ನು ಜಾರಿಗೆ ತಂದಿತ್ತು. ಸಾರಾಯಿ ಮಾರಾಟ ನಿಷೇಧದ ಹಿನ್ನೆಲೆಯಲ್ಲಿ, ದಶಕಗಳಿಂದ ಉಳಿದಿರುವ ಹೆಂಡ ಮತ್ತು ಸಾರಾಯಿ ಸಂಬಂಧಪಟ್ಟ ಅಬಕಾರಿ ಬಾಕಿಯನ್ನು ವಸೂಲು ಮಾಡಲು ಒಂದು ಹೊಸ ಕರಸಮಾಧಾನ ಯೋಜನೆಯನ್ನು ರೂಪಿಸಲು ಸರ್ಕಾರವು ಉದ್ದೇಶಿಸಿದೆ. ಅದರಂತೆ 30 ಜೂನ್ 2010ರೊಳಗೆ ಅಬಕಾರಿ ತೆರಿಗೆ, ಸಾರಾಯಿ / ಶೇಂದಿ ಗುತ್ತಿಗೆಯ ಬಾಕಿ, ಅಥವಾ ಇತರ ಅಬಕಾರಿ ಬಾಕಿಯ ಅಸಲಿನ ಮೊತ್ತವನ್ನು ಪಾವತಿ ಮಾಡುವವರಿಗೆ ಬಡ್ಡಿ ಹಾಗೂ ದಂಡ ಬಡ್ಡಿಯ ಪಾವತಿಯಲ್ಲಿ ಪರಿಹಾರ ನೀಡಲಾಗುವುದು.

ಮುದ್ರಾಂಕ ಮತ್ತು ನೋಂದಣಿ

